ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೪ | ಸೆಪ್ಟಂಬರ್ ೨೦೦೩ | ಸಂಚಿಕೆ ೩

ರೈತರ ಆತ್ಮಹತ್ಯೆಗಳು ವಿಕೃತ ಸಮಾಜದ ಕನ್ನಡಿ

-ಸುರೇಂದ್ರ ಕೌಲಗಿ

❖

ಶಿಕ್ಷಣ ವ್ಯವಸ್ಥೆಗೆ ಕಾಯಕಲ್ಪವಾಗಬೇಕು

-ಕೆ.ಪಿ. ಬಾಲಸುಬ್ರಮಣ್ಯ ಕಂಜರ್ಪಣೆ

❖

ಶಬ್ದ ಪ್ರಯೋಗಗಳಲ್ಲಿ ಅದ್ಭುತ ಶಕ್ತಿಯಿದೆ : ಎಚ್ಚರಿಕೆ !

-ವಿಶ್ವೇಶ್ವರ ಭಟ್

❖

ಜಾಗತೀಕರಣದ ಸಂದರ್ಭದಲ್ಲಿ ಗಾಂಧೀ ಏಕೆ ಪ್ರಸ್ತುತ ?

-ಪ್ರೊ. ಎನ್. ರಾಧಾಕೃಷ್ಣನ್

❖

ಸಾಮಾಜಿಕ ಋಣದ ಪರಿಕಲ್ಪನೆಯಿತ್ತ ಶಿವರಾಮ ಕಾರಂತರ ಜನ್ಮ ಶತಾಬ್ದಿ ನೆನಪು

-ಡಾ. ಸಿ.ಎನ್. ರಾಮಚಂದ್ರನ್

* ಈ ಸಂಚಿಕೆಯಲ್ಲಿ *

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೪

ಸಂಚಿಕೆ ೨

ಸೆಪ್ಟೆಂಬರ್ ೨೦೦೩

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ :

ವಾರ್ಷಿಕ	:	ರೂ. ೧೦೦/-
ಅರ್ಧ ವಾರ್ಷಿಕ	:	ರೂ. ೫೦/-
ಬಿಡಿ ಸಂಚಿಕೆ	:	ರೂ. ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್,(ರಿ.)

ಕಲ್ಯಾಣಿ ಬೀದಿ

ಮೇಲುಕೋಟೆ

ಜಿಲ್ಲಾ ಮಂಡ್ಯ - ೫೭೧ ೪೩೧

ದೂರವಾಣಿ :

೦೮೨೩೬-೨೯೮೭೫೪

ಬಾಯಾರಿ ಒಡೆದುಹೋಗಿರುವದು ನೆಲ
ಆಕಾಶ ಸೀಳಿ ನೀರಧಾರೆ ಸುರಿಸು
ಬಿಸಿಲು ಮಳೆ-ಗಾಳಿ ನೀರು ತೋರುವ ಕರುಣೆ
ತಪ್ಪಿತೋ ಋತುಚಕ್ರ ಬಂತು ನೆಲಕೆ ಬವಣೆ
ನಮ್ಮ ಕಂಬನಿಯಾವಿ ಮೋಡವಾಗಿದೆ ಅಲ್ಲಿ
ರಪರಪನೆ ಬಿದ್ದು ಜಲವ ಹರಿಸು
ಹನಿಹನಿಯಾಗಿ ಸಿಂಪಡಿಸಬೇಡ ದಮ್ಮಯ್ಯ
ಮುಸಲಧಾರೆಯಾಗಿ ಸುರಿಸು ಒಂದೆ ಸಮನೆ
ಹೊಸ ರೂಪಕದ ಗೊಡವೆ
ನಮಗೇಕೆ ದೊರೆಯೇ
ಹಳೆಯ ಜ್ಞಾಪಕದಲ್ಲಿ ಒತ್ತಿ ಒತ್ತಿ ಸ್ರವಿಸು
ಸುರಿಸು ನೆಲದಗಲ ಅಡ್ಡಡ್ಡ ಉದ್ದ ಗಾತ್ರ
ತುಂಬಿ ಹರಿಯಲಿ ಎಲ್ಲ ನದಿಯ ಪಾತ್ರ
ನೀರು ಸೇರಲಿ ಊರ ಸಂದಿಗೊಂದಿಗಳಲ್ಲಿ
ಪ್ರತಿ ಬೀದಿಗೊಂದೊಂದು ಅಘನಾಶಿನಿ
ನೆಲವೆಲ್ಲ ನೀರಾಗಿ ಪ್ರಲಯವಾದರು ಸರಿಯೆ
ತೊಳೆದು ಹೋಗಲಿ ಜನರ ಎಲ್ಲ ಪಾಪ
ಗುರುವೆ
ಮಳೆಯ ಸೇತುವೆ ಕಟ್ಟಿ ಆಗಸಕು ನೆಲಕೂ
ಮರಳಿ ಅವೆರಡನೂ ಒಂದುಗೂಡಿಸು ತಂದೆ.

ದೇಶ ಕುಲಕರ್ಣಿ

* * *

ಕೀರ್ತಿನಾಥ ಕುರ್ತುಕೋಟಿ ಎಂಥ ಮೆಮರಿ
ಟೇಪು ರಿಕಾರ್ಡರ್ ಅನ್‌ನೆಸೆಸರಿ

ವೈ.ಯೆನ್ಕೆ

(ವಿಜಯ ಕರ್ನಾಟಕ ಸಾಭಾರ)

ವಿಚಾರ ದೀಪ್ತಿ ....

ಹತ್ತು ಪುರುಷರಲ್ಲಿ ಎಂಟಕ್ಕಿಂತಲೂ ಹೆಚ್ಚು ಪುರುಷರು ತಮ್ಮ ಹೆಂಡಂದಿರ ಮೇಲೆ ಹಿಂಸಾಚಾರ ನಡೆಸುತ್ತಾರೆ. ಹತ್ತರಲ್ಲಿ ನಾಲ್ಕು ಜನರು ದೈಹಿಕ ಹಿಂಸೆಯನ್ನು ಮಾಡುತ್ತಾರೆ ಮತ್ತು ಇಬ್ಬರಲ್ಲಿ ಒಬ್ಬರು ಲೈಂಗಿಕ ಹಿಂಸಾಚಾರ ಮಾಡುತ್ತಾರೆ. ಮೂರರಲ್ಲಿ ಒಬ್ಬ ಪುರುಷನು ತಮ್ಮ ಹೆಂಡಂದಿರು ಗರ್ಭಿಣಿಯರಾದಾಗ ದೈಹಿಕ ಹಿಂಸಾಚಾರದಲ್ಲಿ ತೊಡಗುತ್ತಾರೆ. ನಾವು ನಮ್ಮ ದೇಶದ ಐವತ್ತೇಳನೆ ಸ್ವಾತಂತ್ರ್ಯೋತ್ಸವವನ್ನು ಆಚರಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ನಾನು ಎರಡು ವಿಷಯಗಳ ಬಗ್ಗೆ ವಿಚಾರ ಹರಿಸಲು ಬಯಸುತ್ತೇನೆ. ಆ ಎರಡು ವಿಷಯಗಳೂ ಭಾರತದಲ್ಲಿ ನಮ್ಮ ಜನರನ್ನು ಸಾಮಾಜಿಕ ಅವಕಾಶಗಳಿಂದ ವಂಚಿಸುತ್ತಿವೆ. ಒಂದು ಕೌಟುಂಬಿಕ ಹಿಂಸೆ; ಇನ್ನೊಂದು ಧರ್ಮಾಧಾರಿತ ಹಿಂಸೆ. ಈ ಎರಡೂ ಪ್ರಕಾರದ ಹಿಂಸೆಗಳು ಗಂಭೀರ ಸ್ವರೂಪವನ್ನು ತಾಳುತ್ತಿವೆ. ಬಹುಸಂಖ್ಯಾತ ಗಂಡಂದಿರು ತಾವು ಮಾಡುವ ಹಿಂಸಾಚಾರವನ್ನು ಸಮರ್ಥಿಸಿಕೊಳ್ಳುತ್ತಾರೆಂಬುದು ಆತಂಕಕಾರಕ ವಿಷಯವಾಗಿದೆ. ತಮ್ಮ ಬಗ್ಗೆ ಹೆಂಡಂದಿರು ಗೌರವವನ್ನು ಹೊಂದಿದ್ದರೆ ಅವರ ಮೇಲೆ ಹಿಂಸಾಚಾರ ಮಾಡುವುದು ನ್ಯಾಯ ಸಮ್ಮತವೆಂದು ನೂರಕ್ಕೆ ೬೦ರಷ್ಟು ಪುರುಷರು ಭಾವಿಸುತ್ತಾರೆ! ಇನ್ನು ಶೇಕಡ ೪೦ರಷ್ಟು ಗಂಡಸರು ತಮ್ಮ ಸೂಚನೆಗಳನ್ನು ಹೆಂಡಂದಿರು ಪಾಲಿಸದಿದ್ದರೆ ಅವರ ಮೇಲೆ ಎಸಗುವ ಹಿಂಸಾಚಾರವನ್ನು ಸಮರ್ಥಿಸುತ್ತಾರೆ.


ನೊಬೆಲ್ ಪ್ರಶಸ್ತಿ ವಿಜೇತರಾದ ಅಮರ್ತಸೇನರ ಪ್ರಕಾರ "ಅಭಿವೃದ್ಧಿಯ ಮೂಲಕ ಕಂಗಾಲತನ, ಹಸಿವು, ಶೋಷಣೆ, ರಾಜಕೀಯ ದಬ್ಬಾಳಿಕೆ ಮುಂತಾದವುಗಳಿಂದ ಜನರ ಬಿಡುಗಡೆಯಾಗುತ್ತದೆ. ಆದರೆ ಪ್ರಗತಿಯನ್ನು ಅಳೆಯುವಾಗ ಭಯದಿಂದ ಬಿಡುಗಡೆ ಎಂಬ ಸಂಗತಿಯನ್ನೂ ಅದು ಒಳಗೊಳ್ಳಬೇಕು. ನಿಜ ಹೇಳಬೇಕಾದರೆ ಎಲ್ಲರಿಗೂ ನಿರ್ಭೀತ ಜೀವನದ ಆಶ್ವಾಸನೆ ಸಿಗದಿದ್ದರೆ ಉಳಿದೆಲ್ಲ ಪ್ರಕಾರದ ಸ್ವಾತಂತ್ರ್ಯವು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ವೈವಾಹಿಕ ಮತ್ತು ಕೌಟುಂಬಿಕ ಹಿಂಸೆಯು ಒಂದು ಖಾಸಗಿ ವಿಷಯವಾಗಿರಬಹುದು. ಆದರೆ ಅದರಿಂದ ಉಂಟಾಗುವ ಸಾರ್ವಜನಿಕ ಪರಿಣಾಮಗಳು ಅತ್ಯಂತ ಗಂಭೀರವಾಗಿರುತ್ತವೆ. ಹಿಂಸಾತ್ಮಕ ನಡವಳಿಕೆಗಳು ಮನೆಯಿಂದ ಸಮುದಾಯಕ್ಕೆ ಮತ್ತು ಅಂತಿಮವಾಗಿ ಸಮಾಜಕ್ಕೆ ಬಹಳ ವೇಗವಾಗಿ ಹಬ್ಬುತ್ತವೆ.

ಮನೆಯಲ್ಲಿ ನಡೆಯುವ ಇಂಥ ಹಿಂಸಾಚಾರದ ಘಟನೆಗಳನ್ನು ನೋಡುವ ಮಕ್ಕಳು ದೊಡ್ಡವರಾದ ಮೇಲೆ ಅಂಥದೇ ಹಿಂಸಾವೃತ್ತಿಯನ್ನು ಪಾಲಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ.

- ಶಬನಾ ಆಜ್ಮಿ

ರೈತರ ಆತ್ಮಹತ್ಯೆಗಳು ವಿಕೃತ ಸಮಾಜದ ಕನ್ನಡಿ

- ಸುರೇಂದ್ರ ಕೌಲಗಿ



(ದೇಶ ಕುರುಡಾಗಿ, ಕಿವುಡಾಗಿ, ಮೂಗಾಗಿ ಕುಳಿತಿದೆ)

ದೇಶದಾದ್ಯಂತ ಮುಖ್ಯವಾಗಿ ಕರ್ನಾಟಕದಲ್ಲಿ ರೈತರು ಏಕಪ್ರಕಾರವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕೇಂದ್ರ ಸರ್ಕಾರದ ಅಪರಾಧ ತನಿಖಾ ಇಲಾಖೆಯ ಪ್ರಕಾರ ಕರ್ನಾಟಕದಲ್ಲಿ ವರ್ಷಕ್ಕೆ ಸರಾಸರಿ ೧೨,೦೦೦ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ದೇಶದ ಮಟ್ಟದಲ್ಲಿ ಸರಾಸರಿ ೧೨ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಪಶ್ಚಿಮ ಬಂಗಾಳ, ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಸಹ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರನ್ನು ದೇಶದ ಬೆನ್ನೆಲುಬೆಂದು ಕರೆಯಲಾಗುತ್ತದೆ. ಮಣ್ಣಿನ ಮಕ್ಕಳೆಂದು ವರ್ಣಿಸಲಾಗುತ್ತದೆ; ಅನ್ನ ದಾತನೆಂದು ಕೊಂಡಾಡಲಾಗುತ್ತದೆ. ಲಾಲ್‌ಬಹದ್ದೂರ್ ಶಾಸ್ತ್ರಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಪಾಕಿಸ್ತಾನದೊಡನೆ ನಡೆದ ಮೊದಲ ಯುದ್ಧದ ಸಂದರ್ಭದಲ್ಲಿ `ಜೈ ಜವಾನ್ ಜೈ ಕಿಸಾನ್' ಎಂಬ ಘೋಷಣೆಯನ್ನು ದೇಶಕ್ಕೆ ಕೊಟ್ಟರು. ಆ ಘೋಷಣೆಯ ಹಿಂದಿರುವ ಆಶಯ ಬಹಳ ಅರ್ಥಪೂರ್ಣವಾದುದು. ದೇಶದ ರಕ್ಷಣೆಯಲ್ಲಿ ಸೈನಿಕನ ಪಾತ್ರವೆಷ್ಟು ಮಹತ್ವದ್ದೋ, ಅಷ್ಟೇ ಮಹತ್ವದ್ದು ರೈತನ ಪಾತ್ರ ಕೂಡ. ದೇಶದ ಹಿತರಕ್ಷಣೆಯಲ್ಲಿ ರೈತ ಮತ್ತು ಸೈನಿಕನ ಹೊಣೆ ಸರಿಸಮಾನವಾದದ್ದು ಎಂಬ ವಾಸ್ತವಿಕ ಸತ್ಯವನ್ನು ದೇಶದ ಜನತೆಗೆ ಅರಿವು ಮಾಡಿಕೊಡುವುದೇ ಶಾಸ್ತ್ರಿಯವರ ಉದ್ದೇಶವಾಗಿತ್ತು. ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ ರೈತ ಆಯಾ ಸಮಯದ, ಆಯಾ ದೇಶದ, ಆಯಾ ಪರಿಸ್ಥಿತಿಯ ಕೇಂದ್ರ ಸ್ಥಾನದಲ್ಲಿ ಇದ್ದುಕೊಂಡೇ ಬಂದಿದ್ದಾನೆ. ದಕ್ಷಿಣ ಆಫ್ರಿಕಾದ ರಾಜಕೀಯ ಬೆಳವಣಿಗೆಯಾಗಿರಬಹುದು, ಅಮೆರಿಕೆಯ ವಸಾಹತುಶಾಹಿಯಿಂದ ಇಂಗ್ಲೆಂಡಿನ ಬಿಡುಗಡೆಗಾಗಿ ನಡೆದಂಥ ಬೋಸ್ಟನ್ ಟೀ ಪಾರ್ಟಿಯಂಥ ಹೋರಾಟವಾಗಿರಬಹುದು, ಹಿಟ್ಲರನ ಜನಾಂಗೀಯ ದ್ವೇಶಕ್ಕೆ ಕಾರಣವಾದ ಯಹೂದಿ·ರೈತರು, ಇಸ್ರೇಲನಂಥ ಮರಳುಗಾಡಿನಲ್ಲಿ ಹಸಿರುಕ್ರಾಂತಿ ಮಾಡಿ ಬಲಿಷ್ಠ ದೇಶವನ್ನು ಕಟ್ಟುವ ಕೆಲಸವಾಗಿರಬಹುದು, ಬಿಹಾರದ ಚಂಪಾರಣ್ಯ ಜಿಲ್ಲೆಯಲ್ಲಿ ಇಂಗ್ಲೀಷ್ ಜಮೀನ್ದಾರರ ವಿರುದ್ಧ ನೀಲಿ ತೋಟದ ರೈತರ ಹೋರಾಟವಿರಬಹುದು, ಗುಜರಾತಿನ ಬಾರ್ಡೋಲಿ ಕಂದಾಯ ಸತ್ಯಾಗ್ರಹವಿರಬಹುದು, ರಶಿಯಾದಲ್ಲಿ ಸ್ಟಾಲಿನ್ ದಮನಕಾರಿ ಕೃಷಿ ನೀತಿಯ ವಿರುದ್ಧ ಹೋರಾಟವಾಗಿರಬಹುದು ಹೀಗೆ ಪ್ರಪಂಚದ ರಾಜಕಿಯ, ಆರ್ಥಿಕ ಬದಲಾವಣೆಯ

ಮಂಚೂಣಿಯಲ್ಲಿ ರೈತ ಬಹಳ ದೀರ್ಘಕಾಲದಿಂದಲೂ ಇದ್ದಾನೆ. ಅಷ್ಟೇ ಅಲ್ಲ, ಕೃಷಿ ಕಾಯಕವೇ ಇತರ ಎಲ್ಲ ಕಾಯಕಗಳಿಗಿಂತ ಶ್ರೇಷ್ಠವೆಂದು ಭಾರತದ ಎಲ್ಲ ಋಷಿಮುನಿಗಳು ಹೇಳಿದ್ದಾರೆ; ವೇದ ಉಪನಿಷತ್ತುಗಳು ಸಾರಿವೆ. ಟಾಲ್‌ಸ್ಟಾಯ್ ಮತ್ತು ಗಾಂಧೀ ಮತ್ತು ಇನ್ನಿತರ ಅನೇಕ ಚಿಂತಕರೂ ಹೇಳಿದ್ದಾರೆ. ಥೋರೋನಂಥ ವಿದ್ವಾಂಸರು ಪ್ರಕೃತಿಯ ಮಧ್ಯ ವಾಸಮಾಡಲು ಬಯಸಿದ್ದರು. ಹೀಗೆ ರೈತ ಮತ್ತು ರೈತನ ಜೀವನ ವಿಶಿಷ್ಟವಾಗಿದೆಯೆಂದು ಎಲ್ಲರೂ ಹೇಳುತ್ತ ಬಂದಿರುವುದಾದರೂ ಈ ಇಪ್ಪತ್ತೊಂದನೇ ಶತಮಾನದ ಪ್ರಾರಂಭದಲ್ಲಿ ರೈತ ಹತಾಶನಾಗಿ, ದರಿದ್ರನಾಗಿ, ಭ್ರಷ್ಟನಾಗಿ, ವಿಚಾರಶೂನ್ಯನಾಗಿ, ದಿಕ್ಕೆಟ್ಟವನಾಗಿ ಆತ್ಮಹತ್ಯೆಯಂಥ ಘೋರ ಕೃತ್ಯಕ್ಕೆ ಇಳಿದಿರುವುದು ನಮ್ಮ ಈಗಿನ ಸಮಾಜದ ಒಟ್ಟು ವ್ಯವಸ್ಥೆಯ ವಿಕೃತ ಸ್ಥಿತಿಗೆ ಕನ್ನಡಿ ಹಿಡಿದಂತಾಗಿದೆ. ಕಳೆದ ಒಂದು ವರ್ಷದಿಂದೀಚೆಗೆ ಕರ್ನಾಟಕವೊಂದರಲ್ಲಿಯೇ ಹಾಗೂ ಸರಣಿಯಾಗಿ ಆತ್ಮಹತ್ಯೆಗಳನ್ನು ಒಂದುವೇಳೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಾಗೂ ಸರಣಿಯಾಗಿ ನಡೆದಂಥ ಆತ್ಮಹತ್ಯೆಗಳನ್ನು ಕಾರ್ಮಿಕರು ಮಾಡಿಕೊಂಡಿದ್ದರೆ, ಶಿಕ್ಷಕರು ಮಾಡಿಕೊಂಡಿದ್ದರೆ, ಸರ್ಕಾರಿ ನೌಕರರು ಮಾಡಿಕೊಂಡಿದ್ದರೆ ದೇಶದ ತುಂಬೆಲ್ಲ ದೊಡ್ಡ ಕೋಲಾಹಲ ಉಂಟಾಗುತ್ತಿತ್ತು. ರಾಜಕೀಯ ವ್ಯವಸ್ಥೆಯಲ್ಲಿ ತೀವ್ರ ರೀತಿಯ ಸ್ಥಿತ್ಯಂತರಗಳಾಗುತ್ತಿದ್ದವು, ಎಷ್ಟೋ ರಾಜಕೀಯ ಮುಖಂಡರುಗಳ ತಲೆಗಳು ಉರುಳುತ್ತಿದ್ದವು, ಸರ್ಕಾರಗಳು ನಡುಗುತ್ತಿದ್ದವು. ಆದರೆ ರೈತರು ಒಬ್ಬರಾದ ಮೇಲೆ ಒಬ್ಬರು ಮಹಿಳೆಯರು ಮತ್ತು ಮಕ್ಕಳಾದಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಸಮಾಜ ಆ ಆತ್ಮಹತ್ಯೆಗಳ ಬಗ್ಗೆ ಕುರುಡಾಗಿ, ಕಿವುಡಾಗಿ, ಮೂಗಾಗಿ ಕುಳಿತಿದೆ. ಇದೊಂದು ಸಾಮಾಜಿಕ ದುರಂತ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮತ್ತು ನಿರಂತರವಾಗಿ ಆತ್ಮಹತ್ಯೆಗಳು ನಡೆಯುತ್ತಿದ್ದರೂ ಸರ್ಕಾರ ಈ ಆತ್ಮಹತ್ಯೆಗಳಿಗೆ ನಿಜವಾದ ಕಾರಣಗಳೇನು ಎಂಬ ಬಗ್ಗೆ ಗಂಭೀರವಾದ ತನಿಖೆಯನ್ನು ನಡೆಸುವ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಆತ್ಮಹತ್ಯೆಯ ವಿಷಯ ಸರ್ಕಾರಕ್ಕೆ ಸಂಬಂಧಿಸಿದುದೆಂದು ಭಾವಿಸಿರುವ ದೇಶದ ವಿಶ್ವವಿದ್ಯಾನಿಲಯಗಳು, ಸಾಮಾಜಿಕ ಸಂಶೋಧನಾ ಸಂಸ್ಥೆಗಳು ತಮ್ಮ ದಂತಗೋಪುರಗಳಲ್ಲಿಯೇ ಕುಳಿತಿವೆ. ಜನಸಾಮಾನ್ಯರ ಹಿತವೇ ತಮ್ಮ ಮಠಗಳ ಗುರಿಯೆಂದು ಹೇಳಿಕೊಳ್ಳುವ ಮಠಾಧೀಶರುಗಳು ದೊಡ್ಡ-ದೊಡ್ಡ ಕಟ್ಟಡಗಳನ್ನು ಕಟ್ಟುವುದರಲ್ಲಿ ಆದಾಯ ತರುವಂಥ ಶಿಕ್ಷಣ ಸಂಸ್ಥೆ ಮತ್ತು ಆಸ್ಪತ್ರೆಗಳನ್ನು ಸ್ಥಾಪಿಸುವಲ್ಲಿ, ರಾಜಕೀಯ ಮುಖಂಡರನ್ನು ಓಲೈಸುವುದರಲ್ಲಿ ತಮ್ಮ ಪ್ರಭಾವ, ಸಮಯ, ಹಣ ಇತ್ಯಾದಿಗಳನ್ನು ಖರ್ಚು ಮಾಡುತ್ತಿವೆಯೇ ವಿನಹ ರೈತರ ಆತ್ಮಹತ್ಯೆಗಳಿಗೆ ಕಾರಣವಾಗಿರುವ ಇಂದಿನ ಸಮಾಜ ವ್ಯವಸ್ಥೆಯಲ್ಲಿಯ ದೋಷಗಳ ನಿವಾರಣೆಯ ಕಡೆಗೆ ಕಿಂಚಿತ್ತೂ ಆಲೋಚಿಸುತ್ತಿಲ್ಲ. ಯಾರು ಮಾನವೀಯ ಧರ್ಮವನ್ನು ಎತ್ತಿ ಹಿಡಿಯುತ್ತಾರೋ ಅಂಥವರನ್ನು ಧರ್ಮ ಕಾಪಾಡುವುದೆಂಬ ಆರ್ಷೇಯ ಮಾತನ್ನು ಇಂದಿನ ಮಠಾಧೀಶರು ಸುಳ್ಳು ಮಾಡುತ್ತಿದ್ದಾರೆ. ಇದು ಸಹ ಇನ್ನೊಂದು ದುರಂತದ ಸಂಗತಿ. ಈ ಮಾತು ಕೇವಲ ಮಠಾಧೀಶರಿಗೆ ಮಾತ್ರವಲ್ಲ ದೇಶದ ಅಭಿವೃದ್ಧಿಯ ಚುಕ್ಕಾಣಿ ಹಿಡಿದಿರುವ ರಾಜಕಾರಣಿಗಳಿಗೂ, ಅರ್ಥಶಾಸ್ತ್ರ ತಜ್ಞರಿಗೂ, ಕೈಗಾರಿಕಾ ವಲಯದ ನಾಯಕರಿಗೂ ಸಹ ಅನ್ವಯಿಸುತ್ತದೆ. ಇಂಥದೇ ಭಾವನೆಯನ್ನು ಜೊನಾಥನ್ ಸ್ವಿಫ್ಟ್ ತನ್ನ ಪದ್ಯದ ಈ ಸಾಲುಗಳಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾನೆ -

Who ever could make two ears of corn or two blades of grass to grow upon a spot of ground where only one grew before, would deserve better of mankind, and do more essental service to this country than the whole race of politicians put together.

ರೈತರ ಆತ್ಮಹತ್ಯೆಗಳಿಗೆ ಪತ್ರಿಕೆಯಲ್ಲಿ ಬರುವ ಸುದ್ದಿಗಳ ಪ್ರಕಾರ ಅವರು ಮಾಡಿಕೊಂಡಿರುವ ಸಾಲಗಳನ್ನು ತೀರಿಸಲಾಗದಿರುವುದು ಮುಖ್ಯ ಕಾರಣವಾಗಿದೆ. ಸಾಮಾನ್ಯವಾಗಿ ಸಾಲ ಒಂದು ಅಥವಾ ಎರಡು ಲಕ್ಷ ರೂಪಾಯಿಗಳಷ್ಟಿರುತ್ತದೆ. ಆತ್ಮಹತ್ಯೆ ಮಾಡಿಕೊಂಡಿರುವ ರೈತನ ಭೂಮಿ ವಿಸ್ತಾರ ಸಾಮಾನ್ಯವಾಗಿ ಐದರಿಂದ ಆರು ಎಕರೆ ಇರುತ್ತದೆ ಮತ್ತು ಮನೆಯಲ್ಲಿರುವವರ ಸಂಖ್ಯೆಯೂ ಸಹ ಐದರಿಂದ ಆರು ಇರುತ್ತದೆ ಮತ್ತು ಖುಷ್ಕಿ ಭೂಮಿಯಾಗಿರುತ್ತದೆ. ಇಂಥ ಕುಟುಂಬವೊಂದು ಲಕ್ಷ ರೂಪಾಯಿ ಮೊತ್ತದ ಸಾಲ ಮಾಡಲು ಇದ್ದ ಕಾರಣಗಳಾವುವು ಎಂಬುದನ್ನು ಎಲ್ಲ ದೃಷ್ಟಿಕೋನಗಳಿಂದ ಪರಿಶೀಲಿಸಿದರೆ ಅನೇಕ ಸತ್ಯ ಸಂಗತಿಗಳು ಹೊರಬರುವುವು. ಈಗ ಮೇಲ್ನೋಟಕ್ಕೆ ಕಾಣುವ ಕಾರಣಗಳಲ್ಲಿ ಪ್ರಧಾನವಾದವು ಎರಡು: ಒಂದನೆಯ ಕಾರಣ ಕಳೆದ ಮೂರು ವರ್ಷಗಳಿಂದ ಬಿದ್ದಿರುವ ಬರ; ಎರಡನೆಯ ಕಾರಣ ವ್ಯವಸಾಯಕ್ಕಾಗಿ ಅಗತ್ಯವಾದ ನೀರು ಪಡೆಯಲು ಬೋರವೆಲ್ ತೋಡುವುದು, ಉತ್ತಮ ಬೀಜಗಳ ಖರೀದಿ, ರಾಸಾಯನಿಕ ಗೊಬ್ಬರಗಳ ಖರೀದಿ, ಕೂಲಿಯಾಳುಗಳಿಗೆ ಕೂಲಿ ಖರ್ಚು, ಟ್ರಾಕ್ಟರ್‌ಗಳಿಂದ ಉಳುಮೆ ಮಾಡಿಸುವ ಖರ್ಚು ಇತ್ಯಾದಿ. ಈ ಖರ್ಚುಗಳಿಗಾಗಿ ರೈತ ಸಾಲ ಮಾಡಿರುತ್ತಾನೆ. ರೈತನಿಗೆ ಅಗತ್ಯವಾದ ಈ ಸಾಲವನ್ನು ಪಡೆಯುವುದು ಅವನಿಗೆ ಸುಲಭವಾದ ಕೆಲಸವಲ್ಲ. ರಾಷ್ಟ್ರೀಕೃತ ಬ್ಯಾಂಕುಗಳು ಸಾಲವನ್ನು ಕೊಡುವಲ್ಲಿ ಅತಿಯಾದ ವಿಳಂಬ ನೀತಿಯನ್ನು ಅನುಸರಿಸುತ್ತವೆ. ಆದ್ದರಿಂದ ರೈತನು ಖಾಸಗಿ ಸಂಸ್ಥೆಗಳ ಮತ್ತು ವ್ಯಕ್ತಿಗಳ ಶರಣು ಹೋಗಬೇಕಾಗುತ್ತದೆ. ಅವರು ವಿಧಿಸುವ ಬಡ್ಡಿ ಅತಿಯಾಗಿರುವುದರಿಂದ ರೈತ ಆ ಸಾಲವನ್ನು ತನ್ನ ವ್ಯವಸಾಯ ಉತ್ಪನ್ನಗಳ ಮೂಲಕ ತೀರಿಸಲು ಅಸಮರ್ಥನಾಗಿ ಸಾಲದ ಶೂಲವನ್ನು ಏರಬೇಕಾಗುತ್ತದೆ. ನಂತರ ಅದರ ಮುಕ್ತಿಗಾಗಿ ಆತ್ಮಹತ್ಯೆಯ ದಾರಿಯನ್ನು ಹಿಡಿಯುತ್ತಾನೆ. ರೈತ ಸಾಲ ಮಾಡುವಾಗ ತಾನು ಬೆಳೆದ ಆಹಾರ ಪದಾರ್ಥಗಳಿಗೆ, ತರಕಾರಿಗಳಿಗೆ, ರೇಶ್ಮೆಗೆ, ಕಬ್ಬಿಗೆ ಒಳ್ಳೆ ಬೆಲೆ ಸಿಗುತ್ತದೆಂಬ ನಿರೀಕ್ಷೆಯಲ್ಲಿರುತ್ತಾನೆ. ಆದರೆ ಅವುಗಳನ್ನು ಮಾರುಕಟ್ಟೆಗೆ ತಂದಾಗ ಅವುಗಳಿಗೆ ದೊರೆಯುವ ಅತಿ ಕಡಿಮೆ ಬೆಲೆಯಿಂದಾಗಿ ಕಂಗಾಲನಾಗುತ್ತಾನೆ, ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಾನೆ. ರೈತ ಇಂಥ ಪರಿಸ್ಥಿತಿಯನ್ನು ಏಕೆ ಎದುರಿಸಬೇಕಾಗುತ್ತದೆಂಬ ಬಗ್ಗೆ ಯಾವ ಅರ್ಥಶಾಸ್ತ್ರ ತಜ್ಞರೂ ಸರಿಯಾಗಿ ಪರಿಶೋಧಿಸಿ ವರದಿಯನ್ನು ಕೊಟ್ಟಿಲ್ಲ. ಈ ಕುರಿತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದ ದ್ವಾರಕಾನಾಥ ಮತ್ತು ವೀರೇಶರವರು ಸಲ್ಲಿಸಿದ್ದ ವರದಿಗಳು ಶ್ರೇಷ್ಠ ತಾಂತ್ರಿಕ ಸರ್ಕಾರವೆಂದು ಕರೆದುಕೊಳ್ಳುವ ಇಂದಿನ ಸರ್ಕಾರದಲ್ಲಿ ರೈತರ ವಿಷಯಗಳಂಥ ಸಾಮಾನ್ಯ ಸಂಗತಿಗಳಿಗೆ ಸ್ಥಾನವಿಲ್ಲವಾಗಿದೆ. ಹೀಗಾಗಿ ರೈತರ ಆತ್ಮಹತ್ಯೆಗಳು ನಿಗೂಢ ರಹಸ್ಯಗಳ ಮುಸುಕಿನಲ್ಲಿ ಮುಚ್ಚಿಹೋಗಿವೆ.

ರೈತರ ಆತ್ಮಹತ್ಯೆಗಳು ಈಗ ನಡೆಯುತ್ತಿರಬಹುದು. ಆದರೆ ಅವುಗಳಿಗೆ ಸಂಬಂಧಿಸಿದ ಕಾರಣಗಳು ಮತ್ತು ಪರಿಸ್ಥಿತಿ ಅನೇಕ ವರ್ಷಗಳಿಂದ ಸಂಗ್ರಹವಾಗುತ್ತ ಬಂದು ಈಗ ಅವು ಆಸ್ಫೋಟಗೊಳ್ಳುತ್ತಿವೆ. ಆತ್ಮಹತ್ಯೆಗಳ ಸರಣಿ ೧೯೮೭ರಿಂದಲೇ ಪ್ರಾರಂಭವಾಗಿದೆ. ವ್ಯವಸಾಯದಲ್ಲಿ ಅತ್ಯಂತ ಮುಂದುವರಿದ ಪಂಜಾಬ ರಾಜ್ಯದಲ್ಲಿಯೂ ಸಹ ರೈತರ ಆತ್ಮಹತ್ಯೆಗಳಾಗಿವೆ. ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ಒರಿಸ್ಸಾ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ರಾಜ್ಯಗಳಲ್ಲಿಯೂ ಸಹ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಆತ್ಮಹತ್ಯೆಗಳ ಸಂಖ್ಯೆ ೧೦,೦೦೦ ಕ್ಕೂ ಹೆಚ್ಚಾಗಿದೆ. ೧೯೯೧ನೇ ಇಸ್ವಿಯಿಂದ ನಮ್ಮ ದೇಶ ವಿಶ್ವೀಕರಣ, ಮುಕ್ತ ಮಾರುಕಟ್ಟೆಯಂಥ ತಪ್ಪು ಆರ್ಥಿಕ ನೀತಿಗಳನ್ನು ಅಳವಡಿಸಿಕೊಂಡದುದರ ಪರಿಣಾಮಗಳು ಈಗ ರೈತರ ಆತ್ಮಹತ್ಯೆಗಳ ಮೂಲಕ ಹೊರಹೊಮ್ಮುತ್ತಿವೆ. ನಮ್ಮ ದೇಶದಲ್ಲಿ ೫೫೦ ಕೋಟಿ ರೈತರಿದ್ದಾರೆ; ಅವರಲ್ಲಿ

೩೦೦ ಕೋಟಿ ಕೃಷಿ ಕಾರ್ಮಿಕರಿದ್ದಾರೆ. ಇಂಥ ಅಗಾಧವಾದ ರೈತ ಸಮುದಾಯದ ಮೇಲೆ ದೇಶದ ತಪ್ಪು ಆರ್ಥಿಕ ನೀತಿಯ ಪರಿಣಾಮ ಆಗುತ್ತಿರುವುದು ಈಗ ಸ್ಪಷ್ಟವಾಗಿ ಕಾಣುತ್ತಿದೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಡಾ|| ಮನಮೋಹನ್ ಸಿಂಗ್ ಅನುಸರಿಸಿದ ಆರ್ಥಿಕ ನೀತಿಯಿಂದಾಗಿ ಕೃಷಿ ಕ್ಷೇತ್ರದ ಏಳಿಗೆಗಾಗಿ ಖರ್ಚು ಮಾಡಬೇಕಾಗಿದ್ದ ಯೋಜನೆಯ ಸಿಂಹಪಾಲು ಹಣವನ್ನು ಕೈಗಾರಿಕೆಯ ಬೆಳವಣಿಗೆಗಾಗಿ ಖರ್ಚು ಮಾಡಲಾಯಿತು. ಆದರೆ ಆ ಕೈಗಾರಿಕೆಗಳೋ ಏಕಪ್ರಕಾರವಾಗಿ ಅವನತಿಯತ್ತ ಸಾಗುತ್ತಲೇ ಹೋದವು. ಕೊನೆಗೆ ಆ ಕೈಗಾರಿಕೆಗಳನ್ನು ಮಾರಿ ಅವುಗಳಲ್ಲಿ ತೊಡಗಿಸಿದ್ದ ಬಂಡವಾಳವನ್ನು ಹಿಂದಕ್ಕೆ ಪಡೆಯಲು ಒಬ್ಬ ಕ್ಯಾಬಿನೆಟ್ ಸಚಿವನನ್ನೇ ಗೊತ್ತು ಮಾಡಬೇಕಾಯಿತು! ಇಂಥ ಒಂದು ದುರ್ದೆಶೆ ನಮ್ಮ ದೇಶಕ್ಕೆ ಬಂದಿರುವ ಸಂದರ್ಭದಲ್ಲಿಯೇ ಹತ್ತನೇ ಪಂಚವಾರ್ಷಿಕ ಯೋಜನೆಯನ್ನು ದೇಶಕ್ಕೆ ಸಮರ್ಪಿಸಲಾಗಿದೆ. ಆದರೆ ಈ ಪಂಚವಾರ್ಷಿಕ ಯೋಜನೆಯು ಅಭಿವೃದ್ಧಿಯ ಗುರಿಗಳು ಎಷ್ಟು ಮೇಲ್ಮಟ್ಟದ್ದಾಗಿವೆಯೆಂದರೆ ಅವುಗಳನ್ನು ಸಾಧಿಸುವುದು ಕಷ್ಟಸಾಧ್ಯವಿದೆ. ಪ್ರತಿ ವರ್ಷ ಶೇಕಡಾ ೮ರಂತೆ ಪ್ರಗತಿಯ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಆದರೆ ದೇಶದ ಅರ್ಥಶಾಸ್ತ್ರಜ್ಞರ ಪ್ರಕಾರ ಶೇಕಡಾ ೮ರ ಗುರಿ ಅವಾಸ್ತವಿಕವಾದುದಾಗಿದೆಷ್ಟೇ ಅಲ್ಲ ಇದುವರೆಗಿನ ಪಂಚವಾರ್ಷಿಕ ಯೋಜನೆಗಳಂತೆಯೇ ಈ ಯೋಜನೆಯ ಒಟ್ಟಾರೆ ಪರಿಣಾಮ ನಿರುದ್ಯೋಗ, ಬಡತನ, ಕೃಷಿಯ ಹಿನ್ನಡೆ ಆಗುವ ಸಾಧ್ಯತೆಗಳೇ ಹೆಚ್ಚಾಗಿವೆ. ಆದ್ದರಿಂದ ಅರ್ಥತಜ್ಞ ಅಬ್ದುಲ್ ಅಝೀಜ್ ಹತ್ತನೇ ಪಂಚವಾರ್ಷಿಯ ಯೋಜನೆಯನ್ನು "ಇನ್ನೊಂದು ಕನಸು ಮಾರಾಟಕ್ಕಾಗಿ ಇದೆ" ಎಂದು ಬಣ್ಣಿಸಿದ್ದಾರೆ.

ರೈತರ ಆತ್ಮಹತ್ಯೆಗಳೆಂದರೆ ಕೇವಲ ಯಾವುದೋ ಅನಾಮಿಕರ ಸಾವಲ್ಲ. ಆ ಸಾವುಗಳ ಹಿಂದೆ ಇಡೀ ಸಮಾಜ ವ್ಯವಸ್ಥೆಯಲ್ಲಿರುವ ದೋಷಗಳ ಪಟ್ಟಿಯೇ ಇರುತ್ತದೆ. ಅಲ್ಲದೆ, ಈಗ ನಾವು ನಮ್ಮ ದೇಶದಲ್ಲಿ ಯಾವ ಪ್ರಕಾರದ ಸಮಾಜ ವ್ಯವಸ್ಥೆಯನ್ನು ನಿರ್ಮಿಸಲು ಬಯಸುತ್ತಿದ್ದೇವೆಯೋ ಆ ಸಮಾಜದ ಮೂಲಭೂತ ಸಿದ್ಧಾಂತವನ್ನೇ ಆ ಆತ್ಮಹತ್ಯೆಗಳು ಪ್ರಶ್ನಿಸುತ್ತಿವೆ. ಅಮೇರಿಕಾ ತನ್ನ ವ್ಯವಸಾಯ ಪ್ರಧಾನ ಸಮಾಜವನ್ನು ಅತ್ಯಂತ ಕೈಗಾರಿಕಾ ಪ್ರಧಾನ ಹಾಗೂ ಅತ್ಯಂತ ತಾಂತ್ರಿಕ ಪ್ರತಾನ ದೇಶವನ್ನಾಗಿ ಮಾರ್ಪಡಿಸಿಕೊಂಡ ಮೇಲೆ ಅಲ್ಲಿಯ ಸಮಾಜ ಜೀವನದ ಮೇಲೆ ಎಂಥೆಂಥ ಆಘಾತಕಾರಿ ಪರಿಣಾಮಗಳಾಗಿವೆ ಎಂಬುದನ್ನು ಅಮೇರಿಕೆಯ ಹಿರಿಯ ಚಿಂತಕ, ಸಾಹಿತಿ, ಕವಿ, ರೈತ ಮತ್ತು ಪರಿಸರ ಪ್ರೇಮಿ ವೆಂಡಲ್ ಬೆರಿ ತಮ್ಮ "The unsettling of America Culture & Agriculture" ಎಂಬ ಪುಸ್ತಕದಲ್ಲಿ ಸುಮಾರು ೨೫ ವರ್ಷಗಳ ಹಿಂದೆಯೇ ವಿವರವಾಗಿ ಬರೆದಿದ್ದಾರೆ. ಭಾರತವನ್ನು ಇನ್ನೊಂದು ಮರಿ ಅಮೇರಿಕಾ ಮಾಡಲು ಹೊರಟಿರುವ ನಮ್ಮ ಎಲ್ಲ ಪ್ರಕಾರದ ನಾಯಕರುಗಳಿಗೆ ನಾವೆಲ್ಲಿಂದ ತಿಳುವಳಿಕೆ ತಂದುಕೊಡೋಣ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ನಮ್ಮ ಸರ್ಕಾರ ಬೆಂಗಳೂರನ್ನು ಇನ್ನೊಂದು ಸಿಂಗಪುರ ಮಾಡುವ ಪ್ರಯತ್ನದ ಬದಲಾಗಿ, ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವಂತ ಯೋಜನೆಯ ಬದಲಾಗಿ ಜನತೆಯ, ಮುಖ್ಯವಾಗಿ ರೈತರ, ನೇಕಾರರ, ಕಾರ್ಮಿಕರ ಹಾಗೂ ಇತರೆ ಪ್ರಕಾರದ ದುಡಿಮೆದಾರರ ಸಮಸ್ಯೆಗಳನ್ನು ಬಗೆ ಹರಿಸಲು ಪ್ರಯತ್ನಿಸುವುದು ಹೆಚ್ಚು ಮಾನವೀಯವೆನಿಸುತ್ತದೆ.

ಇದೆಲ್ಲವೂ ಸಾಲದಂತೆ ನಮ್ಮ ಸರ್ಕಾರವು ಇನ್ನೂ ಸಹ ವಿಶ್ವ ವಾಣಿಜ್ಯ ಸಂಸ್ಥೆ, ವಿಶ್ವಬ್ಯಾಂಕ್ ಮುಂತಾದ ಪ್ರಭಾವಶಾಲಿ ವಿತ್ತೀಯ ಸಂಸ್ಥೆಗಳ ಪರಿಚಾರಕನಂತೆ ವರ್ತಿಸುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಉದಾಹರಣೆಗೆ ಭಾರತವು ಹಸಿರು ಕ್ರಾಂತಿಯ ಫಲವಾಗಿ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿತ್ತು. ಆದರೆ ವಿಶ್ವ ವಾಣಿಜ್ಯ ಸಂಸ್ಥೆಯ

ಮಾರ್ಗದರ್ಶಿ ಸೂಚನೆಗಳ ಕಾರಣದಿಂದಾಗಿ ಭಾರತದ ಆಹಾರ ಸ್ವಾವಲಂಬನೆ ದುರ್ಬಲಗೊಂಡಿತು. ಇದಕ್ಕೆ ಜೀವತಂತ್ರಜ್ಞಾನಿಗಳ ಕುಮ್ಮಕ್ಕೂ ಸಹ ಸೇರಿದೆ. ಇದರ ದುಷ್ಪರಿಣಾಮ ಎಷ್ಟಾಗಿವೆಯೆಂದರೆ ಹೋಲಿಕಾ ರೂಪದಲ್ಲಿ ಹೇಳುವುದಾದರೆ ಪಶ್ಚಿಮದ ದೇಶಗಳಲ್ಲಿಯ ಒಂದು ಹಸುಗೆ ಒಂದು ದಿನಕ್ಕೆ ಒಂದು ಡಾಲರ್‌ನಷ್ಟು ಸಬ್ಸಿಡಿ ಕೊಡಲಾಗುತ್ತಿದೆ. ಅದೇ ಸಮಯಕ್ಕೆ ಭಾರತದ ಜನಸಂಖ್ಯೆಯ ಅರ್ಧದಷ್ಟು ಜನರು ಒಂದು ದಿನಕ್ಕೆ ಅರ್ಧ ಡಾಲರ್ ಆದಾಯದೊಂದಿಗೆ ಜೀವನ ಸಾಗಿಸುತ್ತಾರೆ.

ಭಾರತ ಅನುಸರಿಸುತ್ತಿರುವ ಇಂದಿನ ಕೈಗಾರಿಕಾ ನೀತಿ, ಆರ್ಥಿಕ ನೀತಿ, ರಾಜಕೀಯ ನೀತಿ, ಶಿಕ್ಷಣ ನೀತಿ, ಉದ್ಯೋಗಗಳನ್ನು ಸೃಷ್ಟಿಸುವ ನೀತಿ ಇತ್ಯಾದಿ ಎಲ್ಲವೂ ದೋಷಪೂರ್ಣವಾಗಿವೆ. ನಮ್ಮ ನಾಯಕರು - ಅವರು ಯಾವುದೇ ಕ್ಷೇತ್ರದ ನಾಯಕರಾಗಿರಲಿ ಅವರು ಪಾಶ್ಚಿಮಾತ್ಯ ದೇಶಗಳ ಕನ್ನಡಕಗಳನ್ನು ಧರಿಸಿ ಭಾರತದ ಹಿಂದುಳಿರುವಿಕೆಯನ್ನು, ಅಭಿವೃದ್ಧಿಯನ್ನು ನೋಡುತ್ತಾರೆ. ಭಾರತದಲ್ಲಿರುವ ಅಪಾರ ಜನಸಂಖ್ಯೆ, ನಿರುದ್ಯೋಗತನ, ನಿರಕ್ಷತೆಯ ಜೊತೆಗೆ ಬಂದಿರುವ ಸೋಮಾರಿತನ ಹಾಗೂ ಅದಕ್ಷತೆ, ಇಲ್ಲಿಯ ಭೌಗೋಳಿಕ ಸನ್ನಿವೇಶ ಮತ್ತು ಪುರಾತನ ಸಾಂಸ್ಕೃತಿಕ ಮೌಲ್ಯಗಳು ಇತ್ಯಾದಿಗಳನ್ನು ದೇಶದ ಅಭಿವೃದ್ಧಿ ನೀತಿ ನಿರೂಪಣೆಯ ಕಾಲಕ್ಕೆ ಅವರು ಮರೆಯುತ್ತಾರೆ. ಎಲ್ಲ ಅಭಿವೃದ್ಧಿಯನ್ನು ಡಾಲರ್‌ಗಳ ಮೌಲ್ಯದಲ್ಲಿ ಅಳೆಯುತ್ತಾರೆ. ಡಾಲರ್ ಎದುರು ಮಾನವೀಯ ಮೌಲ್ಯಗಳು ತುಚ್ಚವೆನಿಸುತ್ತಿವೆ. ಈ ಮಾತುಗಳನ್ನು ಬರೆಯುವಾಗ ಗಾಂಧೀಜಿಯವರು ೧೯೦೯ರಲ್ಲಿ `ಹಿಂದ್ ಸ್ವರಾಜ್' ಪುಸ್ತಕದಲ್ಲಿ ಪ್ರತಿಪಾದಿಸಿರುವ ಮಾತುಗಳು ನೆನಪಾಗುತ್ತವೆ. ಅಷ್ಟೇ ಅಲ್ಲ, ಅನೇಕ ಚಿಂತಕರು, ಜ್ಞಾನಿಗಳು, ಮೇಧಾವಿಗಳು, ಹಿರಿಯ ನಾಯಕರು ಹೇಳಿರುವಂತೆ ಆ ಪುಸ್ತಕದಲ್ಲಿಯ ಮಾತುಗಳು ಬಹಳಷ್ಟು ಮಟ್ಟಿಗೆ ಇಂದಿಗೂ ಪ್ರಸ್ತುತವಾಗಿವೆ. ಈ ೨೧ನೇ ಶತಮಾನದಲ್ಲಿಯ ನಮ್ಮ ಬೆಳವಣಿಗೆಯ ಹಡಗಿಗೆ ದಿಕ್ಸೂಚಿಯೂ ಆಗಿದೆ. ಹಿಂದ್ ಸ್ವರಾಜ್ಯದಲ್ಲಿಯ ವಿಚಾರಗಳ ಬೆಳಕಿನಲ್ಲಿ ನಮ್ಮ ಇಂದಿನ ಸಮಾಜ ಅದು ಬಹಳ ವಿಕೃತಗೊಂಡಿರುವಂತೆ ಕಂಡು ಬರುತ್ತದೆ. ವಿಕೃತ ಸಮಾಜದ ಕನ್ನಡಿಯಾಗಿ ರೈತರ ಹಾಗೂ ನೇಕಾರರ ಆತ್ಮಹತ್ಯೆಗಳು. ಈ ಸಮಸ್ಯೆಗೆ ನಾವೆಲ್ಲರೂ ಕಾರಣರಾಗಿದ್ದೇವೆ. ಅದರ ಪರಿಹಾರಕ್ಕೂ ನಾವು ಕಾರಣರಾಗಬೇಕಿದೆ. ನೆಹರೂ ಹೇಳಿರುವಂತೆ ನಮ್ಮ ಎಲ್ಲ ಯೋಜನೆಗಳ ಉದ್ದೇಶ್ಯ ಪರಿಪೂರ್ಣ ಮಾನವನ ನಿರ್ಮಾಣಕ್ಕಾಗಿ ಇರುವಂತೆ ಪ್ರಯತ್ನಿಸಬೇಕಿದೆ. ಅಹಿಂಸೆ, ಶಾಂತಿ ಮತ್ತು ಪ್ರಗತಿಯ ಸಂಕೇತವಾದ ಗಾಂಧೀಜಿಯವರ ಚರಖ ಪ್ರತಿಯೊಂದು ಗ್ರಾಮದಲ್ಲಿ ಕೆಲಸ ಮಾಡುವಂತಾಗಲಿ. ●

ಸಮಾಜವೆಂಬುದು ಪುಸ್ತಕಗಳ ಕುದಿತದಿಂದಾದ ಬಂದು ಲೇಹ. ಓದಲು ಯೋಗ್ಯವಾದ ಸಾಹಿತ್ಯದಿಂದ ಅದು ತಮಗೆ ಬೇಕಾದ ಒಳ್ಳೆಯ ಗುಣಗಳನ್ನು ಪಡೆಯುತ್ತದೆ ಹೇಗೆ ಬೀಸಿನೀರು ಚಹಾ ಎಲೆಗಳಿಂದ ಶಕ್ತಿ ಪಡೆಯುತ್ತದೋ ಹಾಗೆ.

- ಒಲಿವರ್ ವಿಂಡೆಲ್ ಹೋಮ್ಸ್

ಪುಸ್ತಕಗಳು ಯೌವನದ ಆಹಾರ, ವೃದ್ಧರಿಗೆ ವೃಧ್ಯಾಪದ ಆನಂದ, ಅಭಿವೃದ್ಧಿಯ ಶೃಂಗಾರ. ಕಷ್ಟಗಳಲ್ಲಿ ನೆಮ್ಮದಿಯ ತಾಣ. ಮನೆಯಲ್ಲಿಯ ಸಂತೋಷ. ವಿದೇಶಗಳಲ್ಲಿ ನಿರಾಂತಕ, ರಾತ್ರಿಯಲ್ಲಿ, ಪ್ರವಾಸದಲ್ಲಿ ಜೊತೆಗಾರ.

- ಸಿಸಿರೊ

ಶಿಕ್ಷಣ ವ್ಯವಸ್ಥೆಗೆ ಕಾಯಕಲ್ಪವಾಗಬೇಕು

- ಕೆ.ಪಿ. ಬಾಲಸುಬ್ರಹ್ಮಣ್ಯ ಕಂಜರ್ಪಣೆ

ತೊಡೆ ಮುರಿದು ಬೀಳುವ ದುರ್ಯೋಧನನ ಕುರಿತು ಒಂದು ಕಥೆಯಿದೆ. ಆತ ವಜ್ರಲೇಪಿ. ಯಾವುದೇ ಪೆಟ್ಟೂ ಆತನ ಮೈಯ್ಯನ್ನು ಮುರಿಯದಂತೆ ಆತನ ತಾಯಿ ಚಿಕ್ಕಂದಿನಲ್ಲಿ ಆತನ ಮೈಗೆ ವಜ್ರಲೇಪನವನ್ನು ಹಚ್ಚುತ್ತಿದ್ದಳು. ಆದರೆ ನಾಚಿಕೆಯಿಂದ ಆತ ತೊಡೆಗೆ ವಜ್ರಲೇಪಕ್ಕೆ ಅವಕಾಶ ನೀಡಲಿಲ್ಲ. ತೊಡೆಗೂ ವಜ್ರಲೇಪವಾಗುತ್ತಿದ್ದರೆ ಭೀಮನ ಗದಾಪ್ರಹಾರಕ್ಕೆ ಕೌರವನ ತೊಡೆ ಮುರಿಯುತ್ತಿರಲಿಲ್ಲ. ಹಾಗೆಯೇ ಬಾಲ್ಯದ ಶಿಕ್ಷಣಕ್ಕೂ ಸಮರ್ಥ ವಜ್ರಲೇಪನವಿದ್ದರೆ ಅನ್ಯ ಭಾಷೆ, ವಿಚಾರಗಳ ಪ್ರಹಾರದಿಂದ ಊರುಭಂಗವಾಗುವ ಪ್ರಮಾದ ತಪ್ಪಬಹುದು.

ನಮ್ಮ ಶಿಕ್ಷಣ ವ್ಯವಸ್ಥೆಗೆ ಕಾಯಕಲ್ಪವಾಗಬೇಕು. ಶಿಕ್ಷಣ ನೀತಿಯಲ್ಲಿ ಅಮೂಲಾಗ್ರ ಬದಲಾವಣೆಯಾಗಬೇಕು ಎಂಬ ಆಶಯಗಳನ್ನು ಎಲ್ಲರೂ ವ್ಯಕ್ತಪಡಿಸುತ್ತಾರೆ. ಈಗಿರುವ ಶಿಕ್ಷಣ ಪದ್ಧತಿಯ ತತ್ವದಂತೆ 'ಅದೂ ಅಲ್ಲ ಇದೂ ಅಲ್ಲ' ಅಥವಾ 'ಅದೂ ಬೇಡ ಇದೂ ಬೇಡ' ಎನ್ನುವವರು ದಿಕ್ಕು ಯಾವುದು ಎಂಬ ಪ್ರಶ್ನೆ ಹಾಕಿದರೆ ಆಕಾಶವನ್ನು ಇಲ್ಲವೇ ನೆಲವನ್ನು ನೋಡುತ್ತಾರೆ. ಬಹುತೇಕ ಅಭಿವ್ಯಕ್ತಿಗಳು ಗೊಂದಲದೊಂದಿಗೆ ಪರ್ಯವಸಾನವಾಗುತ್ತವೆ.

ಇಂದಿನ ಸಾಮಾನ್ಯ ದೂರುಗಳೆಂದರೆ ಶಿಕ್ಷಣದಲ್ಲಿ ಮಾಹಿತಿ ಇದೆ; ಜ್ಞಾನವಿಲ್ಲ. ಮಾನಸಿಕ, ದೈಹಿಕ ವ್ಯಾಯಾಮವಿದೆ; ಸರ್ವಾಂಗೀಣ ವಿಕಾಸವಿಲ್ಲ. ಯಾಕೆ ಹೀಗೆ ಎಂಬುದರ ಬಗ್ಗೆ ನಿತ್ಯ ತಲೆ ತುರಿಸುತ್ತೇವಾದರೂ ನಿಖರವಾದ ಉತ್ತರಗಳು, ಪರಿಹಾರಗಳು ದೊರಕದೆ ಒಟ್ಟಾರೆ ಸ್ಥಿತಿ ಗೋಜಲಾಗಿದೆ. ನಾವು ನೀಡುತ್ತಿರುವ, ಪಡೆಯುತ್ತಿರುವ ಶಿಕ್ಷಣದ ಸಮಸ್ಯೆಗಳನ್ನು ಮೊದಲು, ನಂತರ ಮರೀಚಿಕೆಯಾಗಿರುವ ಪರಿಹಾರ ಕುರಿತುಯೋಚಿಸೋಣ.

ಶಿಕ್ಷಣವು ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ, ಉನ್ನತಿಗೆ ಮತ್ತು ಪರಿಪೂರ್ಣತೆಗೆ ಕಾರಣವಾಗುತ್ತದೆಂದು ಅಥವಾ ಕಾರಣವಾಗಬೇಕೆಂದು ನಂಬಲಾಗಿದೆ. ಇಂತಹ ಶಿಕ್ಷಣದಲ್ಲಿ ಬುದ್ಧಿ ಮತ್ತು ದೇಹ ಇವೆರಡನ್ನೂ ವಿಕಾಸ ಗೊಳಿಸಬಲ್ಲ, ಜಾಗೃತಗೊಳಿಸಬಲ್ಲ ಅಂಶಗಳು ಮುಖ್ಯವಾಗಿರಬೇಕಾಗುತ್ತವೆ. ಮನುಷ್ಯನು ಎಲ್ಲಿಯವರೆಗೆ ಸಮಾಜ ಜೀವಿಯಾಗಿರಬೇಕಾದ ಅನಿವಾರ್ಯತೆಯನ್ನು ಹೊಂದಿರುತ್ತಾನೋ ಅಲ್ಲಿಯವರೆಗೂ ಆತನ ನಡೆವಳಿಕೆಗಳು ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರಬೇಕಾಗಿರುತ್ತವೆ. ಆದ್ದರಿಂದ 'ಶಿಕ್ಷಣ'ವೆಂಬ ಪದಾರ್ಥದಲ್ಲಿ ಮನುಷ್ಯನು ತನ್ನ ಬದುಕಿನ ವಿವಿಧ ಮಜಲುಗಳಲ್ಲಿ ಎದುರಿಸುವ ಪ್ರಶ್ನೆಗಳಿಗೆ ಉತ್ತರಿಸಲು ಬೇಕಾದ ಎಲ್ಲ ವ್ಯಂಜನಗಳಿರಬೇಕಾಗುತ್ತದೆ. ಇದಕ್ಕಾಗಿ ಭಾಷೆ, ಸಾಹಿತ್ಯ, ವಿಜ್ಞಾನ, ಗಣಿತ, ನೀತಿ ಮುಂತಾದ ಪರಿಕರಗಳಲ್ಲದೆ ಸದೃಢ ಸುಸ್ವರೂಪಿ ದೇಹಕ್ಕೆ ಅಗತ್ಯವುಳ್ಳ ಆಟಗಳು, ವ್ಯಾಯಾಮಗಳೂ ಶಿಕ್ಷಣದ ಅಂಗಗಳಾಗಿವೆ. ಇವನ್ನು ಗಳಿಸುವ ನಿಟ್ಟಿನಲ್ಲಿ ಉತ್ತೇಜನಕ್ಕಾಗಿ ಸ್ಪರ್ಧೆಗಳು ಅಥವಾ ಪರೀಕ್ಷೆಗಳು ಇರುತ್ತವೆ. ಆ ಸ್ಪರ್ಧೆಗಳ ಮುಖಾಂತರ ಶಿಕ್ಷಣದ ಮಟ್ಟ ಹೆಚ್ಚುತ್ತದೆ ಮತ್ತು ಸ್ಪರ್ಧಾಮನೋಭಾವದಿಂದ ಅರಿವಿನ ಆಸೆ ಹಿಗ್ಗಿ ಅರ್ಹತೆಯತ್ತ ಶಿಕ್ಷಣಾರ್ಥಿ ದಾಪುಗಾಲಿಡುತ್ತಾನೆ.

ಇಂತಹ ಮೂಲಧಾತುಗಳಿಂದ ನಮ್ಮ ಶಿಕ್ಷಣ ವ್ಯವಸ್ಥೆ ರೂಪುಗೊಂಡಿದೆ. ಆದರೆ ಈ ಆಶಯಗಳು ಇಂದಿನ ಶಿಕ್ಷಣ ವಿಧಾನದಲ್ಲಿ ಸಾಕಾರವಾಗಿವೆಯೇ?

- ಒಬ್ಬ ಮನುಷ್ಯನಂತೆ ಇನ್ನೊಬ್ಬನಿಲ್ಲ. ಬಣ್ಣ, ಎತ್ತರ, ಆಕಾರ, ವರ್ಚಸ್ಸು, ಬುದ್ಧಿಮತ್ತೆ,

ಗುಣಗ್ರಾಹಿತನ, ನೈತಿಕತೆ ಮತ್ತಿತರ ವಿವಿಧಾಂಗಗಳಲ್ಲಿ ಒಬ್ಬನಂತೆ ಇನ್ನೊಬ್ಬನಿಲ್ಲ. ಸಾಂಸ್ಥಿಕವಾಗಿ ನಡೆಯುವ ವಿದ್ಯಾದಾನ ಪದ್ಧತಿಯಲ್ಲಿ ಪ್ರತಿಯೊಬ್ಬನ ಆಸಕ್ತಿಗಳನ್ನು, ಬೇಕು-ಬೇಡಗಳನ್ನು, ಅಗತ್ಯಗಳನ್ನು ಪ್ರತ್ಯೇಕವಾಗಿ ಗಣನೆಗೆ ತೆಗೆದುಕೊಂಡು ಆತನಿಗೆ ಬೇಕಾದ ಪೌಷ್ಠಿಕಾಂಶಗಳನ್ನು ಕೊಡುವ ಶಿಕ್ಷಣ ವಿಧಾನ ಎಲ್ಲೂ ಇಲ್ಲ. ಪಂಚತಂತ್ರದಲ್ಲಿ ನಾಲ್ವರು ರಾಜಕುಮಾರರಿಗೆ ನೀತಿಕಥೆಗಳನ್ನು ಹೇಳಿ ಅವರನ್ನು ಲೋಕಜ್ಞರನ್ನಾಗಿ ಮಾಡಿದ ಕಥೆಯಿದೆ. ಅವರು ಸಹೋದರರು. ಆ ನಾಲ್ವರಲ್ಲಿ ಸಮಾನವಾದ ಗುಣವಿಶೇಷಗಳು ಅಥವಾ ಗುಣಹೀನತೆಗಳು ಇದ್ದವೆಂದೂ ಅವರು ಒಂದೇ ಹಿನ್ನೆಲೆಯವರೆಂದೂ ಅವರು ಬಂದ ಮತ್ತು ಮರಳಬೇಕಾದ ಸ್ಥಳ ಒಂದೇ ಇತ್ತೆಂದೂ ಭಾವಿಸಿದರೆ ಅವರಿಗೆ ನೀಡಿದ ಒಂದೇ ಬಗೆಯ ಶಿಕ್ಷಣ ಆ ಪರಿಸ್ಥಿತಿಗೆ ಅನುಗುಣವಾಗಿತ್ತೆಂದು ತಿಳಿಯಬಹುದು.

ಆದರೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ವೈಯಕ್ತಿಕತೆಯಿಲ್ಲ. ಅದೊಂದು ಸಾಮೂಹಿಕ ದಾನ. ಗಿಡಮರಗಳಲ್ಲೂ ಒಂದು ತಳಿಗೆ ಬೇಕಾದ ಗೊಬ್ಬರ ಇನ್ನೊಂದು ತಳಿಗೆ ಹೊಂದುವುದಿಲ್ಲ. ಪ್ರತಿಯೊಂದು ಸಸ್ಯದ ಲಕ್ಷಣಗಳಿಗನುಸಾರವಾಗಿ ನೀರು, ಗೊಬ್ಬರ, ಕ್ರಿಮಿನಾಶಕಗಳನ್ನು ನೀಡಲಾಗುತ್ತದೆ. ಆದರೆ ನಾವು ಒಂದು ಸಮೂಹಕ್ಕೆ ಒಟ್ಟಾಗಿ ಒಂದಷ್ಟು ಆಟ-ಪಾಠಗಳನ್ನು ನೀಡುತ್ತೇವೆ. ಶಕ್ತರು ಶೀಘ್ರವಾಗಿ ತಮಗೆ ಬೇಕಾದ್ದನ್ನು ಗಳಿಸಿಕೊಂಡರೆ, ಅಶಕ್ತರು ಈ ಶಕ್ತಿ ಸ್ಪರ್ಧೆಯಲ್ಲಿ ಹಿಂದುಳಿಯುತ್ತಾರೆ. ಇನ್ನೊಂದೆಡೆ, ಒಬ್ಬ ಸಂಗೀತಗಾರನಾಗಬೇಕಾದವನಿಗೆ ಇತರ ವಿಚಾರಗಳ ಕುರಿತು ಆಸಕ್ತಿಯಿಲ್ಲದಿದ್ದರೂ, ಆತನಿಗೆ ಅವು ಬೇಡದಿದ್ದರೂ ಸಾಮೂಹಿಕ ಶಿಕ್ಷಣ ಪದ್ಧತಿಯಲ್ಲಿ ಆತನಿಗೆ ಈ ಬಲವಂತದ ಮಾಘಸ್ನಾನ ಅನಿವಾರ್ಯ. ಸಾಹಿತಿಯಾಗ ಬೇಕಾದವನಿಗೆ, ವಿಜ್ಞಾನಿಯಾಗಬೇಕಾದವನಿಗೆ ಹೀಗೆ ಬೇರೆಬೇರೆ ರುಚಿಯವರಿಗೂ ಈ ಒತ್ತಡದ ಶಿಕ್ಷಣವನ್ನು ನೀಡಲಾಗುತ್ತದೆ.

ತಾನು ಏನಾಗಬೇಕೆಂದು ನಿರ್ಧರಿಸುವ ಆಯ್ಕೆ, ಸ್ವಾತಂತ್ರ್ಯ, ಹಕ್ಕು ಇಂದಿನ ವಿದ್ಯಾರ್ಥಿಗಿಲ್ಲ. (ಹಿರಿಯರು, ಶಿಕ್ಷಕರು, ಪೋಷಕರು, ಮತ್ತಿತರ ಸಾಮಾಜಿಕ ಚುಕ್ಕಾಣಿಯ ಒಡೆಯರು) ತಮ್ಮ ಕನಸುಗಳನ್ನು ಕಿರಿಯರು ಸಾಕಾರಗೊಳಿಸಬೇಕೆಂದು ಕಾಯುತ್ತಾರೆ. ಪ್ರತಿಯೊಬ್ಬ ಹಿರಿಯನೂ ತನ್ನ ರಕ್ಷಿತ ವಿದ್ಯಾರ್ಥಿಯು ಡಾಕ್ಟರನೋ ಎಂಜಿನಿಯರನೋ ಆಗಬೇಕೆಂಬ ಆಸೆಯಿಂದ ವಿದ್ಯಾರ್ಥಿಯ ಮನಸ್ಸಿನ/ಇಚ್ಛೆಯ ತರಂಗಾಂತರಗಳನ್ನು ಅಳೆಯುವ ಗೋಜಿಗೆ ಹೋಗದೆ ತನಗೆ ಬೇಕಾದಂತೆ ವಿದ್ಯಾರ್ಥಿಯ ಹಾದಿಯನ್ನು ನಿರೂಪಿಸುತ್ತಾನೆ. ಇದೊಂದು ರೀತಿಯ 'ಬ್ಯಾಕ್ ಸೀಟ್ ಡ್ರೈವಿಂಗ್'. ಇದರಿಂದ ಅಪಘಾತಗಳ ಅವಕಾಶಗಳೇ ಹೆಚ್ಚು. ಅಪಘಾತಗಳಾಗದೆ ನೆಲೆನಿಂತವರಲ್ಲಿ ಬಹುಪಾಲು 'ಇದೊಂದು ವಿಧಿ' ಅಂತಲೋ ತಮ್ಮ ಪ್ರಾರಬ್ಧವೆಂತಲೊ ಸದಾ ವಿಕ್ಷಿಪ್ತ ಸ್ಥಿತಿಯಲ್ಲೇ ಬದುಕುತ್ತಿರುತ್ತಾರೆ; ಸಾಮಾಜಿಕ ವ್ಯತ್ಯಸ್ತತೆಗೆ ಕಾರಣರಾಗುತ್ತಾರೆ. ಯಾವನೇ ಶಿಕ್ಷಣಾರ್ಥಿಗೆ ಆತನ ಗುರಿಯನ್ನು ತಲುಪಲು ನೆರವಾಗಬೇಕಾದ ಶಿಕ್ಷಣವನ್ನು ನೀಡಬೇಕು. ಆತನು ಏನಾಗಬೇಕು ಎಂದು ನಾವು ಹೇಳಿ ಕೊಡುವುದರ ಬದಲು ತಾನು ಏನಾಗಬೇಕು ಎಂದು ಆನತೇ ನಿರ್ಧರಿಸಲು ಬೇಕಾದ ಪರಿಕರಗಳನ್ನು ಶಿಕ್ಷಣದ ಮುಖಾಂತರ ಆತನು ಪಡೆಯಬೇಕು.

ನಾವು ನೀಡುವ ನೈತಿಕ ಶಿಕ್ಷಣವೆಂಬುದು ಅತಿ ಆದರ್ಶಗಳ ಸೋಗಾಗುವುದರಿಂದ ಅವು ಸಾಮಾನ್ಯ ವಿದ್ಯಾರ್ಥಿಗಳಿಗೆ ನೀಡುವ ಅತ್ಯಂತ ಉತ್ತಮ ಶಿಕ್ಷಣವೆಂದು ನಾವು ಪರಿಭಾವಿಸುವ ವಿಚಾರಗಳಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿಯೇ ಇರುವುದಿಲ್ಲ. 'ಬರೀ ಬೋರು' ಎಂದುಕೊಂಡು

ಒಬ್ಬ ವಿದ್ಯಾರ್ಥಿ ಯಾವುದೇ ಪಾಠದ ನಂತರ ಹೊರ ಹೋಗುತ್ತಾನಾದರೆ ಅದು ಪಾಠದ ಆಶಯಗಳಿಗೆ ತದ್ವಿರುದ್ಧ ಗತಿಯಲ್ಲಿ ಆತನನ್ನು ಒಯ್ಯುತ್ತದೆ. ಅದು 'ಕೌಂಟರ್ ಪ್ರೊಡಕ್ಟಿವ್' ಆಗುತ್ತದೆ. ಇದಕ್ಕೆ ಕಾರಣವೆಂದರೆ ಶಿಕ್ಷಣದ ಹೊರತಾದ ಆತನ ಬಾಳ್ವೆಯು ಒಂದು ವೀರೋಧಾಭಾಸಗಳ ಆಗರವಾಗಿರುವುದು. ಶಾಲೆಯೊಳಗೆ ನಿಜವನ್ನು ನಿರೂಪಿಸುತ್ತಾ ಬದುಕಿನೊಳಗೆ ಸುಳ್ಳಿನ ವಾಸ್ತವಕ್ಕೆ ವಿದ್ಯಾರ್ಥಿ ನೂಕಲ್ಪಟ್ಟರೆ ಆತನ ಮೇಲಾಗಬಹುದಾದ ಭೀಕರ ಪರಿಣಾಮಗಳನ್ನು ಗಮನಿಸಿ. ಆತನಿಗೆ ಮೊದಲು ಅಚ್ಚರಿ, ನಂತರ ಆತಂಕ, ನಂತರ ನಿರಾಶೆ ಮೂಡುತ್ತದೆ. ಕೊನೆಗೆ ಆತನೂ ಒಟ್ಟಾರೆ ಕುಸಿಯುತ್ತಿರುವ ಮೌಲ್ಯಗಳಿಗೆ ಸಾಕ್ಷಿ ಮಾತ್ರವಲ್ಲ, ಸಂಕೇತ ಮಾತ್ರವಲ್ಲ, ವೇಗೋತ್ಕರ್ಷವೂ ಆಗಿ ಅಳಿಯುತ್ತಾನೆ.

ಶಿಕ್ಷಣವು ಆದರ್ಶ ಹಾಗೂ ವಾಸ್ತವಗಳ ನಡುವಣ ಸಂವಹನವಾಗಬೇಕು; ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಜ್ಞಾನದ ಮೊದಲ ಪಾಠಗಳನ್ನು ನೀಡಿ ತಕ್ಷಣ ಆತನ ಆಸಕ್ತಿಯ ಭೂಮಿಕೆಯನ್ನು ಸಿದ್ಧಗೊಳಿಸಿ ಅದರಲ್ಲೇ ಆತ ತಲ್ಲೀನನಾಗುವಂತೆ ಮಾಡಬೇಕು. ಗ್ರಂಥಾಲಯಗಳ ಮತ್ತು ಉತ್ತಮ ಶಿಕ್ಷಣ ಮಾರ್ಗದರ್ಶಕರ ಸಹಾಯದಿಂದ ಆತನ ಆಸಕ್ತಿಯ ಕೇಂದ್ರ ಚಿಗುರುವಂತೆ ಮತ್ತು ಟಿಸಿಲೊಡೆದು ಎತ್ತರೆತ್ತರಕ್ಕೇರುವಂತೆ ಮಾಡಬೇಕು. ಆತ ಆಯ್ಕೆ ಮಾಡಿಕೊಂಡ ವಿಚಾರದ ಕುರಿತು ಇತರರು ಮರುಕ ಪಡದಂತಹ ವಾತಾವರಣ ನಿರ್ಮಾಣವಾಗಬೇಕು. ಬಿಳಿ ಕಾಲರಿನ ಗುಮಾಸ್ತರ ಬದಲಿಗೆ ತಜ್ಞರನ್ನು ಅಂತಿಮ ಆಭರಣಗಳಾಗಿ ತಯಾರಿಸಬೇಕು.

ಈ ಆಶಯಗಳನ್ನು ರೂಪಿಸುವಲ್ಲಿ ಶಿಕ್ಷಣ ಮಾಧ್ಯಮ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ಯಾರಿಗೇ ಆಗಲಿ ತನ್ನ ಮಾತೃಭಾಷೆಯಲ್ಲಿ ಕಲಿಯುವುದು ಸುಲಭ. ಚಿಕ್ಕ ಮಗು ಸನ್ನೆಗಳ ಮುಖಾಂತರ ಮೊದಲ ಪಾಠಗಳನ್ನು ಕಲಿಯುತ್ತದೆ. ನಂತರ ತನ್ನ ಮನೆಯವರ ಅದರಲ್ಲೂ ತಾಯಿ ಜೊತೆ ಸಂಭಾಷಣೆಯನ್ನು ಆರಂಭಿಸುತ್ತದೆ. ಅದರ ಕಲಿಕೆಯ ಮೊದಲ ಹಂತದಲ್ಲಿ ಯಾರೂ ಅದಕ್ಕೆ ವ್ಯಾಕರಣವನ್ನಾಗಲೀ ಭಾಷಾಶಾಸ್ತ್ರವನ್ನಾಗಲೀ ಪಾಠ ಮಾಡುವುದಿಲ್ಲ. ಆದರೂ ಅದು ತನಗೊಂದು ಭಾಷೆಯನ್ನು ಹಾಗೂ ಆ ಭಾಷೆಯ ಸಮರ್ಪಕ ಬಳಕೆಯನ್ನು ರೂಢಿಮಾಡಿಕೊಳ್ಳುವುದಿಲ್ಲವೇ? ಇದಕ್ಕೆ ಕಾರಣವೆಂದರೆ ಸುಲಭ ಸಂವಹನಕ್ಕೆ ಅಗತ್ಯವಾದ ಮಾಧ್ಯಮದ ಅಂಶಗಳು ಅದಕ್ಕೆ ಮೌಖಿಕವಾಗಿ ಲಭಿಸುತ್ತವೆ; ಈ ಲಭ್ಯತೆಗೆ ಪೂರಕವಾದ ಗ್ರಹಿಕೆಗಳು ಅಂತರ್ಗತವಾಗಿರುತ್ತದೆ. ಆದ್ದರಿಂದ ಇದನ್ನೇ ಬುನಾದಿಯಾಗಿಟ್ಟುಕೊಂಡು ಶಿಕ್ಷಣದ ಮೊದಲ ಕೆಲವು ವರುಷಗಳಾದರೂ ವಿಚಾರ ಪ್ರಪಂಚ ಮಾತೃಭಾಷೆಯಲ್ಲಿರಬೇಕು.

ಈ ಕಾರ್ಯಕ್ಕೆ ಸಾಮಾಜಿಕ ಬದಲಾವಣೆಯೂ ಅಗತ್ಯ. ಶ್ರೇಷ್ಠತೆಯ ಕಲ್ಪನೆಯ ಮಾನದಂಡಗಳು ಬದಲಾಗಬೇಕು. ಡಾಕ್ಟರನು ಇಂಜಿನಿಯರ್‌ಗಿಂತ ಅಥವಾ ಇಂಜಿನಿಯರ್ ಡಾಕ್ಟರನಿಗಿಂತ ಶ್ರೇಷ್ಠನು ಎಂಬ ಕಾಲ್ಪನಿಕ ಅಭಿದಾನ ಬದಲಾಗಿ ಎಲ್ಲ ವೃತ್ತಿ-ಪ್ರವೃತ್ತಿ-ಉದ್ಯೋಗಗಳೂ ಸಮಾನವೆಂಬ ನಿಲುವನ್ನು ತಳೆಯುವುದಕ್ಕೆ ವೇದಿಕೆ ನಿರ್ಮಾಣವಾಗಬೇಕು. ಶಾಲೆಯ ಕಟ್ಟಡದೊಳಗಿನ ಶಿಕ್ಷಣಕ್ಕಿಂತಲೂ .ಹೊರಗಿನ ಶಿಕ್ಷಣ ವ್ಯಾಪಕವೆಂಬ ಕಲ್ಪನೆ ಶಿಕ್ಷಕನಿಗಿರಬೇಕು. ಆಗ ಆತ ತನ್ನ ವಿದ್ಯಾರ್ಥಿಯನ್ನು ಬದುಕಿಗೆ ಸಜ್ಜು ಮಾಡಬಲ್ಲ.

ಇದನ್ನೆಲ್ಲಾ ಈಗಿನ ಚೌಕಟ್ಟಿನಲ್ಲೇ ರೂಪಿಸಬಹುದು; ನಿರೂಪಿಸಬಹುದು. ಮನಸ್ಸಿದ್ದಲ್ಲಿ ಮಾರ್ಗ. ಅಸಾಧ್ಯವೆನ್ನುವವರು ನಿರಾಶಾವಾದಿಗಳು ಅಥವಾ ಸೋಮಾರಿಗಳು. ●

ಶಬ್ದ ಪ್ರಯೋಗಗಳಲ್ಲಿ ಅದ್ಭುತ ಶಕ್ತಿಯಿದೆ : ಎಚ್ಚರಿಕೆ !

- ವಿಶ್ವೇಶ್ವರ ಭಟ್

ಆ ಒಂದು ಪದ ಇಡೀ ವಿಶ್ವವನ್ನು ನಲುಗಿಸಿತು! ಆಶ್ಚರ್ಯವಾಗಬಹುದು. ಆ ಒಂದು ಪದ ಜಗತ್ತನ್ನೇ ಕದಲಿಸಿತೆಂದರೆ. ಆದರೆ, ಅದು ಸತ್ಯ. ಒಂದು ಪದಕ್ಕೆ ಅಂಥ ದುರಂತವೆಸಗುವ. ಸಾಮರ್ಥ್ಯವಿದೆ. ತಮಾಷೆ ಅಲ್ಲ, ಈ ಜಗತ್ತಿನಲ್ಲಿ ದುರಂತಗಳು ಸಂಭವಿಸಿದ್ದರೆ ಅವು ತುಪಾಕಿಗಳಿಂದ ಅಲ್ಲ, ಬಂದೂಕಿನಿಂದ ಅಲ್ಲ, ಅಣುಬಾಂಬಿನಿಂದಲೂ ಅಲ್ಲ.

ಪದಗಳಿಂದ ! ಹಾಗೂ ಅವುಗಳ ತಪ್ಪು ಬಳಕೆಯಿಂದ.

ರಿಚರ್ಡ್ ಲೆಡರರ್ ಹೀಗೆ ಹೇಳುತ್ತಿದ್ದರೆ ಕುತೂಹಲವಾಗುತ್ತದೆ. ಈತನನ್ನು ಭಾಷಾ ವಿದ್ವಾಂಸ, ಕೋವಿದ, ಪಂಡಿತ ಎಂದೆಲ್ಲಾ ಕರೆದು ಹಳಿಯಲು ಇಷ್ಟವಿಲ್ಲ. ಈತನಿಗೆ ಪದಗಳೆಂದರೆ ಪ್ರಾಣ. ಭಾಷೆಯೆಂದರೆ ಪಂಚಪ್ರಾಣ. ಪದಗಳನ್ನು ತಪ್ಪಾಗಿ ಪ್ರಯೋಗಿಸಿದರೆ ದುಸುಮುಸು ಕೋಪ. ಪದಪ್ರಯೋಗದ ಬಗ್ಗೆ ಅಸಡ್ಡೆಯಿರುವವರ ಮೇಲೆ ಹಿಡಿಶಾಪ. ಪದ ಹಾಗೂ ಭಾಷೆಯನ್ನು ಲೆಡರರ್ ತನ್ನ ಬದುಕಿನಂತೆ ಪ್ರೀತಿಸಿದವನು. ಅವುಗಳ ಬಗ್ಗೆ ಕಾಳಜಿ, ಅರಿವು, ಜಾಗೃತಿಯನ್ನು ಮೂಡಿಸಿದವನು. ಭಾಷೆಯ ಬಗ್ಗೆ ಆತ ಬರೆಯುತ್ತಿದ್ದ ಅಂಕಣಗಳು ಅನೇಕ ದೇಶಗಳ ಅವೆಷ್ಟೋ ಪತ್ರಿಕೆಗಳಲ್ಲಿ ಕಂಗೊಳಿಸುತ್ತಿದ್ದವು. ಆತ ಬರೆದ The Miracle of Language, The play of words, Crazy English, Anguished English, Get Thee To a Punnery ಮುಂತಾದ ಪುಸ್ತಕಗಳೇ ಆತನ ಭಾಷಾ ಪ್ರೇಮಕ್ಕೆ ಸಾಕ್ಷಿ.

ಕೆಟ್ಟ ಉಚ್ಚಾರ, ತಪ್ಪು ಪದ ಪ್ರಯೋಗದಿಂದ ಭಾಷೆಯನ್ನು ಕಲುಷಿತಗೊಳಿಸುವವರ ಮೇಲೆ ಮುಗಿಬೀಳುತ್ತಿದ್ದ, ದಾರಿಯಲ್ಲೇ ಲೆಡರರ್ ಜಗಳಕ್ಕೆ ನಿಲ್ಲುತ್ತಿದ್ದ. ಪೊಲೀಸರು, ವೈದ್ಯರು, ಅಂಗಡಿಯಾತ ತಪ್ಪಾಗಿ ಮಾತಾಡಿದರೆ, ಹಾಗೆ ಮಾತಾಡಬಾರದು, ಸರಿಯಾದ ಪ್ರಯೋಗ ಹೀಗೆ ಎಂದು ಅವರಿಗೆ ತಿಳಿಸಿ ಹೇಳುತ್ತಿದ್ದ. ಲೆಡರರ್ ಬಂದರೆ ಸಾಕು ಕೆಲವರು ಮಾತೇ ಆಡುತ್ತಿರಲಿಲ್ಲ. ಇನ್ನು ಕೆಲವರು ತೀರ ಎಚ್ಚರಿಕೆಯಿಂದ ಮಾತಾಡುತ್ತಿದ್ದರು. ಸ್ವಲ್ಪ ಎಡವಿದರೂ ಲೆಡರರ್‌ನ ಲೆಕ್ಚರಿಕೆ ತಪ್ಪಿದ್ದಲ್ಲ. ಒಮ್ಮೆ ಹೀಗೆ ಆಯಿತು. ತನ್ನ ಮಗಳ ಶಾಲಾ ವಾರ್ಷಿಕೋತ್ಸವಕ್ಕೆಂದು ಲೆಡರರ್ ಹೊರಟಿದ್ದ. ಆಗಲೇ ತಡವಾಗಿತ್ತು. ಕಾರ್ಯಕ್ರಮ ತಪ್ಪಿಹೋದರೆ ಮಗಳು ಮುನಿಸಿಕೊಂಡಾಳೆಂದು ಜೋರಾಗಿ ಕಾರನ್ನು ಓಡಿಸತೊಡಗಿದ. ಸಿಗ್ನಲ್ ದೀಪದ ಬಳಿ ಒಂದು ಕ್ಷಣ ನಿಲ್ಲದೇ, ಸಂಚಾರಿ ನಿಯಮ ಉಲ್ಲಂಘಿಸಿ ವೇಗವಾಗಿ ಕಾರನ್ನು ಚಲಾಯಿಸಿಕೊಂಡು ಬಂದ. ಕಾರ್ಯಕ್ರಮ ಆಗತಾನೆ ಆರಂಭವಾಗಿತ್ತು. ಸಾವರಿಸಿಕೊಂಡು ಕುಳಿತುಕೊಳ್ಳುತ್ತಿದ್ದಂತೆ ಹಿಂಬದಿಯಿಂದ ಯಾರೋ ಭುಜ ತಟ್ಟಿದರು.

ತಿರುಗಿ ನೋಡಿದರೆ ಪೊಲೀಸರು !

ಲೆಡರರ್ ಕಕ್ಕಾಬಿಕ್ಕಿ. 'ಪಾರ್ಷಿಯಲ್ ಸ್ಟಾಪ್ ಬಳಿ ಕಾರನ್ನು ನಿಲ್ಲಿಸಬೇಕೆಂದು ಗೊತ್ತಿಲ್ಲವೇ?' ಎಂದು ಪೋಲಿಸರು ದಬಾಯಿಸಿದರು. ಅದೆಲ್ಲಿತ್ತೋ ಲೆಡರರ್‌ಗೆ ಸಿಟ್ಟು ? "ಏನ್ರಿ? ಏನ್ ಮಾತಾಡ್ತೀರ? ನಾಚಿಕೆಯಾಗೊಲ್ವಾ? ನಾನು ಸಂಚಾರ ನಿಯಮ ಉಲ್ಲಂಘಿಸಿರಬಹುದು. ಆದರೆ ನೀವು ಭಾಷೆಯ ಕೊಲೆ ಮಾಡುತ್ತಿದ್ದೀರಿ? ಅಲ್ರೀ ಪಾರ್ಷಿಯಲ್ ಸ್ಟಾಪ್ ಅಂದ್ರೆ ಏನು? ಭಾಷೆಯನ್ನು ಮಲಿನಗೊಳಿಸುತ್ತಿದ್ದೀರಿ, ಹೀಗೆ ಮಾಡಿ ಭಾಷೆಯನ್ನು ಕೊಲ್ಲುತ್ತೀರಿ. ನಿಮ್ಮ ಮೇಲೆ ನಾನೇಕೆ ಕ್ರಮ ಕೈಗೊಳ್ಳಬಾರದು?" ಎಂದು ಲೆಡರರ್ ಕಿರುಚತೊಡಗಿದ. 'ಓಹೋ ಇಂಗ್ಲಿಷ್ ಬಗ್ಗೆ ಪತ್ರಿಕೆಗಳಲ್ಲಿ ಬರೆಯುವ ಅಂಕಣಕಾರರು ನೀವೇ ಏನು ? ಅದೆಷ್ಟು ಚೆನ್ನಾಗಿ

ಬರೀತೀರಿ. ಕ್ಷಮಿಸಿ ತಪ್ಪಾಯಿತು'' ಎಂದು ಪೊಲೀಸರು ಅಲ್ಲಿಂದ ಕಾಲುಕಿತ್ತರು.

ಇದು ಲೆಡರರ್ ವರಸೆ.

ತಪ್ಪಾಗಿ ಬೋರ್ಡ್ ಬರೆಯುವವರ ವಿರುದ್ಧ, ಬರೆಸುವ ಅಂಗಡಿಕಾರರ ವಿರುದ್ಧ, ಅಪಾರ್ಥ ಕಲ್ಪಿಸುವ ಸೂಚನೆ ಬರೆಸುವ ಪೊಲೀಸರ ವಿರುದ್ಧ ಆತ ಕೋರ್ಟಿನಲ್ಲಿ ಕೇಸು ಹಾಕುತ್ತಿದ್ದ..ಕೆಟ್ಟ ಭಾಷಣ ಮಾಡುವ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ. ಅಸಂಬದ್ಧವಾಗಿ ಕಂಪ್ಲೇಂಟು ಬರೆದುಕೊಳ್ಳುವ ಪೊಲೀಸರನ್ನು ಗೋಳುಹುಯ್ದುಕೊಳ್ಳುತ್ತಿದ್ದ. We celebrate words as the most glorious of all human inventions incomparably the finest of our achievements (ಮಾನವನ ಅವಿಷ್ಕಾರಗಳಲ್ಲೇ ಪದಗಳು ಅತ್ಯಂತ ಅಮೂಲ್ಯವಾದುದು. ನಮ್ಮೆಲ್ಲ ಸಾಧನೆಗಳ ಪೈಕಿ ಹೋಲಿಕೆಗೆ ಸಿಗದಷ್ಟು ಸರ್ವೋತ್ಕೃಷ್ಟ) ಎಂಬುದು ಆತನ ನಂಬಿಕೆಯಾಗಿತ್ತು. ಪದಗಳೆಂದರೆ ಪವಾಡ. ಪದಗಳಿಗೆ ಸೋಲದವರೇ ಇಲ್ಲ. ಅವುಗಳನ್ನು ಬಳಸಿಯೂ ಸೋತಿರೆಂದರೆ ನಿಮ್ಮ ಪದಸಂಪತ್ತಿನ ಬಗ್ಗೆ ಯೋಚಿಸಿ. ಪದಗಳೆಂದೂ ನಿಮ್ಮನ್ನು ಸೋಲಿಸುವುದಿಲ್ಲ. ನೀವೇ ಪದಗಳಿಗೆ ಸೋಲಬೇಕು- ಇದು ಲೆಡರರ್‌ನ ಸಿದ್ಧಾಂತ.

ಪದಗಳಿಲ್ಲದಿದ್ದರೆ ಭಾಷೆ ಇಲ್ಲ. ಭಾಷೆ ಇಲ್ಲದಿದ್ದರೆ ಮನುಷ್ಯ ಸಂಪೂರ್ಣನಲ್ಲ. ಚುಂಬನದ ನಂತರ ಅತ್ಯಂತ ಪರಿಣಾಮಕಾರಿ ಸಂವಹನವೆಂದರೆ ಭಾಷೆ. ಭಾಷೆಯ ಮಿತಿಯೆಂದರೆ ಪದಗಳ ಮಿತಿ. ಕಾರಣ ನಾವು ವಿಚಾರ ಮಾಡುವುದು ಪದಗಳಿಂದಲೇ ಅಲ್ಲವೇ? ಪದಗಳ ಒಂದು ದೊಡ್ಡ ಉಪಯೋಗವೆಂದರೆ ಅದರೊಳಗೆ ನಮ್ಮ ವಿಚಾರವನ್ನು ಹುದುಗಿಸಿಡಬಹುದು. ಮನಸ್ಸನ್ನು ಅದರೊಳಗೆ ಮುಚ್ಚಿಡಬಹುದು. ಹಾಗೆ ತೆರೆಯುವುದೂ ಅದರಿಂದಲೇ. ಪದಗಳು ವಿಚಾರದ ಹೊದಿಕೆಗಳು. (ಇದನ್ನೇ ಪತ್ರಕರ್ತ ವೈಯೆನ್ಕೆ ತಮ್ಮ ಹನಿಗವನದಲ್ಲಿ ಹೀಗೆ ಹೇಳಿದ್ದರು- ಕವಿತೆ/ನೀನೇಕೆ/ಪದಗಳಲ್ಲಿ/ಅವಿತೆ).

ಲೆಡರರ್‌ಗೆ ಭಾಷೆ ಕೇವಲ ಒಂದು ಮಾಧ್ಯಮ ಅಥವಾ ಸಂವಹನ ಆಗಿರಲಿಲ್ಲ. ಅದೊಂದು ಶಿಸ್ತಾಗಿತ್ತು. ವ್ರತವಾಗಿತ್ತು, ನಿತ್ಯ ಕಾಯಕವಾಗಿತ್ತು, ಧ್ಯಾನವಾಗಿತ್ತು, ಜೀವನವಾಗಿತ್ತು. ಜನರು ಅವನನ್ನು ಹುಚ್ಚನೆಂದು ಜರಿದರು. ಆತ ಜಗ್ಗಲಿಲ್ಲ. ಇವನೊಬ್ಬ ಥೇಟು ಪಿರಕಿ ಎಂದು ಪೀಡಿಸಿದರು. ಆತ ಪರಿತಪಿಸಲಿಲ್ಲ. ಭಾಷಾಶುದ್ಧಿಯೇ ಜೀವನಶುದ್ಧಿ ಎಂಬ ನಿರ್ಧಾರಕ್ಕೆ ಬಂದುಬಿಟ್ಟ. ಕೆಟ್ಟದಾಗಿ ಮಾತಾಡುವವರನ್ನು, ಅಸಂಬದ್ಧ ಪದಪ್ರಯೋಗ ಮಾಡುವವರನ್ನು ಮಹಾಕೊಳಕರ ತರಹ ನೋಡುತ್ತಿದ್ದ. (ರಾಣಿ ಸತೀಶ್, ಅಲ್ಲಂ ವೀರಭದ್ರಪ್ಪ, ಬಂಗಾರಪ್ಪ, ದೇಶಪಾಂಡೆ, ಚಂದ್ರಕಾಂತ ಬೆಲ್ಲದ, ಸುಬ್ಬಾರೆಡ್ಡಿ ಮುಂತಾದವರ ಭಾಷಣ ಕೇಳಿದ್ದರೆ ಈ ಲೆಡರರ್ ಪ್ರತಿಕ್ರಿಯೆ ಇದಕ್ಕಿಂತ ಭಿನ್ನವಾಗಿ ಇರುತ್ತಿರಲಿಲ್ಲ. ಹಾಗೆಯೇ ಬಿ.ಜಿ. ಬಣಕಾರ್ ಅವರ ಲೇಖನ ಓದಿದ್ದರೂ)

ನ್ಯೂಯಾರ್ಕಿನ ಮೇಯರ್ ಕಚೇರಿಯ ಪಕ್ಕದಲ್ಲಿ Government Property: No Trespassing Without Permisssion ಎಂಬ ಬೋರ್ಡು ನೋಡಿ ಕೆಂಡಾಮಂಡಲವಾದ ಲೆಡರರ್, 'ಇಲ್ಲಿ without permission ಎಂದು ಬರೆದಿರುವುದು ಅನಗತ್ಯ. ಅವುಗಳ್ನು ಅಳಿಸಿಹಾಕಿ By.definition the act of trespassing is committed without permission. ಹೀಗೆಲ್ಲ ಅಸಂಬದ್ಧ-ಬರೆಯಬಾರದು' ಎಂದು ಮೇಯರ್ ಜತೆ ಜಗಳ ಕಾದ. ಅಡ್ಲಾಯ್ ಸ್ಟೀವನ್‌ಸನ್ ಎಂಬ ರಾಜತಾಂತ್ರಿಕನನ್ನು ಹೊಗಳುತ್ತಾ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ 'In eloguence of expression we had no peers and few equals' ಎಂದಿದ್ದಕ್ಕೆ ಲೆಡರರ್ 'Peers are not superiors; they are equals' ಎಂದು ಗೇಲಿ ಮಾಡಿದ. ನ್ಯೂಯಾರ್ಕಿನ ಮೇಯರ್ ರಾಬರ್ಟ್ ವಾಗ್ನರ್, ಉಪಾಧ್ಯಕ್ಷ ಚುನಾವಣೆಗೆ ನಿಂತಾಗ,

'I have reiterated over and over again what I have said before' (ನಾನು ಈಗಾಗಲೇ ಅನೇಕ ಬಾರಿ ಹೇಳಿರುವುದನ್ನೇ ಪುನಃ ಪುನಃ ಮತ್ತೆ ಪುನರುಚ್ಚರಿಸಿ ಹೇಳುವುದಾದರೆ) ಎಂದಿದ್ದಕ್ಕೆ ಲೆಡರರ್ "ಇಂಥ ಭಾಷಾದ್ವೇಷಿಯನ್ನು ಉಪಾಧ್ಯಕ್ಷನಾಗಿ ಒಪ್ಪಿಕೊಳ್ಳುವುದು ಅಸಾಧ್ಯ" ಎಂದು ಘೇಡಿಸಿದ.

ರಾಜಕಾರಣಿಗಳನ್ನು ಬಹುಶಃ ರಾಜಕೀಯ ವರದಿಗಾರರು ಟೀಕಿಸುವುದಕ್ಕಿಂತ ಕಟುವಾಗಿ ಟೀಕಿಸುತ್ತಿದ್ದ ಲೆಡರರ್, ದೇಶದ ಪ್ರಗತಿಯ ಕುರಿತು ಮಾತಾಡುವವರ ಭಾಷೆಯ ಸುಧಾರಣೆ ಮೊದಲು ಆಗಬೇಕೆಂದು ಹೇಳುತ್ತಿದ್ದ. ರಾಜಕೀಯ ಸಭೆಗಳಲ್ಲಿ ಲೆಡರರ್‌ನನ್ನು ಕಂಡರೆ, 'ದಯವಿಟ್ಟು ನನ್ನ ಮಾತಿನಲ್ಲಿ ಭಾಷಾದೋಷವಿದ್ದರೆ ಲೆಡರರ್ ಮನ್ನಿಸಬೇಕು' ಎಂದು ಮೊದಲೇ ತಪ್ಪುಕಾಣಿಕೆ ಅರ್ಪಿಸಿ ಮಾತಿಗೆ ಶುರುವಿಡುತ್ತಿದ್ದರು. ಯಾರಿಗೆ ಬೇಕು ಉಸಾಬರಿ, ಆತ ಮನಸ್ಸು ಮಾಡಿದರೆ ಪ್ರತಿ ಮಾತಿನಲ್ಲೂ ಕೊಂಕು, ದೋಷ ಹುಡುಕಬಲ್ಲ ಎಂಬ ಭಯ.

ಜಗತ್ತಿನ ಪ್ರಮುಖ ಕಾರು ಕಂಪನಿಗಳಲ್ಲಿ ಒಂದಾದ ಜನರಲ್ ಮೋಟರ್ಸ್ ಆಧುನಿಕ ಕಾರೊಂದನ್ನು ರೂಪಿಸಿ, ಅದಕ್ಕೆ 'ನೋವಾ' ಎಂದು ಹೆಸರಿಟ್ಟಿತು. ಅದರ ವಿನ್ಯಾಸ, ಕಾರ್ಯಕ್ಷಮತೆ ಬಗ್ಗೆ ಕಂಪನಿ ಅಧಿಕಾರಿಗಳಿಗೆ ಎಲ್ಲಿಲ್ಲದ ಉತ್ಸಾಹ, ನಿರೀಕ್ಷೆ. ಜಗತ್ತಿನೆಲ್ಲೆಡೆಯಿಂದ ಭಾರಿ ಬೇಡಿಕೆ ಬರಬಹುದೆಂದು ನಿರೀಕ್ಷಿಸಿದ್ದರು. ಕಾರನ್ನು ಪ್ರಯೋಗಾರ್ಥ ಸ್ಪೇನ್ ದೇಶದಲ್ಲಿ ಬಿಡುಗಡೆ ಮಾಡಿ, ಆನಂತರ ಉಳಿದ ದೇಶಗಳಿಗೆ ಕಳುಹಿಸಲು ನಿರ್ಧರಿಸಲಾಗಿತ್ತು. ಕಾರಿನ ಹೆಸರಿನ ಬಗ್ಗೆ ಲೆಡರರ್‌ನ ಅಭಿಪ್ರಾಯವನ್ನು ಕೇಳಿದರು. ಹೊಸ ಕಾರನ್ನು ನೋಡಿದ ಲೆಡರರ್, 'ಕಾರೇನೋ ಚೆನ್ನಾಗಿದೆ, ಆದರೆ ಹೆಸರು ಚೆನ್ನಾಗಿಲ್ಲ' ಎಂದ. 'ಹೌದಾ ಏಕೆ? ನಾವು ಹೆಸರನ್ನು ಈಗ ಬದಲಿಸೊಲ್ಲ. ಎಲ್ಲ ಕಾರುಗಳ ಮೇಲೆ ಈಗಾಗಲೇ ನೋವಾ ಎಂದು ಬರೆಸಿದ್ದೇವೆ. ಜಾಹೀರಾತನ್ನೂ ಸಹ ಕೊಟ್ಟಿದ್ದೇವೆ. ಜನರು ನೋವಾ ಕಾರಿನ ನಿರೀಕ್ಷೆಯಲ್ಲಿದ್ದಾರೆ. ಅಲ್ಲದೆ ನೋವಾ ನಮ್ಮ ಚೇರ್‌ಮನ್ ಮಗಳ ಹೆಸರು. ಬದಲಿಸಲಿಕ್ಕೆ ಆಗೋಲ್ಲ' ಎಂದ ಅಧಿಕಾರಿಯೊಬ್ಬ. ಅದಕ್ಕೆ ಲೆಡರರ್ "ನೋಡಿ ಪರವಾಗಿಲ್ಲ. ನೀವು ನನ್ನ ಅಭಿಪ್ರಾಯ ಕೇಳಿದ್ದಕ್ಕೆ ಹೇಳುತ್ತಿದ್ದೇನೆ ಅಷ್ಟೇ. ಸ್ಪ್ಯಾನಿಶ್ ಭಾಷೆಯಲ್ಲಿ ನೋವಾ ಎಂದರೆ ಚಲಿಸುವುದಿಲ್ಲ (immovable) ಚಲಿಸದೇ ಇರುವ ಎಂದರ್ಥ. ಕಾರಿಗೆ ಈ ಹೆಸರಿಟ್ಟರೆ ಹೇಗಿದ್ದೀತೆಂದು ನೀವೇ ನಿರ್ಧರಿಸಿ" ಎಂದ. ಲೆಡರರ್ ಹೇಳಿದಂತೆ ಆಯಿತು. ಸ್ಪೇನ್‌ನಲ್ಲಿ ನೋವಾ ಕಾರಿಗೆ ಬೇಡಿಕೆಯೇ ಹುಟ್ಟಲಿಲ್ಲ. ಭಾರಿ ಕನಸು ಕಂಡ ಕಂಪನಿ ಅಧಿಕಾರಿಗಳಿಗೆ 'ನೋವಾ'ಗಿರಬೇಕು?

ಕೋಕಾಕೋಲಾ ಪಾನೀಯವನ್ನು ಚೀನಾದಲ್ಲಿ ಇಷ್ಟಪಡದಿರಲು ಸಹ ಇದೇ ಕಾರಣವೆನ್ನುತ್ತಾನೆ ಲೆಡರರ್. ಕಾರಣ ಚೀನಿ ಭಾಷೆಯಲ್ಲಿ ಕೋಕಾಕೋಲಾ ಅಂದರೆ 'ಬಾಲದ ಕಪ್ಪೆಯನ್ನು ತಿನ್ನು' ಎಂದರ್ಥ.

ಈ ಜಗತ್ತಿನಲ್ಲಿ ದುರಂತಗಳೇನಾದರೂ ಸಂಭವಿಸಿದ್ದರೆ, ಅಣುಬಾಂಬು, ತುಪಾಕಿಗಳಿಂದಲ್ಲ. ಅದು ಪದಗಳಿಂದ ಎಂದು ಲೆಡರರ್ ಹೇಳಿದಾಗ ಅದು ಹೇಗೆಂದು ನಿಮಗನಿಸಿರಬಹುದು. ಎರಡನೆ ಮಹಾಯುದ್ಧಕ್ಕೆ ಒಂದು ಪದ ಕಾರಣ ಎಂದರೆ ನಂಬುತ್ತೀರಾ?

೧೯೪೫ ಮೇ ೮ ಯುರೋಪಿನಲ್ಲಿ ವಿಜಯದ ಕಹಳೆ, ಇದಾದ ಏಳು ವಾರಗಳ ಬಳಿಕ, ಓಕಿನಾವಾ ದ್ವೀಪವನ್ನು ತೆರವುಗೊಳಿಸುವುದಿಲ್ಲವೆಂಬ ತನ್ನ ಹಠವನ್ನು ಜಪಾನ್ ಸಡಿಲಗೊಳಿಸಿತು. ಜುಲೈ ೨೬ರಂದು ಬ್ರಿಟನ್, ಅಮೆರಿಕ ಹಾಗೂ ರಷ್ಯಾ ಅಧ್ಯಕ್ಷ ಹ್ಯಾರಿ ಟ್ರುಮನ್ ಮತ್ತು ಸ್ಟಾಲಿನ್ ಪೋಟ್ಸ್‌ಡ್ಯಾಮ್‌ನಲ್ಲಿ ಒಂದು ಘೋಷಣೆ ಮಾಡಿದರು - "ಜಪಾನ್ ಶರಣಾಗಬೇಕು. ಇಲ್ಲದಿದ್ದರೆ ಪರಿಸ್ಥಿತಿಯನ್ನು ಎದುರಿಸಬೇಕು."

ಈ ಷರತ್ತನ್ನು ಒಪ್ಪಿಕೊಳ್ಳಬೇಕೇ ಬೇಡವೇ ಎಂಬುದು ಜಪಾನ್ ಸರಕಾರಕ್ಕೆ ಜಟಿಲವಾಗಿ

ಕಾಡತೊಡಗಿತು. ಜಪಾನ್‌ಗೆ ಒಂದೆಡೆ ದೇಶದ ಸ್ವಾಭಿಮಾನದ ಪ್ರಶ್ನೆ. ಇನ್ನೊಂದೆಡೆ ವಿಶ್ವದ ಬಲಿಷ್ಠ ರಾಷ್ಟ್ರಗಳನ್ನು ಎದುರು ಹಾಕಿಕೊಂಡು ಏಕಾಂಗಿಯಾಗಿ ಸೆಣಸುವುದು ಹೇಗೆಂಬ ಪ್ರಶ್ನೆ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ಜಪಾನ್ ಸಚಿವ ಸಂಪುಟ ಒಂದು ನಿರ್ಧಾರ ತೆಗೆದುಕೊಂಡಿತು. ಅದು ಕೇವಲ ಒಂದು ಪದದ ನಿರ್ಣಯ.

ಮೊಕುಸಟ್ಸು !

ಜಪಾನಿ ಭಾಷೆಯಲ್ಲಿ ಈ ಪದಕ್ಕೆ ಎರಡು ಅರ್ಥಗಳು. ಒಂದು ನಾವು ಪರಿಶೀಲಿಸುತ್ತೇವೆ. (We are considering it) ಇನ್ನೊಂದು, ನಾವು ತಿರಸ್ಕರಿಸುತ್ತೇವೆ (We are ingnoring it) ಅಲ್ಲಿನ ಪ್ರಜೆಗಳು ಮೊದಲಿನ ಅರ್ಥವನ್ನೇ ಗ್ರಹಿಸಿದರು. ಪೋಟ್ಸ್‌ಡ್ಯಾಮ್ ಘೋಷಣೆಯನ್ನು ಪರಿಶೀಲಿಸುತ್ತಿದ್ದೇವೆ ಎಂಬುದು ಜಪಾನ್ ಸಚಿವ ಸಂಪುಟದ ಆಶಯವಾಗಿತ್ತು.

ಆದರೆ ಯಡವಟ್ಟಾಗಿದ್ದೇ ಇಲ್ಲಿ. ಇಂಗ್ಲಿಷಿನಲ್ಲಿ ಸುದ್ದಿ ರವಾನಿಸುವ ಡೊಮಿ ನ್ಯೂಸ್ ಏಜೆನ್ಸಿ ವರದಿಗಾರ ಜಪಾನ್ ಸಚಿವ ಸಂಪುಟದ ನಿರ್ಣಯವನ್ನು ಎರಡನೆ ಅರ್ಥದಲ್ಲಿ (ನಾವು ತಿರಸ್ಕರಿಸುತ್ತಿದ್ದೇವೆ) ಎಂದು ಗ್ರಹಿಸಿಕೊಂಡ.

ಏಜೆನ್ಸಿಯ ಸುದ್ದಿ ಟೆಲಿಪ್ರಿಂಟರ್‌ನಲ್ಲಿ ಬಂದಿದ್ದೇ ತಡ ಮರುದಿನ ಅಮೆರಿಕ, ಇಂಗ್ಲೆಂಡ್, ರಷ್ಯಾ ಮುಂತಾದ ದೇಶಗಳ ಎಲ್ಲ ಪತ್ರಿಕೆಗಳಲ್ಲಿ 'ಪೋಟ್ಸ್‌ಡ್ಯಾಮ್ ಘೋಷಣೆಗೆ ಜಪಾನ್ ತಿರಸ್ಕಾರ' ಎಂಬ ಶೀರ್ಷಿಕೆ ಮುಖಪುಟದಲ್ಲಿ ದಪ್ಪಕ್ಷರಗಳಲ್ಲಿ ಪ್ರಕಟವಾಯಿತು. ಆದರೆ ಜಪಾನ್ ತಕ್ಷಣ ಸ್ಪಷ್ಟೀಕರಣ ನೀಡಬಹುದಿತ್ತು. "ಈ ಘೋಷಣೆಯನ್ನು ತಿರಸ್ಕರಿಸಿಲ್ಲ. ಆದರೆ ಪರಿಶೀಲಿಸುತ್ತಿದ್ದೇವೆ' ಎಂಬ ಸ್ಪಷ್ಟೀಕರಣ ನೀಡಿದರೆ ತಮ್ಮ ದೇಶವಾಸಿಗಳ ಅವಕೃಪೆಗೆ ಗುರಿಯಾಗಬೇಕಾಗುತ್ತದೆ ಎಂದು ಜಪಾನ್ ಸಂಪುಟ ತೀರ್ಮಾನಿಸಿ ಸುಮ್ಮನಾಗಿಬಿಟ್ಟಿತು. ಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನು ಅಲ್ಲಗಳೆಯಲೇ ಇಲ್ಲ. ಬಲಿಷ್ಠ ರಾಷ್ಟ್ರಗಳಿಗೆ ಪುಟ್ಟ ಜಪಾನ್ ಸಡ್ಡು ಹೊಡೆದಿದೆ ಎಂದೇ ಪತ್ರಿಕೆ ವರದಿಯ ತಾತ್ಪರ್ಯವಾಗಿತ್ತು. 'ದೊಡ್ಡಣ್ಣ' ಅಮೆರಿಕದ ಅಧ್ಯಕ್ಷ ಟ್ರುಮನ್ ಪತ್ರಿಕೆ ನೋಡಿ ಕಂಗಾಲಾಗಿಬಿಟ್ಟ. ಅಲ್ಲಿಯೇ ಜಪಾನ್‌ಗೆ ಪಾಠ ಕಲಿಸಲು ನಿರ್ಧರಿಸಿಬಿಟ್ಟ.

ಅಮೆರಿಕದ ಕೋಠಿಯಲ್ಲಿದ್ದ ಅಣುಬಾಂಬುಗಳು ವಿಮಾನದಲ್ಲಿ ಹಾರಲು ಸಿದ್ಧವಾದವು. ಬಾಂಬ್ ದಾಳಿಗೆ ಟ್ರುಮನ್ ಆದೇಶಿಸಿದ. ಹಿರೋಷಿಮಾ, ನಾಗಾಸಾಕಿ ನಗರಗಳ ಮೇಲೆ ಬಾಂಬ್ ಹೊತ್ತ ರಣಹದ್ದುಗಳಂತೆ ಹಾರುವ ವಿಮಾನಗಳು! ಒಂದೇ ಸಮನೆ ಬಾಂಬುಗಳ ಧಾರಾಕಾರ ಮಳೆ!

ಮುಂದೇನಾಯಿತೆಂಬುದು ಇತಿಹಾಸ. ಮರೆಯಲು ಸಾಧ್ಯವಾಗದಂಥ, ಅಳಿಸಿಹಾಕಲು ಆಗದಂಥ ಘನಘೋರ ದುರಂತ. ಹೀರೋಷಿಮಾದಲ್ಲಿ ೮೨ ಸಾವಿರ ಮಂದಿ ನಾಗಾಸಾಕಿಯಲ್ಲಿ ೪೨ ಸಾವಿರ ಮಂದಿ ಸತ್ತರು. ಇದಕ್ಕೆಲ್ಲ ಕಾರಣ ಒಂದು ಪದ.... ಆ ಒಂದು ಪದ ವಿಶ್ವದ ಗತಿಯನ್ನೇ ಬದಲಿಸಿಬಿಟ್ಟಿತು....

ಲೆಡರರ್ ಇಂಥ ಕತೆಗಳನ್ನು ಹೇಳಿ ಬೆಚ್ಚಿಬೀಳಿಸುತ್ತಾನೆ. ಈ ವಿಶ್ವದಲ್ಲಿ ಆದ, ಆಗುವ ಎಲ್ಲ ದುರಂತ, ಯಡವಟ್ಟುತನ, ಅವಾಂತರ, ಅವಘಡ ಸಂಬಂಧ ಕುಸಿತಗಳಿಗೆಲ್ಲ ನಾವು ಬಳಸುವ ಭಾಷೆಯೇ ಕಾರಣ ಎಂಬುದು ಆತನ ಶರಾ. ಲೆಡರರ್ ಇಷ್ಟಕ್ಕೇ ಸುಮ್ಮನಾಗುವುದಿಲ್ಲ. ಭಾಷೆಗೆ ನಮ್ಮೆಲ್ಲ ಭಾವನೆ ಹಾಗೂ ಕಲ್ಪನೆಗಳನ್ನು ಹೇಳಲು ಆಗುವುದಿಲ್ಲ. ಇನ್ನೂ ಅನೇಕ ಪದಗಳು ನಮಗೆ ಬೇಕಾಗಿವೆ. ಅವಿಲ್ಲದಿರುವುದರಿಂದಲೇ ನಾವು ಚಡಪಡಿಸುತ್ತೇವೆ. ಉದಾಹರಣೆಗೆ, ಹೋಟೆಲ್‌ಗೆ ಮಾತನಾಡುವುದಕ್ಕಾಗಿ ಹೋಗುತ್ತೇವೆ. ಆದರೆ ತಿಂಡಿ

ತಿನ್ನುವುದಕ್ಕಲ್ಲ. ಹೋಗಿದ್ದಕ್ಕಾಗಿ ತಿಂಡಿ ತಿನ್ನುತ್ತೇವೆ. ಇದನ್ನು ಹೇಳಲು ಇಂಗ್ಲಿಷಿನಲ್ಲಿ ಪದಗಳೇ ಇಲ್ಲ. (ಕನ್ನಡದಲ್ಲೂ ಅಷ್ಟೇ) ಸಿಟ್ಟು, ಕೋಪತಾಪವನ್ನು ಹೇಳಲು ಇಂಗ್ಲಿಷಿನಲ್ಲಿ ಅವೆಷ್ಟು ಪದಗಳಿವೆ ನೋಡಿ - angry, peeved, piqued, outraged, boiling, furious, infuriated, miffed, steamed, hopping mad, burnt up, bent out of shape, lost it, in a stew, hacked up, sore, stung, berserk, rabid, rancorous, acrimonious wrathful, bilious, exercised, irascible.... ದ್ವೇಷ, ಹಗೆತನ, ರೊಚ್ಚು, ಸೆಡವುಗಳನ್ನು ಪ್ರದರ್ಶಿಸಲು ಅವೆಷ್ಟು ಪದಗಳು? ಅದೇ ಪ್ರೀತಿ, ಪ್ರೇಮ ವ್ಯಕ್ತಪಡಿಸಲು ಒಂದೇ ಪದ - LOVE. ಇರುವ ಈ ಒಂದು ಪದವೂ ಎಲ್ಲದಕ್ಕೂ ಬಳಕೆಯಾಗಿ ಅಪಮೌಲ್ಯವಾಗಿಬಿಟ್ಟಿದೆ. ನೋಡಿ ಈ ಲವ್ ಪದವನ್ನು ಯಾವ್ಯಾವುದಕ್ಕೆ ಬಳಸುತ್ತೇವೆಂದು. I love my wife, I love my son, I love my dog, I love my chappals, I love my bra, I love this broomstick... ಲವ್ ಕೂಡ ಸೆಕೆಂಡ್‌ಹ್ಯಾಂಡ್ ಆಗಿಬಿಟ್ಟಿದೆ. ಹೀಗಾಗಿ 'ಐ ಲವ್ ಯು' ಅಂದರೆ ನಿಜವಾದ ಭಾವನೆ ತೋಡಿಕೊಂಡಂತಾಗುವುದಿಲ್ಲವೇನೋ ಅನಿಸುತ್ತದೆ. ಇದು ಒಂದರ್ಥದಲ್ಲಿ ನಿಜ ಕೂಡ.

ಎಲ್ಲ ಭಾಷೆಗಳಿಗೂ ಇಂಥ ಒಂದು ನೀತಿ ಇದ್ದೇ ಇರುತ್ತದೆ. ತಂತ್ರಜ್ಞಾನ ಬೆಳೆದಂತೆ, ಜೀವನ ವಿಧಾನ ಬದಲಾದಂತೆ ಭಾಷೆಯೂ ಬದಲಾಗುತ್ತಾ ಹೋಗುತ್ತದೆ. ಭಾಷೆ ನದಿಯಿದ್ದ ಹಾಗೆ. ಅದು ಕೇವಲ ಇಳಿಮುಖವಾಗಿ ಹರಿಯುವ ನದಿಯಲ್ಲ. ಏರುಮುಖದಿಂದಲೂ ಹರಿಯುವ ಪಾತಳಿಯಾಗಬೇಕು. ಆಗಲೇ ಭಾಷೆ ಯಾವುದೇ ಕಟ್ಟುಪಾಡುಗಳಿಲ್ಲದೇ ಬೆಳೆಯುತ್ತದೆ. ಆದರೆ ಭಾಷೆಗೊಂದು ಬಂಧ, ಸೌಂದರ್ಯವಿರುತ್ತದಲ್ಲ. ಅದನ್ನು ಕಾಪಾಡದಿದ್ದರೆ, ಅನುಸರಿಸದಿದ್ದರೆ ಭಾಷೆಯ ಸೊಗಸು, ಸೊಗಡು ಕಣ್ಮರೆಯಾಗುತ್ತದೆ. ಇದಕ್ಕಾಗಿ ನಮಗೆ ಲೆಡರರ್‌ರಂಥವರು ಬೇಕು. ಅಂಥವರು ಆಗಾಗ ಮೈಮೇಲೆ ಬೀಳುತ್ತಿರಬೇಕು. ಹೊಸ ಪ್ರಯೋಗ ಮಾಡುವುದನ್ನು ಲೆಡರರ್ ಎಂದೂ ವಿರೋಧಿಸಲಿಲ್ಲ. ಹೊಸ ಪದಗಳು ಬೇಕಾಗಿವೆ ಎಂದು ಆತ ತನ್ನ ಮನೆ ಮುಂದೆ ಬೋರ್ಡು ಹಾಕಿದ. 'ಜೀವನದಲ್ಲಿ ಯಶಸ್ಸು ಸಾಧಿಸಿದ ಅಂಗವಿಕಲನಿಗೆ ಏನನ್ನೋದು? ನಿಮಗೆ ಹೊಸ ಪದ ಹೊಳೆದರೆ ತಿಳಿಸಿ' ಎಂದ ಬರೆಸಿದ. ನೂರಾರು ಮಂದಿ ಬರೆದರು. ಸಮಾಧಾನವಾಗಲಿಲ್ಲ. ಕೊನೆಗೆ ಆತನೇ ಒಂದು ಪದ ಹುಡುಕಿದ - People with differing abilities ಎಂದು ಕರೆದ. ಆದರೆ ಇವನ್ನೆಲ್ಲ ಹೇಳುವ ಒಂದು ಪದ ಅವನಿಗೆ ಕೊನೆಗೂ ಸಿಗಲಿಲ್ಲ.

ಪ್ರತಿದಿನ ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸುವ ಕನ್ನಡ ಪತ್ರಕರ್ತರು ಹೊಸ ಪದಗಳಿಗಾಗಿ ತಡಕಾಡುವ ಪ್ರಯತ್ನ ನಿತ್ಯ ಜಂಜಾಟ. ಒಂದೊಂದು ಪದ ಹಳೇ ವೈರಿಯಂತೆ ಕಾಡುವುದುಂಟು. ಒಮ್ಮೆ ಹೀಗೆ ಆಯಿತು. uneasy calm ಎಂಬ ಪದವನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕಾದ ಪ್ರಸಂಗ ಬಂತು. ಎಲ್ಲ ಪತ್ರಿಕೆಗಳಲ್ಲಿ 'ದ್ವೇಷಮಯ ಅಥವಾ ಉದ್ವಿಗ್ನ ಪರಿಸ್ಥಿತಿ' ಎಂತಲೇ ಬರೆಯುತ್ತಾರೆ. ಆದರೆ ಇದು ಸರಿಯಾದ ಭಾವನೆಯನ್ನು ಧ್ವನಿಸುವುದಿಲ್ಲವೆಂದು ಯಾರೂ ಬೇಕಾದರೂ ಹೇಳಬಹುದು. ಕೊನೆಗೆ ಯಾರೋ 'ಕುದಿಮೌನ' ಎಂದು ಬಳಸಿದರು. ಎಷ್ಟು ಚೆನ್ನಾಗಿದೆ ಅಲ್ಲವೇ?

ನಮ್ಮೆಲ್ಲರೊಬ್ಬ ಲೆಡರರ್ ಹುಟ್ಟಿಕೊಂಡರೆ ಎಷ್ಟು ಚೆನ್ನಾಗಿರುತ್ತದೆ ಅಲ್ವಾ?

ಅದ್ಸರಿ ಈ ಲೆಡರರ್‌ನಂಥವರನ್ನು ಏನೆಂದು ಕರೆಯೋದು? ಸೂಕ್ತವಾದ ಪದಗಳೇ ಇಲ್ಲ ನೋಡಿ. ●

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಜಾಗತಿಕರಣದ ಸಂದರ್ಭದಲ್ಲಿ ಗಾಂಧೀ ಏಕೆ ಪ್ರಸ್ತುತ ?

- ಪ್ರೊ॥ ಎನ್. ರಾಧಾಕೃಷ್ಣನ್

(ಪ್ರೊ॥ ಎನ್. ರಾಧಾಕೃಷ್ಣನ್ ಗಾಂಧೀಜಿಯ ಅಹಿಂಸಾತತ್ತ್ವವನ್ನು ಜಗತ್ತಿನಾದ್ಯಂತ ಪ್ರಸಾರ ಮಾಡುವುದರಲ್ಲಿ ನಿರತರಾಗಿರುವ ವಿದ್ವಾಂಸರು. ಮಧುರೆಯ ಗಾಂಧೀಗ್ರಾಮ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ೨೦ ವರ್ಷ ಕೆಲಸ ಮಾಡಿದರು. ದೆಹಲಿಯ ಗಾಂಧೀಸ್ಮೃತಿ ಹಾಗೂ ದರ್ಶನ ಸಮಿತಿಯ ನಿರ್ದೇಶಕರಾಗಿ ೧೨ ವರ್ಷ ಸೇವೆ ಸಲ್ಲಿಸಿದರು. ಸುಮಾರು ೪೦ ಪುಸ್ತಕಗಳ ಕರ್ತೃ. ಜಗತ್ತಿನ ೩೦ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳಲ್ಲಿ, ಶಾಂತಿ ಸೇನೆ, ಗಾಂಧೀ ವಿಚಾರ ಕುರಿತು, ಮಾನವ ಹಕ್ಕುಗಳನ್ನು ಕುರಿತು ಉಪನ್ಯಾಸ, ಶಿಬಿರ, ಗೋಷ್ಠಿ ಇತ್ಯಾದಿಗಳನ್ನು ನಡೆಸಿದವರು. ೧೯೬೫ರಲ್ಲಿ ಯುನೆಸ್ಕೋ ಸಮ್ಮೇಳನಕ್ಕೆ ಭಾರತದ ನಿಯೋಗದ ನಾಯಕರಾಗಿದ್ದರು. ಇಂಡಿಯನ್ ಕೌನ್ಸಿಲ್ ಫಾರ್ ಗಾಂಧಿಮನ್ ಸ್ಟಡೀಸ್ ಅಧ್ಯಕ್ಷರು. ಮಾನವೀಯ ಹಕ್ಕುಗಳ ಸಮಿತಿಯ ಅಧ್ಯಕ್ಷರೂ ಕೂಡ. ಅಟ್ಲಾಂಟ ಮೋರ್‌ಹೌಸ ಕಾಲೇಜ್, ಅಮೆರಿಕದ ಸೋಕಾ ವಿಶ್ವವಿದ್ಯಾನಿಲಯಗಳಿಂದ ಪುರಸ್ಕೃತರು. ಕೇರಳ ವಿಶ್ವವಿದ್ಯಾನಿಲಯದ ಸಹಸ್ರಮಾನ ಪ್ರಶಸ್ತಿಗೆ ಭಾಜನರಾದವರು.

ಶ್ರೀಯುತರು ಇದೇ ೨೦೦೨ ಡಿಸೆಂಬರ್ ೨೮ರಂದು ಬೆಂಗಳೂರಿನ ಗಾಂಧೀ ಶಾಂತಿ ಪ್ರತಿಷ್ಠಾನದಲ್ಲಿ ದಿ॥ ಕೆ.ಎಸ್. ನಾರಾಯಣಸ್ವಾಮಿ ಸಂಸ್ಮರಣೆಯ ಉಪನ್ಯಾಸ ನೀಡಿದರು. ಅದರ ಸಾರಾನುವಾದ ಈ ಲೇಖನ.)

ಗಾಂಧಿಯವರ ಸೂತ್ರಗಳು

ಲೋಕಾತೀತವಾದ ಸತ್ಯವನ್ನು ಒಗಟು ಮಾತುಗಳಲ್ಲಿ ಸೂತ್ರಗಳಲ್ಲಿ ಬೋಧಿಸುವ ಸಂತ ಅಥವಾ ದಾರ್ಶನಿಕನೊಂದಿಗೆ ಗಾಂಧಿಯನ್ನು ಹೋಲಿಸಿದರೆ, ನಿಜವಾದ ಗಾಂಧಿ ಕೈತಪ್ಪಿ ಹೋಗುತ್ತಾರೆ. ಕೆಲವು ಸಾಮಾಜಿಕ ರಾಜಕೀಯ ಚೌಕಟ್ಟುಗಳನ್ನು ಬದಲಾಯಿಸಲು ಅವರು ಉದ್ದೇಶಿಸಿದರು. ಆ ಅರ್ಥದಲ್ಲಿ ಅವರು ಒಬ್ಬ ಕ್ರಾಂತಿಕಾರಿ . ಆದರೆ ಅವರು ಹಿಡಿದ ಮಾರ್ಗ ಸಾಮಾನ್ಯವಾಗಿ ಕ್ರಾಂತಿಕಾರರು ಅನುಸರಿಸುವ ಹಿಂಸಾಮಾರ್ಗ ಅಲ್ಲ. ಅವರು ಮನುಕುಲಕ್ಕೆ ಹೊಸ ಪರ್ಯಾಯಗಳ ಸಂಹಿತೆಯನ್ನು ನೀಡಿದರು. ಹಿಂಸೆಗೆ ಬದಲಾಗಿ ಅಹಿಂಸೆ, ಘರ್ಷಣೆ ತಪ್ಪಿಸಲು ಮನವೊಲಿಕೆ ಹಾಗೂ ಹೊಂದಾಣಿಕೆ, ಆರ್ಥಿಕ ಅನ್ಯಾಯವನ್ನು ಕೊನೆಗಾಣಿಸಲು ಧರ್ಮದರ್ಶಿತ್ವ ಸಿದ್ಧಾಂತ, ಸಾಮಾಜಿಕ ಅನ್ಯಾಯಗಳಿಗೆ ಪೋಷಕವಾದ ಅಂಶಗಳನ್ನು ನಿವಾರಿಸಿ ದಲಿತ ವರ್ಗಗಳ ಹಿತಸಾಧನೆ, ಪ್ರಕೃತಿ ಮನುಕುಲದ ರಕ್ಷಕ ಎಂದು ಪರಿಗಣಿಸಿ, ಪ್ರಕೃತಿಯ ಮೇಲೆ ಮಾನವ ಮಾಡುವ ಆಘಾತಗಳನ್ನು ತಪ್ಪಿಸುವುದು, ನಮ್ಮ ಅಗತ್ಯಗಳನ್ನು ತಗ್ಗಿಸಿಕೊಳ್ಳುವುದು, ಧರ್ಮಗಳ ಬಗ್ಗೆ ಗೌರವ-ಇವೆಲ್ಲ ಪರಿಪೂರ್ಣ ದೃಷ್ಟಿಯ ಚಕ್ಕುಬಂದಿಗಳು. ಪರ್ಯಾಯ ಶಕ್ತಿಮೂಲ ಮತ್ತು ಸೂಕ್ತ ತಂತ್ರಜ್ಞಾನ ಇತ್ಯಾದಿಗಳ ಬಳಕೆಯನ್ನು ತಮ್ಮ ಆಶ್ರಮಗಳಲ್ಲಿ ಪ್ರಯೋಗಿಸಿ ತೋರಿಸಿದ್ದರು ಗಾಂಧೀ. ಸತ್ಯಸಾಧಕರಾಗಿದ್ದ ಗಾಂಧೀ ಸೃಜನಾತ್ಮಕವೂ, ಧಾರಕವೂ (sustainable) ಆದ ಕಾರ್ಯಸಾಧ್ಯ ಪರ್ಯಾಯ ಇವೆ ಎಂಬುದನ್ನು ಮನುಕುಲಕ್ಕೆ ತೋರಿಸಿ ಕೊಟ್ಟರು. ಅದನ್ನು ಒಪ್ಪಿಕೊಳ್ಳುವ ಧೈರ್ಯ ನಮಗೆ ಬೇಕಷ್ಟೆ. ಏಕೆಂದರೆ ಅದಕ್ಕೆ ವೈಯಕ್ತಿಕ ಹಾಗೂ ಸಾಂಘಿಕ ಶಿಸ್ತು ಬೇಕು. ಏನೊ ಒಂದಿಷ್ಟನ್ನು ದಾನಕೊಡುವ ಔದಾರ್ಯ ಮಾತ್ರ ಸಾಲದು. ತನ್ನಲ್ಲಿ ಇರುವ ಅಧಿಕ ಸಂಪತ್ತನ್ನು ಇಲ್ಲದವರೊಂದಿಗೆ ಹಂಚಿಕೊಳ್ಳುವ ಮನಸ್ಸು, ಅದಕ್ಕೆ ತಾನಾಗಿಯೆ ಮುಂದಾಗುವ

ಸಿದ್ಧತೆ ಹಾಗೂ ನವಮನ್ವಂತರದ ಹರಿಕಾರನಾಗಲು ಸಂತೋಷದಿಂದ ದುಡಿಯುವ ಮನಸ್ಸು-ಇವು ಅಗತ್ಯ. ಗಾಂಧಿಯ ಮಾನವೀಯತೆ ಪರಿಮಿತವಲ್ಲ, ಅತೀತವಾದುದು ವೈಜ್ಞಾನಿಕವಾದುದು. ಅದು ಹಿಂದಿನದರ ಪುನರಾವರ್ತನೆ ಎಂದು ವರ್ಣಿಸುವುದು ಎಲ್ಲ ಸೃಜನಶೀಲ, ಕ್ರಾಂತಿಕಾರಿ ವಿಚಾರಗಳನ್ನೂ ಪ್ರಯತ್ನಗಳನ್ನೂ ನಿರ್ಬಂಧಿಸಲು ಯತ್ನಿಸುವವರ ಮುಚ್ಚಿದ ಮನಸ್ಸನ್ನು ಬಿಂಬಿಸುವುದು.

ಗಾಂಧೀ ಗೆದ್ದದ್ದು ಕಡಿಮೆ, ಅದೂ ಒಂದು ನಿರ್ದಿಷ್ಟ ಸಾಂಸ್ಕೃತಿಕ ಸಂದರ್ಭದಲ್ಲಿ ಮಾತ್ರ ಎನ್ನುವುದುಂಟು. ತಮ್ಮ ಸಾಂಸ್ಕೃತಿಕ ಧಾರ್ಮಿಕ ಪರಂಪರೆಯಲ್ಲಿ ಅವರು ನೆಲೆಗೊಂಡಿದ್ದುದನ್ನು ಅಲ್ಲಗಳೆಯುವಂತಿಲ್ಲ. ಆದರೆ ೨೦ನೆಯ ಶತಮಾನದ ಮೊದಲ ಎರಡು ದಶಕಗಳಲ್ಲಿ ದೂರದ ಅಪರಿಚಿತ ದಕ್ಷಿಣ ಆಫ್ರಿಕಾದಲ್ಲಿ, ಮಾನವೀಯ ಹಕ್ಕು ಸ್ವಾತಂತ್ರ್ಯಗಳ ಸಲುವಾಗಿ ಹೊಡೆದಾಡಿ ಅದ್ಭುತ ಜಯಗಳಿಸಿದ್ದು; ಮುಂದೆ ಅದೇ ಮಾರ್ಗವನ್ನು ಭಾಗಶಃ ಆದರೂ, ನೆಲ್ಸನ್ ಮಂಡೇಲಾ ಅವರು ಅನುಸರಿಸಿದ್ದು ಮತ್ತು ಅದೇ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ಡಿ. ಕ್ಲರ್ಕ್ ತಾವು ಹೊಂದಾಣಿಕೆ ಮತ್ತು ಕ್ಷಮಾ ಮಾರ್ಗವನ್ನೇ ಅನುಸರಿಸುವಲ್ಲಿ ಗಾಂಧೀಜಿಯಿಂದಲೇ ಪ್ರೇರಣೆ ಪಡೆದೆ ಎಂದದ್ದು-ಇದೆಲ್ಲವೂ ದಕ್ಷಿಣ ಆಫ್ರಿಕಾದಲ್ಲಿ ಗಾಂಧೀ ಕಳೆದ ೨೧ ವರ್ಷ ವ್ಯರ್ಥವಾಗಲಿಲ್ಲ ಎನ್ನುವುದನ್ನು ತೋರಿಸುತ್ತವೆ.

ಅಮೆರಿಕಾದಲ್ಲಿ ಮಾರ್ಟಿನ್‌ಲೂಥರ್ ಕಿಂಗ್ ನಾಗರಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ತಮ್ಮ ಕಾರ್ಯ ತಂತ್ರ ಗಾಂಧಿಯವರಿಂದ ಕಲಿತದ್ದೇ ಎಂದು ಅವರು ಹೇಳಿರುವುದು ಗಾಂಧೀ ಮಾರ್ಗದ ಪ್ರಸ್ತುತತೆಗೆ ಅಪವಾದದ ನಿದರ್ಶನವೇನೂ ಅಲ್ಲ. ಮಾನವ ಪ್ರಜ್ಞೆಯನ್ನು ಎಚ್ಚರಿಸಲು ಗ್ರೀನ್ಸ್ ವಿಶೇಷತಃ ಜರ್ಮನಿಯಲ್ಲಿ ಹೂಡಿದ್ದು ಗಾಂಧೀ ತಂತ್ರವೇ. ತಮಗೆ ಸ್ಫೂರ್ತಿ ಗಾಂಧಿಯೆ ಎಂದು ಪೆಟ್ರಾ ಕೆಲ್ಲಿ ಸಾರಿ ಹೇಳಿದ್ದರು. ಇದೆಲ್ಲ ತೋರಿಸುವುದೇನು? ಒಂದು ತತ್ತ್ವ ಅಥವಾ ಮಾರ್ಗದ ಯಶಸ್ಸಿಗೆ ನಿರ್ದಿಷ್ಟ ಸಾಂಸ್ಕೃತಿಕ ಹಿನ್ನೆಲೆ ಕಾರಣ ಎಂದೇನಲ್ಲ. ಅದಕ್ಕೆ ಕಾರಣ, ಆ ಮಾರ್ಗಕ್ಕೆ ಸ್ಪಂದಿಸಲು ಜನತೆ ಮನಸ್ಸು ಮಾಡುವುದು ಮತ್ತು ಸಿದ್ಧರಾಗುವುದು. ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸಮಾಜ ಸುಧಾರಕರ ಕೈಯಲ್ಲಿ ಗಾಂಧೀ ದೃಷ್ಟಿ ಮತ್ತು ಕ್ರಮ ಹೇಗೆ ಪರಿಣಾಮಕಾರಿ ಅಸ್ತ್ರವಾಗುತ್ತದೆ ಎಂಬುದಕ್ಕೆ ಜಗತ್ತಿನಾದ್ಯಂತ ಅನೇಕ ನಿದರ್ಶನಗಳನ್ನು ಕೊಡಲು ಸಾಧ್ಯ.

ತಾನೇನೂ ಹೊಸದನ್ನು ಹೇಳುತ್ತಿದ್ದೇನೆ ಎಂದು ಗಾಂಧೀ ಯಾವತ್ತೂ ಹೇಳಲಿಲ್ಲ. ಸತ್ಯ ಅಹಿಂಸೆ ಹಿಮಾಲಯದಷ್ಟೇ ಹಳೆಯವು ಎಂದರು. ಅವೆರಡರ ಅದ್ಭುತ ಹಿರಿಮೆ ಗರಿಮೆಗಳನ್ನು ಅರಿಯುವುದಷ್ಟೆ ತಮ್ಮ ಸಾಹಸ ಎಂದರು. "ಸತ್ಯ ಅಹಿಂಸೆಗಳನ್ನು ವೈಯಕ್ತಿಕ ಆಚರಣೆಯ ವಿಷಯವಾಗಿಸುವುದಷ್ಟೇ ಅಲ್ಲ, ಇದೇ ನನ್ನ ಕನಸು. ಇದಕ್ಕಾಗಿಯೆ ನನ್ನ ಬಾಳು, ಇದರ ಸಾಧನೆಯಲ್ಲೆ ನಾನು ಸಾಯಬೇಕು. ನನ್ನ ಶ್ರದ್ಧೆ ದಿನದಿನ್ನೂ ಹೊಸ ಹೊಸ ಸತ್ಯಗಳನ್ನು ನೋಡಲು ನೆರವಾಗುತ್ತಿದೆ. ಅಹಿಂಸೆ ಆತ್ಮದ ಗಮ್ಯ, ಅಂತೆಯೆ ಜೀವನದ ಗುಣ. ಎಲ್ಲರೂ ಎಲ್ಲದರಲ್ಲೂ ಅನುಸರಿಸಬೇಕಾದುದು" ಎಂದರು.

ಭಾರತದಲ್ಲಿನ ಅಸ್ಪೃಶ್ಯತೆಯೂ ಸೇರಿದಂತೆ ಜಗತ್ತಿನ ಎಲ್ಲ ಭೇದಗಳನ್ನೂ ಕೊನೆಗಾಣಿಸಲು ಸಂದೇಶ

ಯುದ್ಧಗಳ ಆರಂಭ ಮನುಷ್ಯರ ಮನಸ್ಸಿನಲ್ಲಿ. ಆದ್ದರಿಂದ ಶಾಂತಿಯ ರಕ್ಷಣೆ

ಆಗಬೇಕಾದುದೂ ಮನುಷ್ಯರ ಮನಸ್ಸಿನಲ್ಲಿ - ಇದು ಯುನೆಸ್ಕೊ ಪ್ರಣಾಲಿಕೆಯ ಮಾತು. ಜಗತ್ತು ಅಹಿಂಸೆಯಿಂದ ಉಳಿದೀತು ಇಲ್ಲವೇ ಹಿಂಸೆಯಿಂದ ಅಳಿದೀತು ಎಂಬುದು ಗಾಂಧೀವಾಣಿ. ಇವೆರಡು ಮಾತುಗಳಲ್ಲೂ ಒಂದು ಸಾಮ್ಯವಿದೆ. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ೨೧ ವರ್ಷ, ಭಾರತದಲ್ಲಿ ೩೨ಕ್ಕೂ ಹೆಚ್ಚು ವರ್ಷ ಕೆಲಸ ಮಾಡಿದರು. ಎಲ್ಲ ಬಗೆಯ ಜೀವಕ್ಕೂ ಗೌರವ, ಮಾನವ ಘನತೆ, ಆತ್ಮಗೌರವ ಮತ್ತು ಸಹನೆ ಇವು ಮನುಕುಲದ ಮುನ್ನಡೆಯ ದಾರಿದೀಪ ಆಗಿರುತ್ತವೆ, ಅಂತಹ ಮಾನವ ಸಮಾಜವಾಗಿ ಶಾಂತಿಯುತ ಪರಿವರ್ತನೆ ಆಗುವುದಕ್ಕೆ ಈ ಕೆಲಸ ತಂತ್ರಗಳ ಚೌಕಟ್ಟನ್ನು ಕೊಟ್ಟಿದೆ. ೧೯೯೪ರಲ್ಲಿ ಗಾಂಧೀ ತಂತ್ರ, ಗಾಂಧೀ ತತ್ತ್ವಗಳ ಪರಿಣಾಮಕತೆ ಬೆಳಗಿತು. ದಕ್ಷಿಣ ಆಫ್ರಿಕಾದಲ್ಲಿ ೧೦೦ ವರ್ಷಗಳ ಹಿಂದೆ ಅವರು ಆರಂಭಿಸಿದ ಹೋರಾಟ ಈಗ ಫಲಿಸಿತು. ಅಲ್ಲಿನ ಕರಿಯರು, ಬಿಳಿಯರು ಅಧಿಕಾರ ಹಸ್ತಾಂತರಕ್ಕೆ ಶಾಂತಿಯುತ ಮಾರ್ಗೋಪಾಯವನ್ನು ರೂಪಿಸಿಕೊಂಡರು. ಚುನಾವಣೆ ನಡೆದವು, ನೆಲ್ಸನ್ ಮಂಡೇಲಾ ಅಧಿಕಾರ ಸ್ವೀಕರಿಸಿದರು.

ರಾಜಕೀಯದ ಆಧ್ಯಾತ್ಮೀಕರಣ

ಜಗತ್ತಿನ ನಾನಾ ಕಡೆಗಳಲ್ಲಿನ ರಾಜಕೀಯ ಜಾಗೃತಿ, ಸ್ವಾತಂತ್ರ್ಯ ಹೋರಾಟ ಇವುಗಳಿಗೆ ಹಾಗೂ ವಿರೋಧಿಗಳು ಪರಸ್ಪರ ಅರಿತು ಪರಸ್ಪರರ ವಿಚಾರಗಳನ್ನು ಮನ್ನಿಸುವಂತೆ ಮಾಡುವ ಅಹಿಂಸಾತ್ಮಕ ಕಾರ್ಯತಂತ್ರಗಳಿಗೆ ಗಾಂಧೀಜಿಯ ಕೊಡುಗೆ ಏನಿದೆಯೊ ಅದಕ್ಕೂ ಮಾನವನ ಉಳಿವಿಗಾಗಿ ಸಹನೆಯ ಸಂದೇಶ ಸಾರಬೇಕು ಎನ್ನುವ ಯುನೆಸ್ಕೊ ನಿರ್ಣಯಕ್ಕೂ ಬಹುಪಾಲು ಸಾಮ್ಯವಿದೆ. ಗಾಂಧೀಜಿಯ ಶಾಂತಿಮಾರ್ಗದ ಪ್ರೇರಣೆಯ ಫಲವಾಗಿ, ಏಷ್ಯಾ-ಆಫ್ರಿಕಾಗಳ ಅನೇಕ ದೇಶಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಪರಿವರ್ತನೆಗಳು ಶಾಂತವಾಗಿ ನೆರವೇರಿವೆ. ಗಾಂಧೀ ವಿಚಾರದ ಹಾಗೂ ಮಾರ್ಗದ ಒಂದು ಅನನ್ಯ ವೈಶಿಷ್ಟ್ಯವೆಂದರೆ ಸಾಧನ ಶುದ್ಧಿಗೆ ಅವರು ಕೊಟ್ಟ ಪ್ರಾಮುಖ್ಯತೆ. ರಾಜಕೀಯವನ್ನು ಮೌಲ್ಯಾಧಾರಿತಗೊಳಿಸಬೇಕೆಂಬ ಅವರ ಯತ್ನ ವಿಶ್ವದೃಷ್ಟಿ ಉಳ್ಳದ್ದು. ಆಧ್ಯಾತ್ಮಿಕ ಮತ್ತು ನೈತಿಕ ಗಣನೆ ಇಲ್ಲದ ರಾಜಕಾರಣ ಮನುಕುಲವನ್ನು ಧಾರಣೆ ಮಾಡದು ಎಂದು ಅವರು ಒತ್ತಿ ಹೇಳಿದರು.

ಯೂಗೋಸ್ಲಾವಿಯಾದ ಹಿಂಸಾತ್ಮಕ ವಿಘಟನೆ ಮತ್ತು ಇನ್ನೂ ಇತರ ಹಿಂಸಾತ್ಮಕ ಪ್ರಯತ್ನ ಎಲ್ಲವೂ ಹೊಸ ಜಾಗ್ರತಿಯನ್ನು ಅರಸುವ ಹವಣಿಕೆ.

ಬೋಸ್ನಿಯಾದ ಘಟನೆಗಳು ಐರೋಪ್ಯ ಮಾರ್ಗದಿಂದ ಗಾಂಧೀ ವಿಚಾರದತ್ತ ಆಸೆಗಣ್ಣು ಬೀರುವಂತೆ ಮಾಡುತ್ತಿವೆ.

ಬಹುರಾಷ್ಟ್ರೀಯ ಶಾಂತಿ ಘಟಕಗಳು, ಶಾಂತಿ ಕಾರ್ಯಕರ್ತರು, ರಾಜಕೀಯ ಶಾಸ್ತ್ರಜ್ಞರು, ವಿಮರ್ಶಕರು, ತತ್ತ್ವಜ್ಞಾನಿಗಳು, ಗಾಂಧೀ ಮಾರ್ಗವೊಂದೇ ಗತಿ ಎಂದು ಪ್ರಚಾರ ಮಾಡುವಂತೆ ಆಗುತ್ತಿದೆ.

ಪಾಶ್ಚಿಮಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಗಾಂಧೀ ಚಿಂತನೆಯ ಬಗ್ಗೆ ವ್ಯಾಪಕ ಕಾರ್ಯ ನಡೆದಿದೆ. ಗಾಂಧೀಜಿಯ ಅಹಿಂಸಾತತ್ತ್ವ ಆಧುನಿಕ ನಾಗರಿಕತೆಯ ಮತ್ತು ಮೌಲ್ಯಗಳ ಕೊಬ್ಬನ್ನು ಇಳಿಸುತ್ತದೆ ಎಂಬ ನಂಬಿಕೆ ಮೂಡುತ್ತಿದೆ. ಶಾಂತಿಗಾಗಿ, ಮಾನವ ಹಕ್ಕುಗಳಿಗಾಗಿ ಅಹಿಂಸಾ ಮಾರ್ಗಾನುಸರಣೆಯತ್ತ ಕೆಲಸ ಸಾಗಿದೆ. "ಶಾಂತಿ ಮಾರ್ಗ ಯಾವುದು?"- ಈ ಪ್ರಶ್ನೆಗೆ "ಶಾಂತಿಗೆ ಮಾರ್ಗ ಇಲ್ಲ, ಶಾಂತಿಯೆ ಮಾರ್ಗ" ಎಂಬ ಗಾಂಧೀವಾಣಿಯನ್ನು ಉತ್ತರವಾಗಿ ಹೇಳಲಾಗುತ್ತಿದೆ.

ಶಾಂತಿಪಾಲನೆಯನ್ನು ಸೇನೆಗೇ ವಹಿಸಿರುವ ಸಂದರ್ಭದಲ್ಲಿ ಈ ಸಂದೇಶ ಪ್ರಸಾರ ಸುಲಭವೇನಲ್ಲ. ಆದರೆ ಇಡೀ ರಾಜಕೀಯ ಮತ್ತು ಬೌದ್ಧಿಕ ತಳಮಳ ಇದೇ ಆಗಿದೆ.

ಗಾಂಧೀ ಮತ್ತು ಜಾಗತಿಕ ಅಹಿಂಸಾತ್ಮಕ ಜಾಗೃತಿ

ಜಗತ್ತು ಗಾಂಧಿಯತ್ತ ತಿರುಗುತ್ತಿದೆಯೇಕೆ? ಉತ್ತರ ಅನೇಕ. ಬರ್ಲಿನ್ ಗೋಡೆ ಮುರಿದು ಬಿತ್ತು. ಸಮಾಜವಾದ ಕೊನೆಯುಸಿರೆಳೆಯಿತು. ಇದರಿಂದಾಗಿ ಭಿನ್ನ ಸಾಮಾಜಿಕ ವ್ಯವಸ್ಥೆಗಳ ನಡುವಣ ಶೀತಲ ಯುದ್ಧದ ವಿಚಾರ ಘರ್ಷಣೆ ಮಾಯವಾಗಿದೆ. ಹೀಗಾಗಿ ಒಂದು ಶೂನ್ಯ ಉಂಟಾಗಿದೆ. ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ ಪೊಳ್ಳು ಎಂಬುದನ್ನು ಗ್ರೀನ್ಸ್ ಚಳುವಳಿ ಸಿದ್ಧ ಮಾಡಿದೆ. ೨೦ನೆಯ ಶತಮಾನದ ಆದಿಯಲ್ಲೇ ಪಾಶ್ಚಿಮಾತ್ಯ ಅಭಿವೃದ್ಧಿಯ ಕಲ್ಪನೆಯ ಬಗ್ಗೆ ಗಾಂಧೀಜಿ ಎಚ್ಚರಿಕೆ ನೀಡಿದ್ದರು.

ಪರಿಸರದ ಅಪಾಯಗಳ ಬಗ್ಗೆ ಎಚ್ಚರಿಸಿ, ಜಾಗತಿಕ ಪರಿಹಾರದ ಅಗತ್ಯವನ್ನು ಒತ್ತಿ ಹೇಳುವ ಗ್ರೀನ್ಸ್ ವಿಚಾರಧಾರೆ ರಾಜಕಾರಣದ ಬೇರನ್ನೇ ಅಲುಗಾಡಿಸುತ್ತಿದೆ. ಗಾಂಧೀಜಿಯಿಂದ ಸ್ಫೂರ್ತಿಗೊಂಡ ತಂಡಗಳು, ಮಹಾತ್ಮರ ಬೋಧೆಗಳನ್ನು ಶಾಂತಿ, ಮಾನವ ಹಕ್ಕುಗಳು, ಆರ್ಥಿಕ ಸಮಾನತೆ, ಪ್ರಜಾತಂತ್ರ ಎಲ್ಲಕ್ಕೂ ಅನ್ವಯಿಸುವಂತೆ ಹಿಗ್ಗಿಸಲು ಎಣಿಸುತ್ತಿವೆ. ಕೈಗಾರಿಕೆ ಮತ್ತು ಆರ್ಥಿಕತೆಯ ಬಗೆಗಿನ ಗಾಂಧೀ ಟೀಕೆಯೇ ಗ್ರೀನ್ಸ್ ತಂಡಕ್ಕೆ ಜಾಗತಿಕ ನೆಲೆ ಸಂಪಾದಿಸಿಕೊಟ್ಟಿದೆ ಯೆಂದು ಆ ತಂಡಗಳಿಗೆ ಮನವರಿಕೆಯಾಗಿದೆ. ಜನತೆಯ ನಡುವೆ ಸಾಮುದಾಯಿಕ ಭಾವನೆಯನ್ನು ಪುನರುಜ್ಜೀವಿಸಿ ಹರಡುವ ಪ್ರಯತ್ನ ಅದು.

ಗಾಂಧೀ ಮಾರ್ಗವು ವಿಶಾಲ ಸಾಮಾಜಿಕ ವ್ಯಾಪ್ತಿ ಉಳ್ಳದ್ದು. ಸೈನಿಕ ಹಾಗೂ ಜನಾಂಗೀಯ ಘರ್ಷಣೆಗಳನ್ನು ನಿವಾರಿಸುವಂಥ ರಾಜಕಿಯ ಕಾರ್ಯ ಮಾತ್ರವಲ್ಲ ಅದು ಪ್ರಭುತ್ವ ಮತ್ತು ನಾಗರಿಕ ಸಮಾಜಗಳ ಘರ್ಷಣೆಯನ್ನೂ ನಿವಾರಿಸಬಲ್ಲದು, "ಅಭಿವೃದ್ಧಿ"ಯಿಂದ ಉಂಟಾದ ಆರ್ಥಿಕ ಅಸಮಾನತೆಗಳನ್ನು ತತ್ಪರಿಣಾಮವಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಒತ್ತಡಗಳನ್ನು ಪರಿಹರಿಸಬಹುದು ಎಂಬ ಮಾತೂ ಕೇಳಿಬರುತ್ತಿದೆ.

ಇರಾನಿನ ಶಾಹನ ಚ್ಯುತಿ, ಫಿಲಿಪೈನ್ಸ್‌ನಲ್ಲಿ ಮಾರ್ಕೋಸ್‌ನ ಪದಚ್ಯುತಿ, ಜೆಕೊಸ್ಲಾವಾಕಿಯಾದಲ್ಲಿ ಕ್ರಾಂತಿ, ಪೂರ್ವ ಜರ್ಮನಿಯಲ್ಲಿ ಚಳುವಳಿ ಇಲ್ಲೆಲ್ಲ ಅಹಿಂಸೆ ಗಾಢ ಬದಲಾವಣೆ ತಂದಿದೆ. ಹಂಗೇರಿಯಲ್ಲಿ ಸ್ಲೊವಾಕ್ ಜನ ತಮ್ಮ ಭಾಷೆಯಲ್ಲಿ ಶಿಕ್ಷಣ ಪಡೆಯಲು "ಸವಿನಯ ಶಾಸನ ಭಂಗ"ವನ್ನೇ ಅನುಸರಿಸಿದರು. ಇವೆಲ್ಲ ಗಾಂಧೀತಂತ್ರ ಪ್ರಯೋಗಗಳಿಗೆ ನಿದರ್ಶನಗಳು.

ಇ.ಇ.ಸಿ. ಮಾರುಕಟ್ಟೆ (ಯುರೋಪಿಯನ್ ಎಕನಾಮಿಕ್ ಕಮ್ಯೂನಿಟಿ) ಯಂಥ ವ್ಯವಸ್ಥೆಗಳು ಶಾಂತಿ, ಪ್ರಜಾತಂತ್ರ ಮತ್ತು ಮಾನವ ಹಕ್ಕುಗಳಂತಹ ಅಭಿಲಾಷೆಗಳನ್ನು ಪೂರೈಸಲು ಅಶಕ್ತವಾದವು. ಇದಕ್ಕೆ ಕಾರಣ ಅವು ಇವೆಲ್ಲವನ್ನೂ ಆರ್ಥಿಕ ಆಸಕ್ತಿಗಳ ಮಟ್ಟಕ್ಕೆ ಇಳಿಸಿಬಿಟ್ಟಿವೆ. ಆದ್ದರಿಂದ, ಈ ಮೌಲ್ಯಗಳನ್ನು ಹೊಸ ರಾಜಕೀಯ ಚೌಕಟ್ಟಿನಲ್ಲಿ ಅಂದರೆ ಗಾಂಧೀವಾದದಲ್ಲಿ ಪುನರ್ ಸ್ಥಾಪಿಸುವ ಅಗತ್ಯ ಬಹಳವಾಗಿದೆ.

ಹಿಂಸೆಯ ಹೆಚ್ಚಳ ಹಾಗೂ ಅಮಾನುಷಗೊಳಿಸುವ ಹಸಿವು

ಹಿಂಸೆ, ಹಸಿವು, ಅಸಮಾನತೆ ಹೆಚ್ಚುತ್ತಿದೆಯಲ್ಲ, ಇದಕ್ಕೆ ಗಾಂಧೀ ಏನು ಮಾಡುತ್ತಿದ್ದರು? ಇಂಥ ಪ್ರಶ್ನೆ ಆಗಾಗ ಕೇಳಿ ಬರುತ್ತದೆ. ಗಾಂಧೀಜಿ ಜನರ ಬಳಿಗೇ ಹೋಗುತ್ತಿದ್ದರು ಎಂಬುದು ಒಂದು ಉತ್ತರ. ನಿರಕ್ಷರತೆ, ಭಾಷೆ ಬುಡಕಟ್ಟುಗಳ ಪ್ರತ್ಯೇಕತೆ, ವರ್ಗ, ಜಾತಿ, ವಿಶೇಷ ಹಕ್ಕು ಇತ್ಯಾದಿಗಳ ಬೇಲಿಗಳಿದ್ದರೂ ಅವರು ಜನತೆಯನ್ನು ಸಲೀಸಾಗಿ ಒಗ್ಗೂಡಿಸಿದರು. ಹಾಗೆಯೇ

ಈಗಲೂ ವಿಚ್ಛೇದಕಾರಕ ಪ್ರವೃತ್ತಿಗಳನ್ನು ದಾಟಿ ಒಗ್ಗೂಡಿಸಲು ಸಾಧ್ಯವಾದೀತು ಎಂಬ ಆಸೆ ಇದೆ. ಜಾಗತಿಕ ಜಾಗೃತಿಗೆ ಒಯ್ಯಬಲ್ಲ ಶಕ್ತಿಯುಳ್ಳ ಜೀವಂತ ಪ್ರಯೋಗ ಗಾಂಧೀತತ್ತ್ವ ಎಂಬ ವಿಚಾರವೂ ಇದೆ.

ಕಳೆದ ಶತಮಾನ ಮುಗಿದಂತೆ, ಆಗಿನ ಹಲವಾರು ರಾಜಕೀಯ ಮತ್ತು ತಾತ್ತ್ವಿಕ ನಿಲುವುಗಳು ದೋಷಯುಕ್ತ ಎನಿಸಿಕೊಂಡವು. ಇಲ್ಲವೇ ಸಹಜ ಅಂತ್ಯ ಪಡೆದವು. ಈಗ ಅಂತರರಾಷ್ಟ್ರೀಯ ಸಮುದಾಯ ಗಾಂಧೀ ಪರ್ಯಾಯದ ಬಗ್ಗೆ ವಿಶ್ಲೇಷಣೆ ಮಾಡುವ ಸೂಚನೆ ಇದೆ. ಮಾರ್ಟಿನ್ ಲೂಥರ್ ಕಿಂಗ್‌ರಿಂದ ಆಂಗ್ ಸೂಚಿ (ಬರ್ಮಾದ ನಾಯಕಿ) ವರೆಗೆ ಅನೇಕ ಸ್ವಾತಂತ್ರ್ಯ ಹೋರಾಟಗಾರರು, ರಾಷ್ಟ್ರೀಯವಾದಿಗಳು, ಮಾನವ ಹಕ್ಕು ಪ್ರತಿಪಾದಕರು, ಪರಿಸರವಾದಿಗಳು, ಸ್ತ್ರೀವಾದಿಗಳು ಎಲ್ಲರೂ ಗಾಂಧೀ ಮಾರ್ಗದ ಪ್ರಸ್ತುತತೆ, ಗಾಂಧೀ ದೃಷ್ಟಿ, ಚಳುವಳಿ ಕುರಿತಂತೆ ಗಮನಾರ್ಹ ಅರಿವನ್ನು ತೋರುತ್ತಿದ್ದಾರೆ.

ವಸುಧೈವ ಕುಟುಂಬಕಮ್

ತಮ್ಮ ವಿನೂತನ ಕ್ರಮಗಳಿಂದ, ಧೀರ ಪ್ರಯೋಗಗಳಿಂದ ಗಾಂಧೀಜಿ ಮಾನವ ಇತಿಹಾಸದಲ್ಲಿ ಹೊಸ ಶಕೆಯ ನಾಂದಿಯನ್ನು ಹಾಕಿದರು. ಮಾನವ ಕ್ಷುಲ್ಲಕ ವಿಚಾರಗಳಿಂದ ಮೇಲೆ ಎದ್ದು ಹೊಸ ಸಾಧನೆಯ ಮೆಟ್ಟಿಲನ್ನು ಮುಟ್ಟಲು ಶ್ರಮಿಸುವ ಅಪಾರ ಶಕ್ತಿಯನ್ನು ಸೂಚಿಸುವ ಶಕೆ. ಗಾಂಧೀಜಿಯ ಹೊಸ ವಿಚಾರಗಳು, ತಂತ್ರಗಳು ಯಶಸ್ವಿಯಾಗಿ ಜಗತ್ತಿನಾದ್ಯಂತ ಸ್ವಾತಂತ್ರ್ಯ ಹೋರಾಟಗಾರರಿಗೆ, ಸಮಾಜ ಸುಧಾರಕರಿಗೆ ಸ್ಫೂರ್ತಿ ನೀಡಿದವು ಮಾತ್ರವಲ್ಲ ಮನುಕುಲಕ್ಕೆ ಪ್ರಿಯವಾದ ಎಲ್ಲವನ್ನೂ ಉಳಿಸಿಕೊಳ್ಳಲು ಪ್ರಯತ್ನಿಸುವಲ್ಲಿ ಹೊಸ ಪರ್ಯಾಯಗಳ ಅನ್ವೇಷಕರಿಗೂ ಸ್ಫೂರ್ತಿದಾಯಕವಾದವು. ಗಾಂಧೀಜಿಯ ಪರಿಪೂರ್ಣ ಅಭಿವೃದ್ಧಿ ಕಲ್ಪನೆ ಹಾಗೂ ಎಲ್ಲ ಜೀವಿಗಳ ಬಗ್ಗೆ ಗೌರವ, ಅಹಿಂಸೆಯನ್ನು ಜೀವನ ಮಾರ್ಗವಾಗಿ, ಕಾರ್ಯತಂತ್ರವಾಗಿ ಮಾಡಿಕೊಂಡು ಸಮಸ್ಯೆಗಳನ್ನು ಪರಿಹರಿಸುವುದು. "ವಸುಧೈವ ಕುಟುಂಬಕಮ್" ಎಂಬ ಪ್ರಾಚೀನ ಭಾರತಿಯ ಪರಿಕಲ್ಪನೆಯ ವಿಸ್ತರಣೆ ಮಾತ್ರ. ವಿಶ್ವ ಮಾನವ ಕುಟುಂಬ, ರಾಷ್ಟ್ರಗಳ ನಡುವಣ ಮನುಷ್ಯ ನಿರ್ಮಿತ ಗೋಡೆಗಳ ವಿನಾಶ ಇದರ ಬಗ್ಗೆ ಈಗ ಬಹಳ ಮಾತು ನಡೆದಿದೆ. ಇದಕ್ಕೂ ವೇದೋಪನಿಷತ್ತುಗಳಲ್ಲಿ ಅಡಗಿರುವ "ವಸುದೈವ ಕುಟುಂಬಕಮ್" ಮುಂತಾದ ಆದರ್ಶಗಳಿಗೂ ವ್ಯತ್ಯಾಸ ಅತ್ಯಲ್ಪ. ಗಾಂಧೀ ಕಾರ್ಯಾರಂಭ ಮಾಡಿದ್ದು ಅಣುವಿನ ಮಟ್ಟದಲ್ಲಿ ನಿಜ. ಆದರೆ ಅವರ ದೃಷ್ಟಿ ಕಾಲದೇಶಗಳ ಎಲ್ಲ ಪರಿಮಿತಿಯನ್ನು ಮೀರಿತ್ತು. "ರಾಷ್ಟ್ರವಾದಿ ಆಗದೆ ಅಂತರ ರಾಷ್ಟ್ರವಾದಿ ಆಗುವುದು ಅಸಾಧ್ಯ.... ನನ್ನ ವಿಚಾರ ವಿಶ್ವಕ್ಕೇ ಸಂಬಂಧಿಸಿದ್ದು, ನನ್ನ ದೇಶಭಕ್ತಿಯಲ್ಲಿ ಇಡೀ ಮನುಕುಲದ ಶುಭ ಅಡಗಿದೆ. ಆದ್ದರಿಂದ ಭಾರತಕ್ಕೆ ನನ್ನ ಸೇವೆ ಮನುಕುಲದ ಸೇವೆಯನ್ನೇ ಒಳಗೊಂಡಿದೆ" ಎಂದರು.

ಗಾಂಧೀಜಿಯ ಸಮಾಜದೃಷ್ಟಿ ಮಾನವ ನಿರ್ಮಿತ ಗೋಡೆಗಳನ್ನು ಪರಿಗಣಿಸುವುದಿಲ್ಲ. ಆದರೆ ನಮ್ಮ ಸುತ್ತ ಜಗತ್ತಿನ ಎಲ್ಲ ಸಂಸ್ಕೃತಿಗಳ ಗಾಳಿ ಆಡಲಿ, ಸ್ವಾಗತಿಸೋಣ, ಆದರೆ ಅದು ನಮ್ಮನ್ನೇ ಹಾರಿಸಿಬಿಡಲು ಒಪ್ಪದಿರೋಣ ಎಂದರು. ಇದರ ಅರ್ಥ ರಾಷ್ಟ್ರವಾದಿ ಆಗದೆ ಅಂತರರಾಷ್ಟ್ರವಾದಿ ಆಗಲಾರೆವು.

ಒಮ್ಮೆ ಗಾಂಧೀಜಿ ಹೇಳಿದರು - "ನನ್ನ ಮಹೋದ್ದೇಶ ಭಾರತ ಜನತೆಯ ಭ್ರಾತೃತ್ವ ಮಾತ್ರ ಅಲ್ಲ, ಭಾರತದ ಬಿಡುಗಡೆ ಮಾತ್ರ ಅಲ್ಲ, ಈಗೇನೊ ಆ ಗುರಿಗಾಗಿಯೇ ನನ್ನ ಬಾಳು, ಕಾಲ

ಎಲ್ಲ ಮೀಸಲಾಗಿದೆ. ಭಾರತಕ್ಕೆ ನಿಜವಾಗಿಯೂ ಸ್ವಾತಂತ್ರ್ಯ ಬರುವುದೆಂದರೆ, ಮಾನವ ಭ್ರಾತೃತ್ವದ ಮಹೋದ್ದೇಶ ಸಾಧನೆಗಾಗಿಯೇ ಬರುತ್ತದೆ. ನನ್ನ ದೇಶಭಕ್ತಿ ಪ್ರತ್ಯೇಕತೆ ಅಲ್ಲ. ಅದು ಸರ್ವಗ್ರಾಹಿ. ಇತರ ರಾಷ್ಟ್ರಗಳ ಸಂಕಟಗಳಿಂದ ಲಾಭ ಪಡೆಯಲು ಅಥವಾ ಅದನ್ನು ಶೋಷಿಸಲು ಬಳಿಸುವ ದೇಶಭಕ್ತಿಯನ್ನು ನಾನು ತಿರಸ್ಕರಿಸುತ್ತೇನೆ. ನನ್ನ ಗುರಿ ಮನುಷ್ಯ ಎನಿಸಿಕೊಳ್ಳುವವನ ಬಗ್ಗೆ ಮಾತ್ರ ತಾದಾತ್ಮ್ಯವಲ್ಲ. ಎಲ್ಲ ಜೀವಿಗಳೊಂದಿಗೆ, ನೆಲದ ಮೇಲೆ ಹರಿದಾಡುವ ಜೀವಿಗಳೊಂದಿಗೂ ಒಂದಾಗ ಬಯಸುತ್ತೇನೆ."

ಮಹಾತ್ಮರ ಈ ದೃಷ್ಟಿ ಮತ್ತು ಅದರ ಸಿದ್ಧಿಗಾಗಿ ಅವರು ಮಾಡಿದ ನಾನಾ ಪ್ರಯೋಗಗಳು ಅವೇ ಅವರನ್ನು ಜನರಿಗೆ ಅಷ್ಟು ಪ್ರಿಯರನ್ನಾಗಿಸಿದ್ದು. ಆ ಜನರನ್ನು ಮಾನವ ಇತಿಹಾಸದ ಅತ್ಯಂತ ಉಜ್ವಲ ಚಳುವಳಿಗೆ ಧುಮುಕಲು ಪ್ರೇರೇಪಿಸಿದ್ದು. ಗಾಂಧೀ ನೇತೃತ್ವದಲ್ಲಿ ನಡೆದ ಅಹಿಂಸಾತ್ಮಕ ರಾಷ್ಟ್ರೀಯ ಆಂದೋಳನಕ್ಕೆ ಎಂತೆಂಥ ದಿಗ್ಗಜರ ಬೆಂಬಲವಿತ್ತು ! ನೇತಾಜಿ ಸುಭಾಷ ಚಂದ್ರಬೋಸ್, ರಾಜಾಜಿ, ಜವಾಹರಲಾಲ ನೆಹರು, ಮೌಲಾನಾ ಆಜಾದ್, ಸರ್ದಾರ್ ಪಟೇಲ್, ಸರೋಜಿನಾಯ್ಡು, ರಾಜೇಂದ್ರಪ್ರಸಾದ್ ಮುಂತಾದ ಸಾವಿರಾರು ಶತಮಾನದ ಮಹಾವ್ಯಕ್ತಿಗಳು!

ಗಾಂಧೀಜಿ ಭಯ ಅರಿತಿರಲಿಲ್ಲ. ದೇಶವನ್ನೂ ಭಯದಿಂದ ಬಿಡಿಸಿದರು. ಜನತೆಯಲ್ಲಿ ನಿರ್ಭಯತೆಯನ್ನು ತುಂಬಿದರು. ಭಾರತದಲ್ಲಿ ಅಸ್ಪೃಶ್ಯತೆಯಂಥ ಹಲವಾರು ರೀತಿ ರಿವಾಜುಗಳ ಬದಲಾವಣೆಗೆ ಹೊಸ ಕ್ರಮಗಳಲ್ಲಿ ಜನರನ್ನು ತೊಡಗಿಸಿದರು. ಅಸ್ಪೃಶ್ಯತೆಯಂಥ ಅಮಾನುಷ ಪದ್ಧತಿಯಲ್ಲಿ ಸಿಕ್ಕ ಮಾನವತ್ವವನ್ನೇ ನೀಗಿಕೊಂಡಿದ್ದ ಎಷ್ಟೋ ಮಂದಿ ಸ್ವಾತಂತ್ರ್ಯಾ ನಂತರ ಹೇಗೆ ಹೊರಬಂದರು, ಹೇಗೆ ಮುಂದೆ ಬಂದರು ಎನ್ನುವುದೇ ಗಾಂಧೀಜಿ ಸಮಾಜ ಸುಧಾರಣೆಗೆ ಜನಮಾನಸವನ್ನು ಸಿದ್ಧಗೊಳಿಸಿದ ರೀತಿಗೆ ಸಾಕ್ಷಿ.

ಜೋಹಾನ್ ಗಾಲ್‌ಟುಂಗ್ ಎಂಬವರು 'ಚೂಸ್‌ಪೀಸ್' ಎಂಬ ಪತ್ರಿಕೆಯಲ್ಲಿ ಹೇಳಿದರು - "ಈಗ ಶೀತಲ ಯುದ್ಧ ಮುಗಿದಿದೆ. ಭೂಗೋಳ ಬಹುಮಟ್ಟಿಗೆ ಮುಕ್ತವಾಗಿದೆ. ಆದರೆ ಬೇರೊಂದು ಬಗೆಯ ಸರ್ವಾಧಿಕಾರತ್ವ ಉಳಿದಿದೆ. ಜಗತ್ತೆಲ್ಲವನ್ನೂ ಪಾಶ್ಚಾತ್ಯ ಮಾದರಿಯ ಪ್ರಜಾತಂತ್ರಕ್ಕೆ ಒಳಪಡಿಸಬೇಕು, ಅನಿಯಂತ್ರಿತ ಮಾರುಕಟ್ಟೆ ವ್ಯವಸ್ಥೆಗೆ ಒಳಪಡಿಸಬೇಕು ಎಂಬ ಸರ್ವಾಧಿಕಾರತ್ವ. ಸೋವಿಯತ್ ಒಕ್ಕೂಟ ಒಡೆಯಿತು ಎಂದಾಕ್ಷಣ ಬಂಡವಾಳಷಾಹಿ ಗೆದ್ದಿತು ಎಂದಲ್ಲ. ಪ್ರಜಾಪ್ರಭುತ್ವ ಬಂತು ಎಂದಲ್ಲ. ಇತಿಹಾಸ ಮುಗಿಯಿತು ಎಂದಲ್ಲ, ಸಮಾಜವಾದ-ಬಂಡವಾಳಷಾಹಿ ಎರಡರ ಬೇರೂ ಒಂದೇ". ಇಲ್ಲಿ ಫ್ರೆಂಚ್ ಕವಿ ಪಾಲ್‌ವಲೇರಿ ಹೇಳುವ ಮಾತು ಗಮನಾರ್ಹ. ಐರೋಪ್ಯ ನಾಗರಿಕತೆ ವಿಸ್ತರಣಶಾಲಿ. ಅದಕ್ಕೆ ಅತ್ಯಧಿಕ ಅಧಿಕಾರ ಬೇಕು, ಬಂಡವಾಳ ಬೇಕು. ಉತ್ಪಾದನಾ ದಕ್ಷತೆ, ನಿಸರ್ಗದ ಬದಲಾವಣೆ ಬೇಕು. ಬಂಡವಾಳಷಾಹಿ ಮತ್ತು ಸಮಾಜವಾದ ಎರಡರ ಬೇರೂ ಇದೇ ನೆಲದಲ್ಲಿ. ಅಂತೆಯೆ ಯಾವುದು ಬಿದ್ದರೂ ಚರಿತ್ರೆಯ ಮುಕ್ತಾಯ ಎಂದೇನೂ ಅಲ್ಲ. "ಈಗ ನಮ್ಮ ಕೆಲಸವೇನೆಂದರೆ ನಮ್ಮ ಇತಿಹಾಸದ ತಪ್ಪುನೆಪ್ಪುಗಳನ್ನು ಪ್ರಾಂಜಲವಾಗಿ ಪರಾಮರ್ಶಿಸಿ, ತಪ್ಪಾದುದನ್ನು ತಿದ್ದಿಕೊಳ್ಳುವುದು.. ವಿಸ್ತರಣಾಶೀಲತೆಯ ಪರಿಣಾಮ ಭಯಂಕರ. ಅದರ ಬಗ್ಗೆ ಮರುಚಿಂತನೆ ಅಗತ್ಯ. ನಾಗರಿಕತೆಯನ್ನು ನಾವು "ಆಧುನಿಕ" ದಿಂದ ಆಚೆ ಹೊಸ ನೆಲೆಗೆ ಒಯ್ಯಬೇಕು. ತಮ್ಮನ್ನು ವಿಶ್ವಮಾನವರೆಂದು ಬಗೆದುಕೊಳ್ಳುವವರಿಂದ ಮಾತ್ರ ಇದು ಸಾಧ್ಯ. ಅವರು ರಾಷ್ಟ್ರದ ಗಡಿಗಳನ್ನು ಮೀರಿ, ಜನಾಂಗೀಯ ವ್ಯತ್ಯಾಸಗಳನ್ನು ಮೀರಿ ಜಗತ್ತಿನಾದ್ಯಂತ ಜನತೆಯಲ್ಲಿ ಅನುಕಂಪ

ಮಾಡಿಸುವಂತಾಗಬೇಕು, ವಿಶ್ವಮಾನವನಿಗೆ ರಾಷ್ಟ್ರಗಳ ಸೀಮೆಯ ಬಂಧನವಿಲ್ಲ, ಜನಾಂಗ ಭೇದದ ಲೇಪವಿಲ್ಲ. ನಿಜ, ರಾಷ್ಟ್ರವೊಂದರ ಹೆಮ್ಮೆಯ ಪ್ರಜೆ ವಿಶ್ವಪ್ರಜೆ ಆಗುವುದು ಸುಲಭವಲ್ಲ. ಆದರೆ ಜಾಗತಿಕ ಶಾಂತಿ ಅರಿವುಗಳಿಗೆ ಇದು ಅನಿವಾರ್ಯ. ಹಿಂಸೆ, ದ್ವೇಷ ಹಾಗೂ ಸ್ವಾರ್ಥಗಳು ಅಹಿಂಸಾತ್ಮಕ ವಿಶ್ವ ವ್ಯವಸ್ಥೆಗೆ ಎಡೆಗೊಡಬೇಕು."

ಹಿಂಸೆಯೊಡನೆ ಗಾಂಧಿಯವರ ಮುಖಾಮುಖಿ

೧೯೯೨ರಲ್ಲಿ ಜಪಾನಿನ ಡಾ|| ಇಕೇಡಾ ಎಂಬವವರು ದೆಹಲಿಯಲ್ಲಿ ಗಾಂಧೀ ಸಂಸ್ಮರಣ ಉಪನ್ಯಾಸ ನೀಡಿದರು. ಮನುಕುಲದ ಶಾಂತಿಯುತ ಬಾಳ್ವೆಯ ಪ್ರಯತ್ನದಲ್ಲಿ ಗಾಂಧೀ ವಿಚಾರ ಮುಖ್ಯ ಅಂಗವಾಗುತ್ತದೆ ಎಂದರು ಅವರು. ತಮ್ಮ ಭಾಷಣದಲ್ಲಿ ಅವರು ಪ್ರಸ್ತಾಪಿಸಿದ್ದು ನಾಲ್ಕು ಗಾಂಧೀ ವಿಚಾರಗಳನ್ನು-ಆಶಾವಾದ, ಕ್ರಿಯಾಶೀಲತೆ, ಜನತೆ ಹಾಗೂ ಪರಿಪೂರ್ಣ ದೃಷ್ಟಿ. ಗಾಂಧೀಜಿಯ ಆಶಾವಾದ ಎಂದರೆ ಮಾನವೀಯತೆಯಲ್ಲಿ ಬೇಷರತ್ ಶ್ರದ್ಧೆ, ಅದಮ್ಯ ಶ್ರದ್ಧೆ, ನ್ಯಾಯ, ಅಹಿಂಸೆ ಹಾಗೂ ನಿಶಿತ ಆತ್ಮಪರೀಕ್ಷೆಗಳಿಂದ ಮೂಡಿದ ಶ್ರದ್ಧೆ. ಇಕೇಡಾರವರ ಈ ಅಭಿಪ್ರಾಯವನ್ನು ಸಮರ್ಥಿಸುತ್ತ ಗಾಲ್‌ಟುಂಗ್ ಹೇಳುತ್ತಾರೆ- "ಗಾಂಧಿಯವರು ತಮ್ಮ ಜೀವಿತದಲ್ಲಿ ನಡೆಸಿದ ಪ್ರಮುಖ ಚಳುವಳಿಗಳ ಆಶ್ಚರ್ಯಕರ ಅಂಶವೇ ಆಶಾವಾದ. ಸ್ವರಾಜ್ಯಕ್ಕಾಗಿ ಹೋರಾಟ ಜನಸಾಮಾನ್ಯರ ಏಳಿಗೆಯ ಪ್ರಯತ್ನ. ವಿಶೇಷವಾಗಿ ತರಂಗ ವರ್ತುಲಗಳೆಂದು ಅವರು ಕರೆದ ಸ್ವಾವಲಂಬಿ, ಸಣ್ಣ, ಆತ್ಮೀಯ ಸಮುದಾಯಗಳ ಏಳಿಗೆ ಅಥವಾ (ಸರ್ವೋದಯ) ಜಾತಿಬಾಹಿರರ ಸ್ಥಿತಿ ಸುಧಾರಣೆ, ಸ್ತ್ರೀಯರ ಏಳಿಗೆ, ದ.ಆಫ್ರಿಕಾದಲ್ಲಿ ಭಾರತೀಯರಿಗೆ ಸಮಾನತೆ ಗಳಿಕೆ, ಅಷ್ಟೇನೂ ಯಶಸ್ವಿಯಾಗದ ಹಿಂದೂ-ಮುಸ್ಲಿಮ್ ಶಾಂತಿ ಪ್ರಯತ್ನ, ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲ ಗುರಿಸಾಧನೆಗೆ ಸತ್ಯಾಗ್ರಹವನ್ನೇ ಸಾಧನವಾಗಿ ರೂಪಿಸಿದ್ದು". ಈ ಗುರಿಗಳೆಲ್ಲವನ್ನೂ ಸಾಧಿಸಿದರು. ಅದಕ್ಕೇ ಐನ್‌ಸ್ಟೀನ್ ಹೇಳಿದ್ದು -"ಆದರ್ಶ ಮತ್ತು ಆಚರಣೆಗಳ ನಡುವೆ ಸೂಕ್ಷ್ಮವಾದ ಸಮತೋಲವನ್ನು ಉಳಿಸಿಕೊಂಡಿದ್ದರಿಂದಲೇ ಗಾಂಧೀ ಅತಿಶ್ರೇಷ್ಠ ರಾಜಕೀಯ ವಿಭೂತಿ ಪುರುಷ." ಈ ಸಾಮರ್ಥ್ಯವೇ ಅಹಿಂಸಾತ್ಮಕ ಚಳುವಳಿಯಲ್ಲಿ ಸಾಕಾರಗೊಂಡಿತು.

ಹಿಂಸೆಯ ಮೇಲೆ ನಿಂತ ವ್ಯವಸ್ಥೆ ಸ್ಥಿರವಾಗಲಾರದು ಎಂದು ಗಾಂಧೀ ರೋಮೇರೋಲಾ ಸಂಗಡ ಮಾತುಕತೆಯಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಹಾಗೆಯೆ ಆಯಿತು. ಸೋವಿಯಟ್ ವ್ಯವಸ್ಥೆ ಕುಸಿದು ಬಿತ್ತು. ಹಿಂಸೆ ಹಿಂಸೆಯನ್ನು ಉಂಟು ಮಾಡುತ್ತದೆ. ಇದಕ್ಕೆ ನಿದರ್ಶನ ಬ್ರಿಟನ್-ಭಾರತಗಳ ನಡುವಣ ಸಂಬಂಧ, ಫ್ರೆಂಚ್ ಕ್ರಾಂತಿ, ಅಮೆರಿಕದಲ್ಲಿ ದೇಶೀಯರ ಸಾಮೂಹಿಕ ಹತ್ಯೆ, ಅಂತರ್ಯುದ್ಧ.

ಅಹಿಂಸೆಯಿಂದ ಯಶಸ್ಸು ಸಾಧ್ಯ ಎಂಬುದನ್ನು ಗಾಂಧೀ ದಕ್ಷಿಣ ಆಫ್ರಿಕಾದಲ್ಲಿ ಹಾಗೂ ಭಾರತದಲ್ಲಿ ತೋರಿಸಿಕೊಟ್ಟರು. ಇತರ ದೇಶಗಳ ಈ ಕ್ರಾಂತಿಗಳಲ್ಲೂ ಹಿಂಸೆ ಇಲ್ಲದೆಯೆ ಗೆಲವು ಸಾಧಿಸುವ ಸಾಧ್ಯತೆ ಇತ್ತು. ಸೋವಿಯಟ್ಟರು ನಡೆಸಿದ್ದು ಕೇವಲ ಹುಸಿ ಕ್ರಾಂತಿ ಎಂದು ಇತಿಹಾಸ ನಿಷ್ಠುರವಾಗಿ ತೋರಿಸಿದೆ.

ಮತಧರ್ಮ ಮತ್ತು ಸಾಮಾಜಿಕ ಬದಲಾವಣೆ

ಹಿಂದೂ ಆಗಿದ್ದುಕೊಂಡೇ ಗಾಂಧೀಜಿ ಬೌದ್ಧಧರ್ಮದ ಮೂರು ಮುಖ್ಯ ತತ್ತ್ವಗಳನ್ನು ಅಳವಡಿಸಿಕೊಂಡರು-ಅಹಿಂಸೆ, ಜಾತಿಪದ್ಧತಿಯ ನಿರಾಕರಣೆ ಹಾಗೂ ಸಂಘ ಅಥವಾ ಸಣ್ಣ

ಸಣ್ಣ ಸಮುದಾಯಗಳ ಕಲ್ಪನೆ. ಬುದ್ಧನಂತೆ ಗಾಂಧಿಯೂ ಮಧ್ಯಮ ಮಾರ್ಗವನ್ನೇ ಹಿಡಿದರು ಎನಿಸುತ್ತದೆ.

ಭಾರಿ ಕೈಗಾರಿಕೆ, ಯಂತ್ರಗಾರಿಕೆ ಬಗ್ಗೆ ಗಾಂಧೀಜಿಯ ವಿಚಾರ ಟೀಕೆಗೆ ಗುರಿಯಾಗಿದೆ. ಪ್ರಗತಿ ವಿರೋಧಿ ಎಂಬ ಆಕ್ಷೇಪಣೆಯೂ ಬಂದಿದೆ. ಗಾಂಧಿಯವರ ಪಾಲಿಗೆ ಬೃಹತ್ ಉದ್ಯಮಗಳು ಬ್ರಿಟಿಷ್ ಸಾಮ್ರಾಜ್ಯಷಾಹಿಯ ಸಾಧನಗಳು. ಪ್ರಜೆಗಳನ್ನೂ ಉದ್ಯಮಗಳನ್ನೂ ಮಾನವೀಯ ಗೊಳಿಸಲು ಸಾಧ್ಯವಿಲ್ಲವೇ? ಪ್ರಜೆಗಳು ಸ್ವಾಯತ್ತ ಸಣ್ಣ ಸಣ್ಣ ಸಮುದಾಯಗಳಾಗಬಹುದಲ್ಲ (ಗ್ರಾಮಸ್ವರಾಜ್ಯ) ಹಾಗೆಯೇ ಮಾನವತೆಯನ್ನು ಹೀನಗೊಳಿಸದಂಥ ತಂತ್ರಜ್ಞಾನವನ್ನು ರೂಪಿಸಬಹುದಲ್ಲ? ಭಾರಿ ಕೈಗಾರಿಕೆ-ಕಚೇರಿಗಳ ಬದಲಾಗಿ, ಮನೆಮನೆಯಲ್ಲೂ ಉದ್ಯಮ ನಡೆಯಬಹುದಲ್ಲ! ಬಂಡವಾಳಷಾಹಿ ಹಿಂಸೆಯೊಂದಿಗೆ ತಳುಕುಗೊಂಡಿದೆ. ಅದಕ್ಕೆ ಗಾಂಧೀ ಅಹಿಂಸೆ. ಗೃಹಕೈಗಾರಿಕೆ, ಗ್ರಾಮಕೈಗಾರಿಕೆಗಳನ್ನು ಸೂಚಿಸಿದರು.

ಸಂಘರ್ಷ, ಹಿಂಸೆ, ಕೃತ್ರಿಮತೆ ಮತ್ತು ಪ್ರೀತಿ-ಕರುಣೆಗಳಂಥ ಮಾನವೀಯ ಗುಣಗಳ ನಿರ್ಲಕ್ಷ್ಯ-ಇವುಗಳಿಗೆ ಪರ್ಯಾಯ ಇದೆ ಎಂದು ಗಾಂಧೀ ಯಶಸ್ವಿಯಾಗಿ ಸಾಬೀತು ಮಾಡಿದರು.

೧೯೪೭ರಲ್ಲಿ ಬ್ರಿಟನ್—ಭಾರತ ಬೇರ್ಪಟ್ಟ ರೀತಿ ಗಾಂಧಿಯವರ ಪ್ರಭಾವಕ್ಕೆ ಉಜ್ವಲನಿದರ್ಶನ. ಕೋಟಿಗಟ್ಟಲೆ ಸಾಮಾನ್ಯ ಜನ ನಿರಾಯುಧರಾಗಿ ತಮ್ಮ ಆದರ್ಶ ಸಾಧನೆಗೆ ಶಾಂತವಾಗಿ ದಾಪುಗಾಲು ಹಾಕಿದ ದೃಶ್ಯ ಇತಿಹಾಸದಲ್ಲೇ ಅನನ್ಯ. ಸೂಕ್ತ ಕ್ರಿಯಾಶೀಲ ನಾಯಕತ್ವವಿದ್ದರೆ ಮಾನವೀಯ ಕ್ರಾಂತಿ ಸಾಧ್ಯ ಮತ್ತು ನಿಜವಾದ ಕ್ರಾಂತಿ ರಕ್ತಸಿಕ್ತವಾಗಬೇಕಾಗಿಲ್ಲ ಎಂಬುದಕ್ಕೆ ಇದು ಸಾಕ್ಷಿ.

ಸೈಬರ್ ಯುಗದಲ್ಲಿ ಹಾಗೂ ಜಾಗತೀಕರಣದ ಸಂದರ್ಭದಲ್ಲಿ ಗಾಂಧಿ

ಇಂದಿನ ಸರ್ವವ್ಯಾಪ್ತಿಯಾದ ಲೌಕಿಕ ಆಜ್ಞೆಯ ಉಪಭೋಗ ಸಂಸ್ಕೃತಿಯಲ್ಲಿ ಗಾಂಧಿಯ ಪ್ರಸ್ತುತತೆ ಏನು ? ಗಾಂಧೀ ತನ್ನ ಜೀವಮಾನ ಪೂರ್ತಿ ಹೋರಾಟ ಮಾಡಿದ್ದು ಇವೇ ಮೂರರ ವಿರುದ್ಧ. ಒಂದು ಕಾಲಕ್ಕೆ ಒಂದು ತತ್ತ್ವವನ್ನು ಅಲ್ಲಗಳೆಯಲಾಯಿತು ಎಂದಾಕ್ಷಣ ಆ ತತ್ತ್ವ ಸತ್ತಿತು ಎಂದಲ್ಲ ಅಥವಾ ಅದು ಅಪ್ರಸ್ತುತ ಎಂದಲ್ಲ. ಜಗತ್ತನ್ನು ಅಲುಗಾಡಿಸಿದ ಜನರನ್ನು ಬಹುಮಟ್ಟಿಗೆ ಶಿಲುಬೆಗೆ ಏರಿಸಲಾಯಿತು, ಜೀವಸಹಿತ ಸುಡಲಾಯಿತು, ಅಥವಾ ದ್ರೋಹಿ ಎನ್ನಲಾಯಿತು ಇಲ್ಲವೇ ಬಹಿಷ್ಕರಿಸಲಾಯಿತು. ಇಷ್ಟಾದರೂ ಸತ್ಯಕ್ಕಾಗಿ ಶೋಧನೆ, ಮುಕ್ತ ಚಿಂತನೆ ಯುಗಯುಗಕ್ಕೂ ನಡೆದೇ ನಡೆಯಿತು. ಹೆಚ್ಚು ಹೆಚ್ಚು ಪ್ರಬಲವಾಗಿ ನಡೆಯಿತು. ಎಷ್ಟೇ ದಮನ ನಡೆದರೂ ಅಂತಹ "ದಂಗೆಕೋರರ" ಪಟ್ಟಿ ಬೆಳೆಯುತ್ತಲೇ ಇದೆ. ಇದು ಇತಿಹಾಸದ ಹಿಮ್ಮೆಟ್ಟಿಸಲಾಗದ ಸಂಗತಿ.

ಕಳೆದ ಶತಮಾನದಲ್ಲಿ ವಿಜ್ಞಾನ ತಂತ್ರಜ್ಞಾನಗಳ ಜಾಣ ಪ್ರಯೋಗಗಳಿಂದಾಗಿ ಕಣ್ಣು ಕೋರೈಸುವಂಥ ಫಲಗಳು ಮನುಕುಲಕ್ಕೆ ಪ್ರಾಪ್ತವಾಗಿವೆ. ಅನೇಕ ರಂಗಗಳಲ್ಲಿ ಅನಿರೀಕ್ಷಿತ ಹಾಗೂ ಕಲ್ಪನಾತೀತ ಫಲ ಬಂದಿವೆ. ಇಷ್ಟಾದರೂ ಜಗತ್ತು ಇಂದು ಹಲವು ಜಾಗತಿಕ ಬಿಕ್ಕಟ್ಟುಗಳ ಬಾಗಿಲಿನಲ್ಲಿ ನಿಂತಿದೆ. ಘರ್ಷಣೆ, ಒತ್ತಡ ತೀವ್ರವಾಗುತ್ತಿವೆ. ಎಲ್ಲೆಲ್ಲೂ ಆಘಾತದ ಕಂಪನ ಆಗುತ್ತಿದೆ. ಸೋವಿಯಟ್ ಯೂನಿಯನ್ ಮಾಯವಾಗಿ ಈಗ ಜಗತ್ತು ಏಕಧ್ರುವವಾಗಿದೆ. ಶೀತಲ ಯುದ್ಧದ ಕಾಲ ಹೋಯಿತು, ಇನ್ನು ನೆಮ್ಮದಿಯಲ್ಲಿ ಇರಬಹುದು ಎಂದು ಯಾರಾದರೂ ಭಾವಿಸಿದರೆ ಅದು ಪೊಳ್ಳು ನಿರೀಕ್ಷೆ ಆಗುತ್ತದೆ. ಜಗತ್ತಿನಲ್ಲೆಲ್ಲ ನಡೆಯುತ್ತಿರುವ ಆಂತಕಕಾರಿ ಹೊಡೆದಾಟ, ಹಿಂಸೆ ಮತ್ತು ಅವಿವೇಕದ ಕೊಲೆಗಳಿಂದ ಇದು ಸ್ಪಷ್ಟವಾಗುತ್ತಿದೆ. ಶಸ್ತ್ರಾಸ್ತ್ರಗಳಲ್ಲಿ

ಇಳಿಕೆ, ಸೇನಾವೆಚ್ಚದಲ್ಲಿ ಕಡಿತ ಎಂದೆಲ್ಲ ಭಾರಿ ಭಾರಿ ಘೋಷಣೆ ಆಗುತ್ತಿದ್ದರೂ, ಅಪಾಯಕಾರಿ ಶಸ್ತ್ರಗಳ ಉತ್ಪಾದನೆಯಿದೆ, ನಡುಗಿಸುವಂತೆ ಹೆಚ್ಚುತ್ತಿದೆ. ಶಸ್ತ್ರಾಸ್ತ್ರಗಳಿಗಾಗಿಯೇ ಜಗತ್ತು ವರ್ಷಕ್ಕೆ ೧೦೦೦ ಬಿಲಿಯನ್ ಡಾಲರ್ ಸುರಿಯುತ್ತಿದೆ ಎನ್ನಲಾಗಿದೆ. ಇದರಲ್ಲಿ ಆರನೆಯ ಒಂದು ಪಾಲು ಹಣ ಸಾಕು, ಜಗತ್ತಿನಲ್ಲಿ ಇನ್ನು ಆರು ವರ್ಷದಲ್ಲಿ ಹಸಿವನ್ನು ತೊಡೆದು ಹಾಕಬಹುದು.

ನಾವು ದಾರಿತಪ್ಪಿದ್ದು ಎಲ್ಲಿ ? ನಮ್ಮ ನತದೃಷ್ಟ ಸೋದರರನ್ನು ನಾವು ಮರೆತೇ ಬಿಟ್ಟೆವೆ? ನಾವು ಪ್ರಯೋಗ ಮಾಡಿ ನೋಡಿದ ಹೆಚ್ಚು ಕಡಿಮೆ ಇಲ್ಲಿ ಅಭಿವೃದ್ಧಿ ಮಾದರಿಗಳೂ ಉಳ್ಳವರನ್ನೇ ಕುರಿತವು. ಹಣ ಮಾಡುವುದು, ಪ್ರಭಾವ ಬೆಳೆಸಿಕೊಳ್ಳುವುದು ಇದೇ ಈ ಎಲ್ಲ ಮಾದರಿಗಳ ಉದ್ದೇಶ್ಯವೂ ಆಗಿದೆ. ಇದರ ಪರಿಣಾಮ ಅತಿ ಗಂಭೀರ.

ನಗರೀಕರಣ ಹಳೆಯ ಕತೆ. ಸಮಾಜ ಪರಿವರ್ತನೆಯ ಸಹಜ ಪರಿಣಾಮ. ಘರ್ಷಣೆ ಕುಗ್ಗಿ, ಸಂಪನ್ಮೂಲಗಳ ಹಂಚಿಕೆಗೆ ಸಹಾಯಕ ಇದು ಎಂಬ ನಿರೀಕ್ಷೆ ಇತ್ತು. ಕೈಗಾರಿಕೀಕರಣ ಇನ್ನೊಂದು ಹೊಸ ವಿಚಾರ ಮೂಡಿಸಿತು. ಉತ್ಪಾದನಾ ಮೂಲಗಳನ್ನು ಹಿಡಿತದಲ್ಲಿ ಇಟ್ಟುಕೊಂಡವರು ಕೈಗಾರಿಕೀಕರಣದ ಫಲವನ್ನು ಲಪಟಾಯಿಸಿದರು. ಅವರ ಹೊಸ ವರ್ಗವೇ ಹುಟ್ಟಿಕೊಂಡಿತು. ಬಡತನ ಹೆಚ್ಚಿತು, ಮೂಲೆಗುಂಪು ಮಾಡುವುದು ಹೆಚ್ಚಿತು, ಶ್ರಮಿಕನಿಗೆ ಹೆಚ್ಚಿನ ಅವಕಾಶ ಒದಗುವ ಬದಲು, ಉದ್ಯೋಗಗಳು ಕ್ಷೀಣಿಸುತ್ತಿವೆ. ಅನೇಕರಿಗೆ ಉದ್ಯೋಗವನ್ನು ನಿರಾಕರಿಸಲಾಗುತ್ತಿದೆ. ಸಂಘಟಿತ ಕಾರ್ಮಿಕರುಗಳಲ್ಲಿ ಬಿರುಕು ಹೆಚ್ಚುತ್ತಿದೆ. ಎಲ್ಲಕ್ಕಿಂತ ಘೋರ ದುರಂತವೆಂದರೆ ಕೈಗಾರಿಕೆಗಳು ಹುಟ್ಟು ಹಾಕಿದ ಕೊಳೆಗೇರಿಗಳ ಸಮಸ್ಯೆ. ಆ ಕೇರಿಗಳು ಮಾನವನನ್ನು ಪಶುವಾಗಿಸುವ ನರಕಗಳಾಗಿವೆ. ಅವರಿಗೆ ಮುಕ್ತಿಯೆ ಇಲ್ಲವೇನೋ ಎನ್ನುವಂತೆ ಆಗಿದೆ.

ಕೃಷಿಯು ಮಾನವನ ಅತಿ ಪ್ರಾಚೀನ ಉದ್ಯಮ. ಭಾರಿ ತಂತ್ರಜ್ಞಾನ ಅದರಲ್ಲಿ ಹೊಕ್ಕು, ಅದೂ ಒಂದು ಕೈಗಾರಿಕೆ ಆಗುತ್ತಿದೆ. ಇದು ಅನೇಕ ಕೃಷಿ ದುಡಿಮೆಗಾರರನ್ನು ಎತ್ತಂಗಡಿ ಮಾಡಿದೆ. ಕೂಲಿಗಾರರು ಎಲ್ಲಿಗೆ ಹೋಗಬೇಕು? ಅನಿವಾರ್ಯವಾಗಿ ಕೊಳೆಗೇರಿಗೇ. ಮುಂಬೈ ಎದ್ದು ಕಾಣುವ ನಿದರ್ಶನ. ೨೦೦೦ರಲ್ಲಿ ಅಲ್ಲಿನ ಜನಸಂಖ್ಯೆ ೧೦.೫ ಮಿಲಿಯನ್. ಅದರಲ್ಲಿ ಕೊಳೆಗೇರಿಗಳ ೬ ಮಿಲಿಯನ್ ಜನರ ಬಾಳು ಅಮಾನುಷ.

ನ್ಯಾಯ-ಕರುಣೆಯಿಲ್ಲದ ಅಭಿವೃದ್ಧಿ

ಎಲ್ಲ ಕೈಗಾರಿಕೆಗಳಿಗೂ ಇಂಧನ ಮೂಲ ಅಂಶ. ಆರ್ಥಿಕ ಚಟುವಟಿಕೆಗಳ ಆಧಾರ ದ್ರವ್ಯ ಸೂರ್ಯಶಕ್ತಿ, ವಾಯುಶಕ್ತಿ, ಬಯೊಗ್ಯಾಸ್, ಸೂರ್ಯಶಕ್ತಿ ಗ್ರಾಹಕಗಳು, ಬ್ಯಾಟರಿಗಳು ಇತ್ಯಾದಿಗಳು ಹೊಸ ಮನ್ವಂತರವನ್ನೇ ತರಬಲ್ಲವು. ಹೊಸ ಸಂಸ್ಕೃತಿಯೆ ಮೂಡಬಹುದು. ಪರಿಸರ ಕಾಳಜಿ, ಸ್ತ್ರೀ ಜಾಗ್ರುತಿ, ಶಾಂತಿ ಚಳುವಳಿಗಳ ಸಂಸ್ಕೃತಿ.

ಗಾಂಧೀ, ಜೆ.ಸಿ. ಕುಮಾರಪ್ಪ ಅವರ ದರ್ಶನ, ಪ್ರಯೋಗಗಳನ್ನೂ, ಶುಮಾಕರ್, ಹೆಂಡರಸನ್, ಕಪ್ರಾ ಮುಂತಾದವರ ಸಿದ್ಧಾಂತಗಳನ್ನೂ, ಧಾರಕ (Sustainable) ಅಭಿವೃದ್ಧಿ ಎಂಬುದರ ದೃಷ್ಟಿಯಿಂಧ ಪರಿಶೀಲಿಸಬಹುದು. ಈ ಧಾರಕ ಅಭಿವೃದ್ಧಿಯ ಮಾತು ಇನ್ನೂ ಅಸ್ಪಷ್ಟವಾಗಿದೆ. ಆದರೆ ಭೂಮಂಡಲದಲ್ಲಿ ಜೀವದ ಉಳಿವಿನ ಬಗ್ಗೆ ಕಾಳಜಿ ಇರುವವರೆಲ್ಲರ ಮಂತ್ರವಾಗಿದೆ. ಈ ಪರಿಶೀಲನೆ ಆಶ್ಚರ್ಯಕರ ಸಂಗತಿಯನ್ನು ಹೊರಚೆಲ್ಲುತ್ತದೆ. ಗಾಂಧೀ ವಿಚಾರ ಪ್ರಣಾಲಿ ಹಾಗೂ ಕಾರ್ಯಕ್ರಮದಲ್ಲಿ, ಈ ಧಾರಕ ಅಭಿವೃದ್ಧಿಗೆ ಬೇಕಾದ ಸಾಕಷ್ಟು ಸಲಕರಣೆ ಇವೆ! ಸೂಕ್ತ ಹತೋಟಿ ಇಲ್ಲವಾದರೆ, ಜಗತ್ತಿಗೆ ಏನಾಗಬಹುದೊ·ಎಂಬುದರತ್ತ ಗಾಂಧಿ

೧೯೦೯ರಲ್ಲೆ "ಹಿಂದ್ ಸ್ವರಾಜ್"ನಲ್ಲಿ ಜಗತ್ತಿನ ಗಮನ ಸೆಳೆದರು. ಅವರು ಹೇಳಿದರು, "ಅರ್ಥ ಮತ್ತು ನೀತಿಯ ನಡುವೆ ನಾನು ಭೇದ ಮಾಡಲಾರೆ, ಗೆರೆ ಎಳೆಯಲಾರೆ, ವ್ಯಕ್ತಿಯ ಅಥವಾ ರಾಷ್ಟ್ರದ ನೈತಿಕ ಕ್ಷೇಮವನ್ನು ಗಾಸಿಮಾಡುವಂಥ ಅರ್ಥ ನೀತಿ ಬಾಹಿರ, ಅಂತೆಯೇ ಪಾಪ". ಇದರ ಅರ್ಥ ಧಾರಕ ಅಭಿವೃದ್ಧಿಗೆ ಜೈವಿಕ ಹಾಗೂ ಸಾಂಸ್ಕೃತಿಕ ವೈವಿಧ್ಯ ಬೇಕು. ಅವೆರಡೂ ಪರಸ್ಪರವಾಗಿ ಮತ್ತು ಪ್ರಕೃತಿಯೊಂದಿಗೆ, ನ್ಯಾಯ ಮತ್ತು ಕರುಣೆಗಳೊಂದಿಗೆ ತಳುಕುಗೊಂಡಿವೆ.

"ಮಾನವನ ಮನಸ್ಸು ಚಡಪಡಿಸುವ ಹಕ್ಕಿಯ ಹಾಗೆ. ಅದು ಹೆಚ್ಚು ಪಡೆದಷ್ಟೂ ಹೆಚ್ಚು ಕೇಳುತ್ತದೆ. ಆದರೂ ಅದಕ್ಕೆ ತೃಪ್ತಿ ಇಲ್ಲ. ಆದ್ದರಿಂದಲೇ ನಮ್ಮ ಪ್ರಾಚೀನರು ಭೋಗಕ್ಕೆ ಮಿತಿ ಸೂಚಿಸಿದರು. ಸುಖ ಏನಿದ್ದರೂ ಒಂದು ಮಾನಸಿಕ ಸ್ಥಿತಿ ಎಂಬುದನ್ನು ಅವರು ಕಂಡುಕೊಂಡರು. ಹಣವಿದ್ದರೆ ಸುಖ ಎಂದೇನೂ ಇಲ್ಲ. ಇಲ್ಲದಿದ್ದರೆ ಅ ಸುಖ ಎಂದೂ ಅಲ್ಲ." ಇದು ಇಪ್ಪತ್ತನೆಯ ಶತಮಾನದ ಬೆಳಕು ಹರಿಯುತ್ತಿದ್ದಾಗ ಗಾಂಧೀ ಆ ಪುಟ್ಟ ಗ್ರಂಥದಲ್ಲಿ ಬರೆದ ಮಾತು.

ನಾವು ಅನ್ಯಾಯ, ದೋಷಪೂರಿತವಾದ ವ್ಯವಸ್ಥೆಯನ್ನು ಬೆಳೆಸುತ್ತಿದ್ದೇವೆ. ಆದರೆ ನಮ್ಮ ಸಂಸ್ಕೃತಿ ನಾಗರಿಕತೆಗಳಲ್ಲಿ ಕರುಣೆಯ ಕಣವೂ ಇಲ್ಲದಾಗಿದೆ. ಮನುಕುಲವನ್ನೇ ಮರುಳು ಮಾಡುವಂತಹ ಜೂಜುಗಾರಿಕೆ, ಬಂಡವಾಳಷಾಹಿಯ ಸೆಳೆತವಿದೆ ಅದರಲ್ಲಿ.

ನಾವು ವಿಜ್ಞಾನ-ತಂತ್ರಜ್ಞಾನಗಳನ್ನು ದೂಷಿಸುತ್ತೇವೆ. ಆದರೆ ತಂತ್ರಜ್ಞಾನಕ್ಕೆ ಮನಸ್ಸು ಇಲ್ಲ, ಸಮಾಜದ ಮನಸ್ಸು ನಿರ್ಧಾರಕ ಎಂಬುದನ್ನು ಎಷ್ಟು ಜನ ಅರಿಯುತ್ತಾರೆ? ಪ್ರಯಾಣಿಕರನ್ನು ಒಯ್ಯುವ ವಿಮಾನ ಬಾಂಬನ್ನೂ ಒಯ್ಯುತ್ತದೆ.

ಅತಿ ಪ್ರಮುಖ ಎಂದು ಗಾಂಧೀಜಿ ನಂಬಿದ್ದ ಕೆಲವು ತತ್ತ್ವಗಳನ್ನು ನೋಡೋಣ -

1) ಅಗತ್ಯಗಳ ವೃದ್ಧಿಗೆ ಬದಲಾಗಿ, ಅಗತ್ಯಗಳ ಹತೋಟಿಯನ್ನು ಸೂಚಿಸಿದರು ;

2) ಭಾರಿ ಪ್ರಮಾಣದ ತಂತ್ರಜ್ಞಾನದ ಬದಲಿಗೆ, ಕೆಲವು ಕ್ಷೇತ್ರಗಳಲ್ಲಿ ಮಾತ್ರ ಅಂತಹ ತಂತ್ರಜ್ಞಾನ ಇದ್ದು ಜೊತೆಯಲ್ಲೆ ಸಣ್ಣ ಪ್ರಮಾಣದ ತಂತ್ರಜ್ಞಾನ ಹಾಗೂ ಕರಕುಶಲ ಕಾರ್ಯ ಇರಬೇಕು ;

3) ಭಾರಿ ಪ್ರಮಾಣದ ಉತ್ಪಾದನೆಗೆ ಬದಲಾಗಿ ಜನ ಸಮೂಹದಿಂದ ಉತ್ಪಾದನೆ. ಅನಿವಾರ್ಯದಲ್ಲಿ ಮಾತ್ರ ಭಾರಿ ಪ್ರಮಾಣದ ಉತ್ಪಾದನೆ ;

4) ಆರ್ಥಿಕ ಶಕ್ತಿ-ಅಧಿಕಾರದ ಕೇಂದ್ರೀಕರಣ ಸಲ್ಲದು. ಸರ್ಕಾರಿ ಸ್ವಾಮ್ಯ ಅಲ್ಪವಾಗಿರಬೇಕು, ವ್ಯಾಪಕವಾದ ಗ್ರಾಮೀಣ ಮಾಲಿಕತ್ವ, ಧರ್ಮದರ್ಶಿತ್ವ ಉತ್ತಮ ;

5) ಅತಿಯಾದ ನಗರೀಕರಣ ಅವರಿಗೆ ಹಿಡಿಸಲಿಲ್ಲ. ಸ್ವಯಂ ಆಡಳಿತವುಳ್ಳ ಸ್ವಾವಲಂಬಿ ಗ್ರಾಮ ರಾಜ್ಯವನ್ನು ಪ್ರತಿಪಾದಿಸಿದರು ;

6) ಎಲ್ಲ ಬಗೆಯ ಅಸಮಾನತೆ, ವಿಶೇಷವಾಗಿ ವೇತನ, ಸಾಮಾಜಿಕ ನ್ಯಾಯ ಹಾಗೂ ಲಿಂಗಗಳಲ್ಲಿ ಅಸಮಾನತೆ ಕೂಡದು. ಆ ಅನ್ಯಾಯ ಮುಂದುವರಿದರೆ ಸಹಜ ನ್ಯಾಯವೇ ಇಲ್ಲವಾಗುತ್ತದೆ ;

7) ಅತಿಯಾದ ವಿಶೇಷ ತಜ್ಞತೆಗೆ ಬದಲಾಗಿ, ಸಾರ್ವತ್ರಿಕ ಶರೀರ ಶ್ರಮವನ್ನು ಬಯಸಿದರು ;

ಇವೆಲ್ಲ ಓಬೀರಾಯನ ಕಾಲದ ಸಂಪ್ರದಾಯ ನಿಷ್ಠ ಸಮಾಜ ಸುಧಾರಕನ ನೀತಿ ಬೋಧೆ ಎಂದು ಯಾರೂ ಕಲ್ಪಿಸಲು ಸಾಧ್ಯವಿಲ್ಲ. ಬದಲಾಗಿ, ಇವು ಒಬ್ಬ ಕ್ರಾಂತಿಕಾರಿ ಚಿಂತಕ, ಕ್ರಿಯಾಶೀಲ ತತ್ತ್ವಜ್ಞಾನಿಯ ಗಾಢ ಅರಿವನ್ನು ಬಿಂಬಿಸುತ್ತವೆ. ಆ ಜ್ಞಾನಿಯ ಜೀವನ ದರ್ಶನ ವ್ಯಾವಹಾರಿಕತೆ, ಪ್ರೀತಿ, ಕರುಣೆ ಹಾಗೂ ಸಹಮತಿಯುಕ್ತವಾದ ಪರಿವರ್ತನೆಗೆ ಈ ವಿಚಾರ ಪರಿಪ್ಲುತವಾಗಿದ್ದವು.

ಆರ್ಥಿಕ ಹಿತವೇ ಬಾಳಿನ ಏಕಮೇವ ಗುರಿಯಾದಂತಿದೆ. ಮೌಲ್ಯಗಳನ್ನು ತುಳಿದು ಹಾಕುತ್ತಿರುವ ರೀತಿಯನ್ನು ನೋಡಿದರೆ, ನಾವು ಹೋಗುತ್ತಿರುವುದಾದರೂ ಎಲ್ಲಿಗೆ ಎಂಬ ಪ್ರಶ್ನೆ ಏಳುತ್ತದೆ.

ಕವಿದು ಬರುತ್ತಿರುವ ಈ ಪ್ರವೃತ್ತಿಗಳ ಪ್ರವರ್ತಕರು ಈ ಕೆಲವು ವಿಪರ್ಯಾಸಗಳತ್ತ ವಿಮುಖರಾಗಿದ್ದಾರೆ -

* ಜಾಗತಿಕವಾಗಿ ಅತಿಯಾದ ಬಡತನ ಇಳಿದಿದ್ದರೂ, ಸಾಪೇಕ್ಷ್ಯ ದಾರಿದ್ರ್ಯ ಹೆಚ್ಚಿದೆ.
* ಹೆಚ್ಚು ಜನ ಶಿಕ್ಷಿತರಾಗಿದ್ದಾರೆ. ಆದರೆ ಮಾಹಿತಿ ಮತ್ತು ತಂತ್ರಜ್ಞಾನಗಳಿಗೆ ಪ್ರವೇಶ ಕೇಂದ್ರೀಕೃತವಾಗಿದೆ, ಕೆಲವರದೇ ಹಿಡಿತದಲ್ಲಿದೆ.
* ಹೆಚ್ಚು ದೇಶಗಳು ಪ್ರಜಾತಂತ್ರಕ್ಕೆ ಒಲಿದಿವೆ. ಆದರೆ ಅಧಿಕಾರ ಕೇಂದ್ರೀಕರಣ ಹೆಚ್ಚಾಗಿದೆ.
* ಸಂಪರ್ಕ ಸ್ಫೋಟವಾಗಿದೆ. ಆದರೆ ಪ್ರತ್ಯೇಕತೆ, ಒಂಟಿತನ ಹೆಚ್ಚುತ್ತಿದೆ. ಕುಟುಂಬ ವಿಘಟನೆ, ವ್ಯಕ್ತಿಗತ ಮಟ್ಟದಲ್ಲಿ ಸಂಪರ್ಕದ ಅಭಾವ ವ್ಯಾಪಕವಾಗುತ್ತಿದೆ.

ಇವೊತ್ತು ಅಭಿವೃದ್ಧಿ ಎಂದರೆ ಆರ್ಥಿಕ ಅಭಿವೃದ್ಧಿ ಮಾತ್ರ, ಒಮ್ಮೆಲೇ ಮನುಷ್ಯ ಒಂದು ವಸ್ತುವಾಗಿ ಬಿಟ್ಟಿದ್ದಾನೆ. ಮೃಗದಿಂದ ಆತನನ್ನು ಬೇರ್ಪಡಿಸುವ ವಿಚಾರಗಳು ಮೂಲೆಗುಂಪಾಗಿವೆ.

ಕವಿದು ಬರುತ್ತಿರುವ ಜಾಗತಿಕ ರಂಗದಲ್ಲಿ ನೈತಿಕ ಮೌಲ್ಯಗಳು, ಆಧ್ಯಾತ್ಮಿಕತೆ, ಕುಟುಂಬ ಮೌಲ್ಯಗಳು, ಧಾರ್ಮಿಕ ದೃಷ್ಟಿ ಎಲ್ಲವೂ ಸ್ಥಾನ ಕಳೆದುಕೊಂಡಂತಿವೆ, ಬೆಲೆ ಕಳೆದುಕೊಂಡಂತಿವೆ. ಈ ಜಗತ್‌ಗ್ರಾಮಕ್ಕೂ ನೈತಿಕತೆಗೂ ತಾಳಮೇಳ ಇರುವಂತಿಲ್ಲ. ಜಾಗತೀಕರಣ ಮುಂದೆ ಬಂದು ನಿಂತಿದೆ. ಧರ್ಮದ ಹಿನ್ನಡೆ, ರಾಷ್ಟ್ರಭಾವನೆಯ ಕ್ಷೀಣತೆಗಳಿಂದಾಗಿ, ಜಾಗತೀಕರಣ ಎಂದರೆ ಬಹುಪಾಲು ಶ್ರೀಮಂತ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯೆ ಆಗಿವೆ. ಚಾಲಕಸ್ಥಾನದಲ್ಲಿ ಇರುವವು ಆ ರಾಷ್ಟ್ರಗಳೇ. ಅಲ್ಪಸಂಖ್ಯಾತ ಶ್ರೀಮಂತರಿಗೂ ಬಹುಸಂಖ್ಯಾತ ಬಡವರಿಗೂ ಭೇದ ಹೆಚ್ಚುತ್ತಿದೆ. ಜಾಗತೀಕರಣದಿಂದ ಲಾಭ ದೊರಕುವುದು ಎಂಬ ಭ್ರಮೆಯಲ್ಲಿ ಕುರುಡು ಜಾಗತೀಕರಣದ ಅಪಾಯಗಳತ್ತ ಅರಿವಿರುವವರು ಬೆರಳೆಣಿಕೆಯಲ್ಲಿದ್ದಾರೆ. ಆರ್ಥಿಕ ಉದಾರೀಕರಣ ಹಾಗೂ ತಾಂತ್ರಿಕ ಸ್ವಯಂಚಾಲನೆ (ಆಟೋಮೋಷನ್) ಗಳು ಈಗಾಗಲೇ ಇರುವ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಂತರಗಳನ್ನು ಅಗಲ ಮಾಡುವ ಅಪಾಯ ಸುಳಿಯುತ್ತಿದೆ.

ಈ ಭೇದಗಳ ನಿವಾರಣೆಗೆ ದಿಟ್ಟ ಕ್ರಮಗಳನ್ನು ಕೈಗೊಳ್ಳದಿದ್ದರೆ, ಜಾಗತೀಕರಣ ಒಂದು ಮರೀಚಿಕೆ ಆದೀತು. ಜಗತ್‌ಗ್ರಾಮದ ಸಲುವಾಗಿ ರಾಷ್ಟ್ರ ಪ್ರಾಮುಖ್ಯ ಇಳಿಮುಖವಾಗುತ್ತಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಗೋಜು ಮಾಡಿವೆ. ಏಕೆಂದರೆ ಇಂದಿನ ಏಕಧ್ರುವ ರಾಜಕೀಯ ಹಾಗೂ ಮುಂದುವರಿದ ದೇಶಗಳ ಯಾಜಮಾನ್ಯ, ಹೆಚ್ಚು ಕಡಿಮೆ ಕೈಯೊಡ್ಡಿ ನಿಂತಿರುವ ಬಡ ಸೋದರ ದೇಶಗಳ ಮೂಗು ಹಿಡಿದು ಬಾಗಿಸುತ್ತಿವೆ.

ಇತ್ತೀಚೆಗೆ ಒಂದು ಸಂದರ್ಶನದಲ್ಲಿ ಒಬ್ಬ ವಿದ್ಯಾರ್ಥಿಗೆ ೨೧ನೆಯ ಶತಮಾನಕ್ಕೆ ಗಾಂಧೀಜಿಯ ಪ್ರಸ್ತುತತೆ ಏನು ಎಂದು ಪ್ರಶ್ನಿಸಲಾಯಿತು. ಆತ ಧೈರ್ಯದಿಂದ ಪರೀಕ್ಷಾರರನ್ನು ದಿಟ್ಟಿಸಿ ನೋಡಿ, ವಿನಯದಿಂದ ಹೇಳಿದ, "ಸ್ವಾಮಿ, ಇಂದು ಗಾಂಧೀ ಏಕೆ ಹೆಚ್ಚು ಪ್ರಸ್ತುತ ಎಂದು ತಾವು ಕೇಳಿದ್ದರೆ ಚೆನ್ನಾಗಿತ್ತು".

ನಮ್ಮೆದುರಿನ ಸವಾಲುಗಳನ್ನು ಅರಿಯುವಲ್ಲಿ ಈ ಹದಿಹರೆಯದ ಹುಡುಗನ ವಿವೇಕ ನಮಗೆ ಇರಲಿ ಎಂದು ಆಶಿಸೋಣ. ●

(ಅನುವಾದ : ನೀಲತ್ತಹಳ್ಳಿ ಕಸ್ತೂರಿ)

ಸಾಮಾಜಿಕ ಋಣದ ಪರಿಕಲ್ಪನೆಯಿತ್ತ ಶಿವರಾಮ ಕಾರಂತರ ಜನ್ಮ ಶತಾಬ್ದಿ ನೆನಪು

- ಡಾ|| ಸಿ.ಎನ್. ರಾಮಚಂದ್ರನ್

'ಕಡಲಂತೆ ಕಾರಂತ' ಎಂಬುದು ಬಳಸಿ, ಬಳಸಿ ಸಮಕಲಾದ ಉಪಮೆಯಾದರೂ ಇಂದಿಗೂ ಅದು ಅರ್ಥಪೂಣವಾಗಿದೆ. ಕಡಲಿನಂತಹುದೇ ಹರಹು ಮತ್ತು ಆಳ ಕಾರಂತ ವಾಙ್ಮಯಕ್ಕೆ. ೪೫ ಕಾದಂಬರಿಗಳು, ೯೭ ನಾಟಕಗಳು ಮತ್ತು ಗೀತನಾಟಕಗಳು, ಒಂಬತ್ತು ವಿಶ್ವ ಕೋಶಗಳು, ೧೩ ವೈಚಾರಿಕ ಗ್ರಂಥಗಳು, ೨೩೧ ಮಕ್ಕಳ ಕಥೆಗಳು,.... ಇತ್ಯಾದಿ ಒಟ್ಟು ಕಾರಂತರು ರಚಿಸಿದ ಕೃತಿಗಳ ಸಂಖ್ಯೆ ೪೧೭. ಮತ್ತೆ, ಕಾರಂತರು ಲೇಖಕರಷ್ಟೇ ಅಲ್ಲದೆ ಯಕ್ಷಗಾನ ಕಲಾವಿದರು, ನಟರು, ಸಂಶೋಧಕರು ಮತ್ತು ಪರಿಸರ ಹೋರಾಟಗಾರರೂ ಆಗಿದ್ದರು. ಇಂತಹ ಅಸಾಧಾರಣ ವ್ಯಕ್ತಿಯ ಹತ್ತು-ಹಲವು ಮುಖಗಳಲ್ಲಿ ಒಂದೆರಡನ್ನು ಮಾತ್ರ ಲೇಖನವೊಂದರಲ್ಲಿ ಪರಿಚಯಿಸಲು ಸಾಧ್ಯ.

ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಪ್ರವೇಶದಿಂದ ತನ್ನ ರಾಜಕೀಯ ಸ್ವಾತಂತ್ರ್ಯವನ್ನು ಭಾರತ ಕಳೆದುಕೊಂಡುದೇ ಅಲ್ಲದೆ ವೈಚಾರಿಕವಾಗಿಯೂ ಸಾಮ್ರಾಜ್ಯಶಾಹಿಯು ಮುಂದೊತ್ತಿದ 'ಇಂಗ್ಲಿಷ್ ಶಿಕ್ಷಣ = ಆಧುನಿಕತೆ = ಪ್ರಗತಿ' ಎಂಬಂತಹ ವೈಚಾರಿಕ ಯಾಜಮಾನ್ಯವನ್ನೂ ಒಪ್ಪಿಕೊಂಡಿದ್ದು ಇಂದು ಇತಿಹಾಸ. ಮೇಲ್ನೋಟಕ್ಕೆ ಡಾ|| ಶಿವರಾಮ ಕಾರಂತರೂ ಈ ಸಾಮ್ರಾಜ್ಯಶಾಹಿ ವಾದವನ್ನು ಒಪ್ಪಿಕೊಂಡಂತೆ ಭಾಸವಾಗುತ್ತದೆ. ಅವರು ಕೃತಿಗಳಲ್ಲಿ ಮತ್ತು ಬದುಕಿನಲ್ಲಿ ಪರಂಪರಾಗತ ಭಾರತೀಯ ಧಾರ್ಮಿಕ-ಸಾಮಾಜಿಕ ನಂಬಿಕೆಗಳನ್ನು ಹಾಗೂ ಆಚರಣೆಗಳನ್ನು ಉಗ್ರವಾಗಿ ವಿರೋಧಿಸಿದರು; ಜಾತಿ ನಿರ್ಮೂಲನ, ಸ್ತ್ರೀ ಶಿಕ್ಷಣ ಮತ್ತು ವಿಧವಾ ವಿವಾಹ, ವೈಜ್ಞಾನಿಕ ದೃಷ್ಟಿಕೋನ ಇತ್ಯಾದಿಗಳನ್ನು ಬಲವಾಗಿ ಪ್ರತಿಪಾದಿಸಿದರು. (ಅಂದಿನ ಕಾಲದಲ್ಲಿಯೇ ಅಂತರ್ಜಾತೀಯ ವಿವಾಹವಾಗಿ, ಸಮಾಜದ ಟೀಕೆಗೆ ಗುರಿಯಾಗಿ, ಕೊನೆಗೆ ಈ ಕಾರಣಕ್ಕಾಗಿ ಕೋರ್ಟಿನ ಮೆಟ್ಟಿಲನ್ನೂ ಹತ್ತಿದರು). ಮಠಾಧಿಪತಿಗಳು ಮತ್ತು ಧರ್ಮಗುರುಗಳನ್ನು ತಮ್ಮ ಅನೇಕ ಕಾದಂಬರಿಗಳಲ್ಲಿ/ಲೇಖನಗಳಲ್ಲಿ ತೀಕ್ಷ್ಣವಾಗಿ ವಿಡಂಬಿಸಿದರು. ಯಾವುದೇ ಕಾರಣಕ್ಕೂ 'ಸೃಷ್ಟಿಕರ್ತ-ಪರಮಾತ್ಮ'ನ ಅಸ್ತಿತ್ವವನ್ನು ಒಪ್ಪದೆ, ಬದುಕಿನುದ್ದಕ್ಕೂ ನಿರೀಶ್ವರವಾದಿಯಾಗಿಯೇ ಉಳಿದರು. ಈ ಎಲ್ಲಾ ಕಾರಣಗಳಿಂದಾಗಿ ಕಾರಂತರು 'ಆಧುನಿಕ'ರಂತೆ, ಪಾಶ್ಚಾತ್ಯ ಪ್ರಣೀತ ಆಧುನಿಕತೆಯ ವಕ್ತಾರರಂತೆ ಕಾಣುತ್ತಾರೆ ಮೇಲ್ನೋಟಕ್ಕೆ.

ಆದರೆ, ಕಾರಂತರ ಧಾರ್ಮಿಕ-ನೈತಿಕ ಬಂಡುಕೋರತನವನ್ನು ಮತ್ತೂ ಒಂದು ನೆಲೆಯಲ್ಲಿ ಅರ್ಥೈಸಬಹುದು. ಆರ್ಷೇಯ ಕಾಲದಿಂದಲೂ ಭಾರತದಲ್ಲಿ ದ್ವೈತ, ಅದ್ವೈತ ಇತ್ಯಾದಿ ಈಶ್ವರವಾದಿ ದರ್ಶನಗಳಿರುವಂತೆಯೇ ನಿರೀಶ್ವರವಾದಿ ಭೌತವಾದಗಳೂ ಪ್ರಚಲಿತವಾಗಿವೆ. ಇಂತಹ ಭೌತವಾದಗಳನ್ನು 'ಲೋಕಾಯತ ದರ್ಶನ' ಎಂದು ದೇವೀಪ್ರಸಾದ ಚಟ್ಟೋಪಾಧ್ಯಾಯರು ಗುರುತಿಸುತ್ತಾರೆ. ಅವರು ವಾದಿಸುವಂತೆ, ಲೋಕಾಯತ ದರ್ಶನಗಳ ಕೇಂದ್ರದಲ್ಲಿರುವುದು 'ಸ್ವಭಾವವಾದ'. ಪಂಚಭೂತಗಳಲ್ಲಿ ನಾಲ್ಕನ್ನು (ಪೃಥ್ವೀ, ಆಫ್, ವಾಯು ಮತ್ತು ತೇಜಸ್) ಮಾತ್ರ ಒಪ್ಪುವ ಸ್ವಭಾವವಾದದ ಮುಖ್ಯಾಂಶಗಳೆಂದರೆ, ಜಗತ್ತು ತನ್ನ ಸ್ವಭಾವದಿಂದಲೇ ಹೀಗಿದೆ : ಈ ಜಗತ್ತಿನ ಹೊರಗಿರುವ ಯಾವ ವಸ್ತುವೂ, ಶಕ್ತಿಯೂ ಇದಕ್ಕೆ

ಕಾರಣವಲ್ಲ; ಆದ್ದರಿಂದ ಪುನರ್ಜನ್ಮವನ್ನಾಗಲೀ, ಕರ್ಮಸಿದ್ಧಾಂತವನ್ನಾಗಲೀ ಇಂದ್ರೀಯಾನುಭವಕ್ಕೆ ಸಿಲುಕದ ಹಾಗೂ ಪಾರಮಾರ್ಥಿಕ ಜಗತ್ತಿಗೆ ಸಂಬಂಧಿಸಿದ ಯಾವುದೇ ನಂಬಿಕೆಯನ್ನಾಗಲೀ ತೀರ್ಮಾನಗಳನ್ನಾಗಲೀ ಒಪ್ಪಲು ಸಾಧ್ಯವಿಲ್ಲ.

ಇಂತಹ ಲೋಕಾಯತ ದೃಷ್ಟಿಕೋನ ಕಾರಂತರ ವೈಚಾರಿಕತೆಯ ಭಿನ್ನ ಮಜಲುಗಳನ್ನು ಸಮರ್ಥವಾಗಿ ಸ್ಪಷ್ಟಪಡಿಸುತ್ತದೆ. ಮುಖ್ಯವಾಗಿ, ತಮ್ಮ ಸಾಹಿತ್ಯ ಸೃಷ್ಟಿಯಲ್ಲಿ ಕಾರಂತರು 'ಅನುಭವ'ಕ್ಕೆ ಕೊಡುವ ಮಹತ್ವ. 'ನಮ್ಮ ಅಳತೆಯನ್ನು ಮೀರಲಾಗದ ದೇವರು' ಎಂದು ಅವರು ದೇವರ ಅಸ್ತಿತ್ವವನ್ನು ವ್ಯಾಖ್ಯಾನಿಸುವ ರೀತಿ, ಕರ್ಮ-ಪರಲೋಕ ಇತ್ಯಾದಿಗಳನ್ನು ನಂಬುವ ಮತ್ತು ಬೋಧಿಸುವ ಯತಿ-ಸನ್ಯಾಸಿಗಳ ವಿಡಂಬನೆ ಇವೆಲ್ಲವನ್ನೂ ನಾವು ಲೋಕಾಯತ ಚಿಂತನೆಯ ಹಿನ್ನೆಲೆಯಲ್ಲಿ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಹಾಗೆಯೇ. ಇಂತಹ ವೈಚಾರಿಕತೆ ಕಾರಂತರಿಗೆ ಪ್ರಾಕೃತಿಕ ವಿಜ್ಞಾನಗಳಲ್ಲಿ ಇದ್ದ ಆಸಕ್ತಿಯನ್ನೂ ಸ್ಪಷ್ಟಪಡಿಸುತ್ತದೆ: 'ಈ ಜಗತ್ತು, ಈ ಬದುಕು ನಿಜ; ಇದು ಮಾಯೆಯಲ್ಲ' ಎಂದು ನಂಬಿದಾಗ ಈ ಜಗತ್ತಿನ ಪ್ರಾಣಿ-ಪಕ್ಷಿಗಳಾದಿಯಾಗಿ ಸಮಸ್ತವೂ ಮಹತ್ವ ಪಡೆಯುತ್ತವೆ, ವಿಸ್ಮಯ ಉಂಟುಮಾಡುತ್ತವೆ. ಆದ್ದರಿಂದ ಕಾರಂತರ ವೈಚಾರಿಕತೆಯನ್ನು ರೂಪಿಸುವಲ್ಲಿ ಭಾರತೀಯ ಲೋಕಾಯತನ ದರ್ಶನದ ಪಾತ್ರವೆಷ್ಟು, ಪಾಶ್ಚಾತ್ಯ ಆಧುನಿಕತೆಯ ಪಾತ್ರವೆಷ್ಟು ಎಂದು ನಿರ್ಧರಿಸುವುದು ಕಷ್ಟ.

ಹುಟ್ಟಾ ಬಂಡುಕೋರ.....

ಪ್ರಭಾವಗಳು, ಕಾರಣಗಳು ಏನೇ ಇರಲಿ; ಕಾರಂತರು ಹುಟ್ಟಾ ಬಂಡುಕೋರರಾಗಿ ವ್ಯವಸ್ಥೆಯ ಎಲ್ಲಾ ಮುಖಗಳನ್ನೂ ವಿರೋಧಿಸಿದ್ದು ಮಾತ್ರ ನಿಜ. ಬಂಡುಕೋರತನ ಮತ್ತು ಅದರ ಉಪಪ್ರಮೇಯವಾದ ಪ್ರಯೋಗಶೀಲತೆ ಕಾರಂತರ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿಯೂ ಕಂಡುಬರುತ್ತದೆ. "ಕಸುಬುಗಾರಿಕೆ ಕಲೆಯಲ್ಲ" ಎಂದು ದೃಢವಾಗಿ ನಂಬಿದ್ದ ಕಾರಂತರು ಯಕ್ಷಗಾನ ಕ್ಷೇತ್ರದಲ್ಲಿ ಆಳವಾದ ಸಂಶೋಧನೆಯನ್ನುಕೈಗೊಂಡು, ಆ ಕಲಾಪ್ರಭೇದದಲ್ಲಿ ವ್ಯಾಪಕವಾಗಿ ಬೆಳೆದಿದ್ದ ಮಾತುಗಾರಿಕೆಯನ್ನು ತೊರೆದು, ಅದರ ನರ್ತನ, ಅಭಿನಯ ಮತ್ತು ಸಂಗೀತವನ್ನು ಪರಿಷ್ಕರಿಸಿ, ಯಕ್ಷಗಾನವನ್ನು ಪಾಶ್ಚಾತ್ಯ ಬ್ಯಾಲೆಯ ಮಾದರಿಯಲ್ಲಿ 'ಯಕ್ಷರಂಗ'ವನ್ನಾಗಿ ಪರಿವರ್ತಿಸಿದರು.

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಆಸಕ್ತಿ ತಳೆದಿದ್ದ ಅವರು ಪ್ರಾಥಮಿಕ ಶಿಕ್ಷಣ ಮಕ್ಕಳ ಮಾತೃಭಾಷೆಯಲ್ಲಿಯೇ ಆಗಬೇಕು. ಮತ್ತು ಶಿಕ್ಷಣ ಮಕ್ಕಳಿಗೆ 'ಆಟ'ವಾಗಬೇಕೇ ಹೊರತು, 'ಹೊರೆ'ಯಾಗಬಾರದು ಎಂದು ನಂಬಿದ್ದರು. ಪರಿಣಾಮತಃ 'ಬಾಲವನ' ಎಂಬ ಕ್ರಾಂತಿಕಾರಕ ಶಿಕ್ಷಣ ಕೇಂದ್ರವನ್ನು ಪುತ್ತೂರಿನಲ್ಲಿ (೧೯೩೪ರಲ್ಲಿ) ಸ್ಥಾಪಿಸಿದರು. ಅಲ್ಲಿ ಪ್ರತಿಯೊಂದು ಶಬ್ದದ ಅರ್ಥವನ್ನು ಸ್ಪಷ್ಟಪಡಿಸುವ ಚಿತ್ರಗಳು, ಮೃಗಾಲಯ ಮತ್ತು ಒಂದು ಚಿಕ್ಕ ರೈಲುಗಾಡಿ ಇವೆಲ್ಲವೂ ಇದ್ದುವು. (ಮಣ್ಣಿನ ಪಾಠ ಮಾಡುವಾಗ ಮಕ್ಕಳೇ ಹುಡುಕಿ ತಂದ ೧೯ ಬಗೆಯ ಮಣ್ಣುಗಳನ್ನು ಮಕ್ಕಳು ಮುಟ್ಟಿ, ಆಟವಾಡುತ್ತಾ ಕಲಿಯುತ್ತಿದ್ದರು) ಮತ್ತೆ, ಮಕ್ಕಳ ಸೃಜನಶೀಲತೆಯನ್ನು ಬೆಳೆಸುವ ಸಲುವಾಗಿ ಆರು ಭಾಗಗಳ ಓದುವ ಆಟ ಎಂಬ ಪಠ್ಯಮಾಲಿಕೆಯನ್ನು ಮತ್ತು ಮಕ್ಕಳ ಕಥೆಗಳು, ಬಾಲ ಪ್ರಪಂಚ, ವಿಜ್ಞಾನ ಪ್ರಪಂಚ ಇತ್ಯಾದಿ ಕೃತಿಗಳನ್ನೂ ರಚಿಸಿದರು. 'ಸೃಜನಶೀಲ-ಸೃಜನೇತರ' ಎಂಬಂತಹ ಕೃತಕ ವಿಭಜನೆ ಕಾರಂತರಿಗಿರಲಿಲ್ಲ.

ಕಾರಂತರ ಸಂಸ್ಕೃತಿ-ಚಿಂತನೆಯೂ ಅಷ್ಟೇ ಮಹತ್ವಪೂರ್ಣ ಮತ್ತು ಇಂದಿನ ಪರಿಸ್ಥಿತಿಯಲ್ಲಿ ಅತಿ ಪ್ರಸ್ತುತ. 'ಸಂಸ್ಕೃತಿ' ಎಂಬ ಪರಿಕಲ್ಪನೆಯನ್ನು ಕಾರಂತರು ವ್ಯಾಪಕ ನೆಲೆಯಲ್ಲಿ, ಅದರ

ಆಧ್ಯಾತ್ಮಿಕ-ಕಲಾತ್ಮಕ-ಸಾಮಾಜಿಕ ಆಯಾಮಗಳನ್ನು ಒಳಗೊಂಡಂತೆ ವ್ಯಾಖ್ಯಾನಿಸುತ್ತಾರೆ. ಇನ್ನೂ ಮುಖ್ಯವಾಗಿ, ಕಾರಂತರು ಭಾರತೀಯ ಸಂಸ್ಕೃತಿಯ ಬಹುಮುಖೀ ಸ್ವರೂಪಕ್ಕೆ ಯಾವಾಗಲೂ ಒತ್ತು ಕೊಡುತ್ತಾರೆ. ತಮ್ಮ ಒಂದು ಲೇಖನದಲ್ಲಿ (೧೯೭೮) ಕಾರಂತರು ಹೀಗೆ ಭಾರತೀಯ ಸಂಸ್ಕೃತಿಯನ್ನು ವಿಶ್ಲೇಷಿಸುತ್ತಾರೆ: "ಇಂದಿನ ಭಾರತದ ಸಂಸ್ಕೃತಿ-ನಿಜವಾಗಿ 'ಸಂಸ್ಕೃತಿಗಳು' ಎಂಬಷ್ಟು ವೈವಿಧ್ಯ ಉಳ್ಳದ್ದು. ಇದರ ಬೇರು, ಬೆಳವಣಿಗೆ ಅನಾದಿ ಕಾಲದಿಂದ ನಡೆದುಬಂದುದು; ಅನೇಕ ನಾಡುಗಳ ಜನರ ಸಂಪರ್ಕದಿಂದ ವಿಕಸನಗೊಂಡುದು. ಈ ಬೆಳವಣಿಗೆಯನ್ನು ಪರಿಶೀಲಿಸಿದವನಿಗೆ ಇದರಲ್ಲಿರುವ ನೂರಾರು ಅಂಶಗಳಲ್ಲಿ-ತಾನಾಗಿ ಬೆಳೆದುದಾವುದು, ವಿಕಾಸಗೊಂಡುದಾವುದು, ಒತ್ತಾಯದಿಂದ ಹೊರಿಸಲ್ಪಟ್ಟುದಾವುದು, ಮೋಹದಿಂದ ಕದ್ದುಕೊಂಡುದಾವುದು...." ಎಂದು ನಿರ್ಧರಿಸುವುದು ಅಸಾಧ್ಯ.

ಅರ್ಥಾತ್, ಕಾರಂತರ ವೈಚಾರಿಕತೆಯ ಕೇಂದ್ರ 'ಸಾವಯವ ಸಮಗ್ರ ಗ್ರಹಿಕೆ'. ಯಾವುದನ್ನೂ ಪಾರ್ಶ್ವಿಕವಾಗಿ, ಬಿಡಿಯಾಗಿ ನೋಡುವುದನ್ನು ಕಾರಂತರು ಒಪ್ಪುತ್ತಿರಲಿಲ್ಲ. ಈ ನಿಲುವೇ ಅವರು ತಮ್ಮ ಬದುಕಿನ ಕೊನೆಯ ದಶಕಗಳಲ್ಲಿ ನಡೆಸಿದ್ದ ಪರಿಸರ ಹೋರಾಟಕ್ಕೆ ಕಾರಣ. ಈ ಜಗತ್ತಿನಲ್ಲಿ ಮಾನವನಿಗೇ ಅಲ್ಲದೆ ಸಕಲ ಸಸ್ಯ-ಪಶು-ಪ್ರಾಣಿ-ಕ್ರಿಮಿ-ಕೀಟಗಳಿಗೂ ಬದುಕುವ ಹಕ್ಕಿದೆ ಎಂದು ಗಾಢವಾಗಿ ನಂಬಿದ್ದ ಕಾರಂತರು 'ಮಾನವ-ಕೇಂದ್ರಿತ ವಿಶ್ವದೃಷ್ಟಿ'ಯನ್ನು ತಿರಸ್ಕರಿಸಿ, ಕೈಗಾ ಅಣುಸ್ಥಾವರ, ಕೋಜೆಂಟ್ರಿಕ್ಸ್ ಯೋಜನೆ, ಇತ್ಯಾದಿ ಪರಿಸರ ವಿರೋಧಿ ಬೃಹತ್ ಉದ್ಯಮಗಳ ವಿರುದ್ಧ ಹೋರಾಟ ನಡೆಸಿದರು; ತಮ್ಮ ಸತತ ಪ್ರವಾಸಗಳು, ಸಾರ್ವಜನಿಕ ಸಭೆಗಳು ಮತ್ತು ಭಾಷಣಗಳು, ಲೇಖನಗಳು ಇವುಗಳ ಮೂಲಕ ಸೃಜನಾತ್ಮಕ ಪರಿಸರ ಪ್ರಜ್ಞೆಯನ್ನು ಬೆಳೆಸಲು ಶ್ರಮಿಸಿದರು.

ಕಾರಂತರು ಕಾದಂಬರಿ ಕ್ಷೇತ್ರಕ್ಕೆ ಕಾಲಿರಿಸುವ ಹೊತ್ತಿಗೆ 'ಸುಧಾರಣಾವಾದಿ ಕಾದಂಬರಿ' ಕನ್ನಡದಲ್ಲಿ ಬೇರೂರಿತ್ತು. ಗುಲ್ವಾಡಿ ವೆಂಕಟರಾವ್, ಬೋಳಾರ ಬಾಬೂರಾವ್, ಮಿರ್ಜಿ ಅಣ್ಣಾರಾವ್ ಇತ್ಯಾದಿ ಲೇಖಕರು ಪಶ್ಚಿಮದ 'ನಾವೆಲ್' ಪ್ರಭೇದಕ್ಕೆ ಭಾರತೀಯ ಕಥನ ಪರಂಪರೆ, ಸ್ಥಳೀಯ ಯಕ್ಷಗಾನ, ಇತ್ಯಾದಿಗಳ ಅಂಶಗಳನ್ನು ಕಸಿಮಾಡಿ, ಪಶ್ಚಿಮದ 'ವಾಸ್ತವವಾದಿ ಕಾದಂಬರಿ'ಯನ್ನು ಕನ್ನಡದ 'ಸುಧಾರಣಾವಾದಿ ಕಾದಂಬರಿ'ಯಾಗಿ ರೂಪಾಂತರಿಸಿದ್ದರು. ಇಂತಹ ಕಾದಂಬರಿಗಳ (ಮತ್ತು ಪಶ್ಚಿಮದ ವಾಸ್ತವವಾದಿ ಕಾದಂಬರಿಗಳಲ್ಲಿ ಕಂಡುಬರದ) ಒಂದು ಪ್ರಮುಖ ಲಕ್ಷಣವೆಂದರೆ ಕಾದಂಬರಿಯ ಜಗತ್ತಿನಲ್ಲಿ 'ಕರ್ತವಿನ' (ಏಜೆಂಟ್) ಅಸ್ತಿತ್ವ. ಎಂದರೆ, ಸಾಂಪ್ರದಾಯಿಕ ಕುಟುಂಬದಲ್ಲಿ ಜನಿಸಿದ ವ್ಯಕ್ತಿಯೊಬ್ಬನು ಉಚ್ಚ ಇಂಗ್ಲಿಷ್ ಶಿಕ್ಷಣವನ್ನು ಪಡೆದು, ತನ್ನ ಪರಿಸರಕ್ಕೆ ಮರಳಿ, ಅದರ ಸುಧಾರಣೆಗೆ ಪ್ರಯತ್ನಿಸುವುದು; 'ಒಳಗಿನವ ಹೊರಗಿನವನಾಗಿ ಮತ್ತೆ ಒಳಕ್ಕೆ ಪ್ರವೇಶಿಸುವುದು' (ಈ ಮೂಲಾಶಯ ೨೦ನೆಯ ಶತಮಾನದ ಪ್ರಮುಖ ಕನ್ನಡ ಕಾದಂಬರಿಗಳಲ್ಲೆಲ್ಲಾ ಮತ್ತೆ ಮತ್ತೆ ಮರುಕಳಿಸುತ್ತದೆ. ಕಾರಂತರು ಈ ಬಗೆಯ ಕಾದಂಬರಿಗಳಿಂದ ಪ್ರಾರಂಭಿಸಿ, ಅನಂತರ- ಕಾದಂಬರಿ ಪ್ರಭೇದದ ಆಯಾಮಗಳನ್ನು ಅಪಾರವಾಗಿ ವಿಸ್ತರಿಸಿ, ಅದರ ಸಾಧ್ಯತೆಗಳನ್ನೆಲ್ಲಾ ಇನ್ನಿಲ್ಲದಂತೆ ಶೋಧಿಸಿದರು.

ಕಾರಂತರ ೪೫ ಕಾದಂಬರಿಗಳನ್ನು ಹೀಗೆ, ಸ್ಥೂಲವಾಗಿ ವರ್ಗೀಕರಿಸಬಹುದು :

(1) ಪ್ರಾರಂಭಿಕ ಪತ್ತೇದಾರಿ ಕಾದಂಬರಿಗಳು (2) ಸುಧಾರಣಾವಾದಿ ಕಾದಂಬರಿಗಳು (ಚೋಮನ ದುಡಿ, ಸರಸಮ್ಮನ ಸಮಾಧಿ ಇತ್ಯಾದಿ) (3) ತಲೆಮಾರುಗಳ ಕಥನಗಳು (sagas - ಮರಳಿ ಮಣ್ಣಿಗೆ, ಮೈಮನಗಳ ಸುಳಿಯಲ್ಲಿ, ಧರ್ಮರಾಯನ ಸಂಸಾರ ಇತ್ಯಾದಿ) (4) ರಾಜಕೀಯ ಕಾದಂಬರಿಗಳು (ನಾವು ಕಟ್ಟಿದ ಸ್ವರ್ಗ, ಗೊಂಡಾರಣ್ಯ ಇತ್ಯಾದಿ) (5) ಕಲಾವಿದ

ಕಾದಂಬರಿಗಳು (ಮೊಗ ಪಡೆದ ಮನ, ಒಂಟಿದನಿ, ಇಳೆಯೆಂಬ, ಅಳಿದ ಮೇಲೆ, ಮೂಕಜ್ಜಿಯ ಕನಸುಗಳು, ಇತ್ಯಾದಿ).

ಆಕ್ಷೇಪ : 'ದುಡುಕಿನ ತೀರ್ಮಾನ'

ಇನ್ನೂ ಮುಂದುವರೆಯುವ ಮೊದಲು, ಕನ್ನಡದ ಅನೇಕ ಪ್ರಮುಖ ವಿಮರ್ಶಕರು ಕಾರಂತರ ಕಾದಂಬರಿಗಳ ಆಕೃತಿಯ ಬಗ್ಗೆ ಮಾಡಿರುವ ಒಂದು ಪ್ರಮುಖ ಆಕ್ಷೇಪವನ್ನು ಪರಿಗಣಿಸಬೇಕು. ಅದೆಂದರೆ : "ಕಾರಂತರು ಯಾವಾಗಲೂ ಕಾದಂಬರೀಲಿ 'ನಾವೆಲ್ ಫಾರಂ ಅನ್ನ' ಸೀರಿಯಸ್ಸಾಗಿ ತಗೊಳ್ಳಿಲ್ಲ" (ಲಂಕೇಶ್); "ಕಾರಂತರ ಕಲೆಯ ಪ್ರಮುಖ ನ್ಯೂನತೆ ಎಂದರೆ ತಂತ್ರದ ಬಗ್ಗೆ ಅವರ ನಿರ್ಲಕ್ಷ್ಯ" (ಎಚ್.ವೈ. ಶಾರದಾಪ್ರಸಾದ್) ಇತ್ಯಾದಿ.

ಕಥನಶಾಸ್ತ್ರದ ನೆಲೆಯಲ್ಲಿ ಕಾರಂತರ ಕಾದಂಬರಿಗಳನ್ನು ಆಳವಾಗಿ ಅಧ್ಯಯನ ಮಾಡಿದರೆ ಇವೆಲ್ಲವೂ ದುಡುಕಿನ ತೀರ್ಮಾನಗಳೆಂದು ನಮಗೆ ಅರಿವಾಗುತ್ತದೆ. ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಕಾರಂತರ ಕಾದಂಬರಿಗಳ ಆಕೃತಿಗಳನ್ನು ಆಯಾಯ ಕೃತಿಗಳ ಆಶಯಗಳೇ ನಿರ್ಧರಿಸುತ್ತವೆ ಎಂಬುದು.

ಉದಾಹರಣೆಗೆ ಮರಳಿ ಮಣ್ಣಿಗೆ, ಅದೇ ಊರು ಅದೇ ಮರ, ಇವೇ ಮುಂತಾದ ಕೃತಿಗಳಲ್ಲಿ ಲೇಖಕರ ಆಶಯ ಸಂಕ್ರಮಣ ಕಾಲದ ಭಾರತೀಯ ಸಮಾಜದ ಆತಂಕ-ತಲ್ಲಣಗಳನ್ನು, ಮೌಲ್ಯ-ಪಲ್ಲಟಗಳನ್ನು ಗುರುತಿಸುವುದು; ಆದ್ದರಿಂದ, ಲೇಖಕರು ಇಲ್ಲಿ ಸಮಾಜಶಾಸ್ತ್ರಜ್ಞರಂತೆ ತಮ್ಮ ದೂರವನ್ನು ಕಾಯ್ದುಕೊಂಡು, 'ಸರ್ವಜ್ಞ-ವಿಶ್ವಸನೀಯ ನಿರೂಪಕ'ನ ಮೂಲಕ ಕಾಲಕ್ರಮಕ್ಕನುಸಾರವಾಗಿ ಕಥನವನ್ನು ನಿರ್ವಹಿಸುತ್ತಾರೆ.

ಆದರೆ ಬೆಟ್ಟದ ಜೀವ ಕಾದಂಬರಿಯ ಆಶಯ 'ನಿಸರ್ಗ-ಮಾನವ ಹೋರಾಟ'ವನ್ನು ವಸ್ತುನಿಷ್ಠವಾಗಿ ಗ್ರಹಿಸುವುದು; ಪರಿಣಾಮತಃ ಇದರ ನಿರೂಪಕ ಶಿವರಾಮಯ್ಯ ಒಬ್ಬ ನಗರಜೀವಿ. ಅವನಿಗೆ ಗೋಪಾಲಯ್ಯನ ಅದಮ್ಯ ಕೆಚ್ಚು-ಸಾಹಸಗಳ ಬಗ್ಗೆ ಮೆಚ್ಚುಗೆಯಿದೆ; ಆದರೆ ಅವನು ಇನ್ನೊಬ್ಬ ಗೋಪಾಲಯ್ಯ ನಾಗಲಾರ, ಮತ್ತು ಆ ಪರಿಸರದಿಂದ ಓಡಿಹೋದ ಶಂಭುವನ್ನು ಅವನು ನೀಚನಂತೆ ಕಾಣಲಾರ. ಇಂತಹ ನಿರೂಪಕನಿಗೆ ವಿರುದ್ಧವಾಗಿ ಅಳಿದ ಮೇಲೆ ಕೃತಿಯ ನಿರೂಪಕ (ಕಾರಂತ) ಕೃತಿಯ ಮುಖ್ಯ ಪಾತ್ರವಾದ ಯಶವಂತನೊಡನೆ ತಾದಾತ್ಮ್ಯ ಹೊಂದಿ, ಆ ಕಾರಣದಿಂದ 'ಅವಿಶ್ವಸನೀಯ ನಿರೂಪಕ'ನಾಗುತ್ತಾನೆ. ಇಲ್ಲದಿದ್ದರೆ, ರಾಗದ್ವೇಷಗಳಿಂದ ಕೂಡಿದ ಯಶವಂತ ಒಬ್ಬ ಖಳನಾಯಕನಾಗುವ ಸಾಧ್ಯತೆಯಿತ್ತು; ಆದ್ದರಿಂದ ಈ ಕೃತಿಯಲ್ಲಿ ಕಾರಂತರು 'ಅನುಕಂಪಪೂರಿತ ನಿರೂಪಕ'ನನ್ನು ಉಪಯೋಗಿಸುತ್ತಾರೆ. (ಇಂತಹುದೇ ನಿರೂಪಣಾ ತಂತ್ರವನ್ನು ನಾವು ಕಾನ್ರಾಡ್‌ನ 'ಹಾರ್ಟ್.ಆಫ್ ಡಾರ್ಕ್‌ನೆಸ್' ಕಾದಂಬರಿಯಲ್ಲಿ ಕಾಣುತ್ತೇವೆ.)

ಹೀಗೆಯೇ, ಧರ್ಮರಾಯನ ಸಂಸಾರದಲ್ಲಿ ಬರುವ ಅವಿಶ್ವಾಸನೀಯ ಬಹು ನಿರೂಪಕರು ಪುರುಷಕೇಂದ್ರಿತ ಊಳಿಗಮಾನ್ಯ ವ್ಯವಸ್ಥೆಯ ಆಳದಲ್ಲಿರುವ ಕ್ರೌರ್ಯವನ್ನು, ಹಿಂಸಾರತಿಯನ್ನು ಓದುಗರು ಬೆಚ್ಚುವಂತೆ ದಾಖಲಿಸುತ್ತಾರೆ; ಮೈಮನಗಳ ಸುಳಿಯಲ್ಲಿ ಬರುವ ನಿರೂಪಣಾ ವಿಧಾನಗಳು (ಪತ್ರಗಳು, ದಿನಚರಿ, ಪ್ರಥಮ ಪುರುಷ ನಿರೂಪಣೆ, ಇತ್ಯಾದಿ) ಸತ್ಯವೆನ್ನುವುದು ಸಂಪೂರ್ಣವಾಗಿ ಸಾಪೇಕ್ಷವೇ? ಎಂಬ ಪ್ರಶ್ನೆಯನ್ನೆತ್ತುತ್ತವೆ; ಕೃತಿ ಹೀಗೆ ಮುಗಿಯುತ್ತದೆ. "ಅಜ್ಜಿ ಸುಳ್ಳು ಬರೆಯುವವಳಲ್ಲ", "ಅವಳು ಬರೆದ ನಿಜವನ್ನು ಗ್ರಹಿಸುವುದೂ ಕಷ್ಟ"- ಹೀಗೆ ಈ ಚರ್ಚೆಯನ್ನು ದೀರ್ಘವಾಗಿ ಮುಂದುವರೆಸಬಹುದು. ಸ್ವಲ್ಪದರಲ್ಲಿಯೇ ಹೇಳಬೇಕಾದರೆ, ಕಾರಂತರ 'ಕಾದಂಬರಿ-ಪ್ರಜ್ಞೆ' ಅತ್ಯಂತ ಶ್ರೀಮಂತವಾದುದು ಮತ್ತು ಸಂಕೀರ್ಣವಾದುದು.

ಕಾರಂತರ ಕಾದಂಬರಿಗಳಲ್ಲಿ ಅಭಿವ್ಯಕ್ತಿಗೊಳ್ಳುವ ಆಶಯಗಳ ಬಗ್ಗೆ ಒಟ್ಟಾರೆಯಾಗಿ

ಹೇಳಬೇಕಾದರೆ, ತಮ್ಮ ಕೃತಿಗಳಲ್ಲಿ ಕಾರಂತರು ಎಲ್ಲಾ ಧಾರ್ಮಿಕ-ಸಾಮಾಜಿಕ-ನೈತಿಕ ವ್ಯವಸ್ಥೆಗಳನ್ನು ಅವಕೇಂದ್ರೀಕರಣಗೊಳಿಸಿ, ಅವುಗಳ ಬಗ್ಗೆ ನಮಗಿರುವ ರೂಢಿಗತ ನಂಬಿಕೆಗಳನ್ನು /ಗ್ರಹೀತಗಳನ್ನು ಪ್ರಶ್ನಿಸುತ್ತಾರೆ; ಮತ್ತು ಪರಂಪರೆ-ಆಧುನಿಕತೆ, ಉಚ್ಚವರ್ಣೀಯ-ದಲಿತ, ಪುರುಷ-ಸ್ತ್ರೀ, ·ಗರತಿ-ವೇಶ್ಯ ಇವೇ ಮುಂತಾದ ದ್ವಿಮಾನ ವಿರೋಧಗಳನ್ನು ಒಡೆದು, ಈ ದ್ವಂದ್ವಗಳ ಮೊದಲ ಘಟಕಕ್ಕೆ ನಾವು ಇಲ್ಲಿಯವರೆಗೆ ನೀಡಿರುವ/ನೀಡುವ ಆದ್ಯತೆಯನ್ನು ಅಲ್ಲಗಳೆಯುತ್ತಾರೆ. ಈ ನೆಲೆಯಲ್ಲಿ ಕಾರಂತರ ಕೆಲವು ಕಾದಂಬರಿಗಳನ್ನು ಪರೀಕ್ಷಿಸೋಣ.

ದಲಿತ ಸಮಸ್ಯೆಯ ಗಂಭೀರ ವಿಶ್ಲೇಷಣೆ

ಸುಧಾರಣಾವಾದಿ ಕಾದಂಬರಿಗಳಲ್ಲಿ ಅತಿ ಮುಖ್ಯವಾದುದೆಂದರೆ ಚೋಮನ ದುಡಿ. ಇಂಗ್ಲಿಷ್‌ನಲ್ಲಿ ಪ್ರಸಿದ್ಧವಾಗಿರುವ ಮುಲ್ಕ್‌ರಾಜ್ ಆನಂದ್ ಅವರ ಅನ್‌ಟಚಬಲ್ ಕೃತಿಗಿಂತ ಮೊದಲು (೧೯೩೧ರಲ್ಲಿ) ರಚಿಸಲ್ಪಟ್ಟ ಈ ಕೃತಿ ಪ್ರಾಯಃ ದಲಿತ ಸಮಸ್ಯೆಯನ್ನು ಗಂಭೀರವಾಗಿ ವಿಶ್ಲೇಷಿಸುವ ಭಾರತದ ಮೊದಲ ಕಾದಂಬರಿ. ಕತ್ತಲೆಯಿಂದ ಪ್ರಾರಂಭವಾಗಿ ಕತ್ತಲೆಯಲ್ಲಿಯೇ ಮುಗಿಯುವ ಈ ಕಾದಂಬರಿ. ವರ್ಣವ್ಯವಸ್ಥೆಯ ಉಚ್ಚ-ನೀಚ ಎಂಬ ವರ್ಗೀಕರಣವನ್ನು ಒಡೆದು, ಜಾತಿಪದ್ಧತಿಯಿಂದ ಆಗುತ್ತಿದ್ದ/ಆಗುತ್ತಿರುವ ದಲಿತರ ಶೋಷಣೆ, ಅವರ ನೋವು-ಸಂಕಟ, ಹತಾಶೆ ಮತ್ತು ಅವುಗಳಿಂದ ಪಾರಾಗುವ ಸಾಧ್ಯತೆಗಳು ಇವುಗಳನ್ನು ವಿಶ್ಲೇಷಿಸುತ್ತದೆ. ತನ್ನದೇ ಆದ ಒಂದು ಚೂರು ನೆಲಕ್ಕಾಗಿ ಕನಸು ಕಾಣುವ, ನರಳುವ ಚೋಮನ ಕಥೆಯನ್ನು ಯಾವ ಸರಳೀಕೃತ ಪರಿಹಾರವನ್ನೂ ಸೂಚಿಸದೆ ಕಾರಂತರು ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ದಲಿತರ ಅವಮಾನ-ಶೋಷಣೆಗಳಿಗೆ ಆರ್ಥಿಕ ಸ್ವಾತಂತ್ರ್ಯವೊಂದೇ ದಾರಿ ಎಂಬ ಪ್ರಬುದ್ಧ ಚಿಂತನೆ ಇಲ್ಲಿ ಕಂಡುಬರುತ್ತದೆ. (ಈ ಕಾದಂಬರಿ ತಮಗೆ ಭೂಸುಧಾರಣೆಯಲ್ಲಿ ತೊಡಗಿಕೊಳ್ಳುವುದಕ್ಕೆ ಪ್ರೇರಣೆ ನೀಡಿತೆಂದು ದೇವರಾಜು ಅರಸು ಅವರು ಒಂದು ಸಂದರ್ಭದಲ್ಲಿ ಹೇಳಿದ್ದರೆಂದು ನನ್ನ ನೆನಪು.)

ಮೂರು ತಲೆಮಾರುಗಳ ಆಗುಹೋಗುಗಳನ್ನು ಮತ್ತು ಮೌಲ್ಯ-ಪಲ್ಲಟವನ್ನು ದಾಖಲಿಸುವ **ಮರಳಿ ಮಣ್ಣಿಗೆ**ಯಲ್ಲಿ ಪಾರಂಪರಿಕ ಕೃಷಿ-ಆಧಾರಿತ ಸಮಾಜವೊಂದು ವಸಾಹತುಶಾಹಿ ಮತ್ತು ಅದು ಪೋಷಿಸಿದ ಇಂಗ್ಲಿಷ್ ಶಿಕ್ಷಣದ ಕಾರಣದಿಂದಾಗಿ ಹೇಗೆ ಪಲ್ಲಟಗೊಂಡಿತು ಎಂಬುದನ್ನು ನೈಜ ಹಾಗೂ ಸೂಕ್ಷ್ಮಾತಿಸೂಕ್ಷ್ಮ ವಿವರಗಳೊಡನೆ ಚಿತ್ರಿಸುತ್ತದೆ. ಇಂತಹ ವಸ್ತುವನ್ನುಳ್ಳ ಕಾದಂಬರಿಯ ಬಗ್ಗೆ ನಮಗೆ ಸಾಧಾರಣವಾಗಿ ಇರುವ ನಿರೀಕ್ಷೆ-ಗ್ರಹೀತಗಳೆಂದರೆ ಪರಂಪರೆಯ ಬಗ್ಗೆ ಹಳಹಳಿಕೆ ಮತ್ತು ಬದಲಾವಣೆಯ ಬಗ್ಗೆ ವಿಷಾದ. ಆದರೆ ಕೃತಿ ಈ ನಿರೀಕ್ಷೆಗಳನ್ನು ಹುಸಿಗೊಳಿಸುತ್ತದೆ; ಪರಂಪರೆಯನ್ನು ಪ್ರತಿನಿಧಿಸುವ ರಾಮೈತಾಳರ ಪುರುಷ-ಕೇಂದ್ರಿತ ದರ್ಪ, ಸ್ತ್ರೀಯರ ಬಗ್ಗೆ ಅವರಿಗಿರುವ ನಿರ್ಲಕ್ಷ್ಯ, ಹುಂಬತನ, ಇತ್ಯಾದಿಗಳನ್ನೂ ದಾಖಲಿಸುತ್ತದೆ. ಹಾಗೆಂದರೆ ಇಂಗ್ಲಿಷ್ ಶಿಕ್ಷಣದ ಬಗ್ಗೆ ಅತ್ಯುತ್ಸಾಹವೂ ಇಲ್ಲ; ಲಚ್ಚ ಅಂತಹ ಶಿಕ್ಷಣದಿಂದ ತನ್ನ ಪರಿಸರಕ್ಕೇ ಪರಕೀಯನಾಗಿ ನಗರಜೀವನದ ಆಕರ್ಷಣೆಯಿಂದ ತನ್ನ ಬದುಕನ್ನೇ ಹಾಳುಮಾಡಿಕೊಳ್ಳುತ್ತಾನೆ. ರಾಮ ರಾಮೈತಾಳರಂತೆ ಕೃಷಿಗೆ/ಮಣ್ಣಿಗೆ ಮರಳಿದರೂ ಅದು ಇಂಗ್ಲಿಷ್ ಶಿಕ್ಷಣ ಪಡೆದ ನಂತರ ಮತ್ತು ಬಗೆಬಗೆಯ ಅನುಭವಗಳಿಂದ ಪ್ರಬುದ್ಧನಾದ ನಂತರ.

ಮೂಕಜ್ಜಿಯ..... ಸಂಕೀರ್ಣ ಸ್ವರೂಪ

ಅವಕೇಂದ್ರೀಕರಣದ ಅತಿ ಸಂಕೀರ್ಣ ಸ್ವರೂಪವನ್ನು ನಾವು **ಮೂಕಜ್ಜಿಯ ಕನಸುಗಳು** ಕಾದಂಬರಿಯಲ್ಲಿ ಕಾಣಬಹುದು. ಇಲ್ಲಿ ಲೇಖಕರು ಎದುರಿಸುವ ಎರಡು ಘಟಕಗಳೆಂದರೆ ಮಾನವಶಾಸ್ತ್ರ ಮತ್ತು ಸಾಹಿತ್ಯ. ಸಾಧಾರಣವಾಗಿ ನಾವು ಮಾನವಶಾಸ್ತ್ರವನ್ನು ವಿಜ್ಞಾನವೆಂದು, ಆದಕಾರಣ ಅದು ನೀಡುವ ತೀರ್ಮಾನಗಳು 'ಸತ್ಯ'ವೆಂದೂ ನಂಬುತ್ತೇವೆ. ಹಾಗೆಯೇ,

ಸಾಹಿತ್ಯವೆಂಬುದು 'ಕಾಲ್ಪನಿಕ'ವೆಂದೂ ಆದ್ದರಿಂದ ಅದು ವಾಸ್ತವ ಸತ್ಯಕ್ಕೆ ದೂರವೆಂದೂ ನಾವು ತಿಳಿಯುತ್ತೇವೆ. ಆದರೆ ಈ ಕೃತಿಯ ಇಬ್ಬರು ನಿರೂಪಕರಾದ ಮೂಕಜ್ಜಿ ಮತ್ತು ಸುಬ್ರಾಯ ಇವರುಗಳ ಮೂಲಕ ಈ ಸರಳೀಕೃತ ಗ್ರಹಿಕೆಗಳನ್ನು ಲೇಖಕರು ಪ್ರಶ್ನಿಸುತ್ತಾರೆ. ವಿಜ್ಞಾನವೆಂಬ ಹಣೆಪಟ್ಟಿಯಿದ್ದೂ ಮಾನವಶಾಸ್ತ್ರ ಭೂತಕಾಲದ ಬಗ್ಗೆ ಊಹೆಗಳನ್ನಾಧರಿಸಿದ ಕಾಲ್ಪನಿಕ ಕಥನವಾಗಬಹುದು (ಮೂಕಜ್ಜಿ ಪಳೆಯುಳಿಕೆಯೊಂದನ್ನು ಹಿಡಿದು ಹೇಳುವುದನ್ನು 'ಸತ್ಯ'ವೆಂದು ಹೇಗೆ ನಂಬುವುದು?); ಮತ್ತು ಪುರಾಣ ಕಥೆಗಳು, ಬತ್ತೀಸಪುತ್ಥಳಿ-ಆಲಿಬಾಬಾ ಕಥೆಗಳು, ಅಂಗಳ-ದುಗ್ಗುವಿನಂತಹ ಕಥೆಗಳನ್ನೂ ಒಳಗೊಂಡಂತೆ ಸಾಹಿತ್ಯವೂ ಕೂಡ ವಾಸ್ತವ ಸತ್ಯಕ್ಕೆ ಹತ್ತಿರವಾಗಿರಬಹುದು; ಎಂದರೆ, 'ವಾಸ್ತವ ಸತ್ಯ'ವೆಂಬುದೂ ನಾವು ಕಟ್ಟಿಕೊಳ್ಳುವ ಒಂದು ಸಾಪೇಕ್ಷ ಪರಿಕಲ್ಪನೆ ಎಂದು ಕೃತಿ ದರ್ಶಿಸುತ್ತದೆ.

ನಾವು ಕಟ್ಟಿದ ಸ್ವರ್ಗ, ಮೂಜನ್ಮ, ಗೊಂಡಾರಣ್ಯ ಇತ್ಯಾದಿ ಕಾರಂತರ ರಾಜಕೀಯ ಕಾದಂಬರಿಗಳು ಅನೇಕ ನೆಲೆಗಳಲ್ಲಿ ಸೋಲುತ್ತವೆ; ಮತ್ತು ಇವುಗಳ ಸೋಲಿನ ಕಾರಣವೂ ಅರ್ಥಪೂರ್ಣವಾಗಿದೆ. ಈ ಕಾದಂಬರಿಗಳ ಸೋಲಿಗೆ ಇಲ್ಲಿ ಕಾರಂತರು ಸಂಪ್ರದಾಯವಾದಿಗಳಂತೆ ಸಮಾಜವನ್ನು ನೋಡುತ್ತಾರೆ ಎಂಬುದು ಕಾರಣವಲ್ಲ; ಕಾರಂತರ ಉಗ್ರ ವ್ಯಕ್ತಿವಾದ ಅವರನ್ನು ಇಲ್ಲಿ ದಾರಿ ತಪ್ಪಿಸುತ್ತದೆ., ವ್ಯಕ್ತಿವಾದದ ಒಂದು ಮುಖ್ಯ ಗ್ರಹೀತವೆಂದರೆ, ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ವಿಶಿಷ್ಟ 'ಸತ್ವ' (essence) ಇರುತ್ತದೆ; ಈ ಸತ್ವವೇ ಆ ವ್ಯಕ್ತಿಯನ್ನು ಇತರರಿಂದ ಬೇರ್ಪಡಿಸುತ್ತದೆ; ಮತ್ತು ಎಲ್ಲಾ ಬಗೆಯ ಸಿದ್ಧಾಂತಗಳೂ ಇಂತಹ 'ಸತ್ವ'ವನ್ನು ನಾಶ ಮಾಡುತ್ತವೆ. ಈ ಕಾರಣದಿಂದ ಕಾರಂತರು ಯಾವ ಒಂದು ತಾತ್ವಿಕ ಸಿದ್ಧಾಂತಕ್ಕೂ ಬದ್ಧರಾಗಿ ರಲಿಲ್ಲ; ಮತ್ತು ಒಂದು ಬಗೆಯ ಸಾಮಾಜಿಕ-ರಾಜಕೀಯ ಸಿದ್ಧಾಂತಕ್ಕೆ ಬದ್ಧರಾದ ಕಮ್ಯೂನಿಸ್ಟರು, ಕಾರ್ಮಿಕ ನಾಯಕರು, ಎಡಪಂಥೀಯ ಚಿಂತರು, ಮುಂತಾದವರೆಲ್ಲರೂ ಈ ಕೃತಿಗಳಲ್ಲಿ ವಿಡಂಬನೆಗೆ ಗುರಿಯಾಗುತ್ತಾರೆ ಮತ್ತು ಭೂಸುಧಾರಣೆ ರಾಷ್ಟ್ರೀಕರಣ ಇತ್ಯಾದಿಗಳು ಅವರಿಗೆ ಅರ್ಥಹೀನವಾಗಿ ಕಾಣುತ್ತವೆ. ವ್ಯಕ್ತಿವಾದದ ದುರಂತವೆಂದರೆ ಅದು ವೈಯಕ್ತಿಕ ಮತ್ತು ಸಾರ್ವತ್ರಿಕ ನೈತಿಕತೆ (public and private morality) ಇವುಗಳ ನಡುವೆ ವ್ಯತ್ಯಾಸವನ್ನು ಕಲ್ಪಿಸುವುದಿಲ್ಲ. ವೈಯಕ್ತಿಕ ಹಿತಗಳ ಮೊತ್ತ ಸಾರ್ವತ್ರಿಕ ಹಿತವಾಗಬೇಕಿಲ್ಲ ಎಂಬ ಸತ್ಯವನ್ನು ಅದು ಅಲಕ್ಷಿಸುತ್ತದೆ.

'ಸಾಮಾಜಿಕ ಋಣ'ದ ಪರಿಕಲ್ಪನೆ

ಕಾರಂತರು ತಮ್ಮ ಬದುಕಿನಲ್ಲಿ ಪಾಲಿಸಿದ ಮತ್ತು ಕೃತಿಗಳಲ್ಲಿ ಎತ್ತಿ ಹಿಡಿದ ಮಹತ್ವದ ಮೌಲ್ಯಗಳಲ್ಲಿ ಒಂದೆಂದರೆ 'ಸಾಮಾಜಿಕ ಋಣ'ದ ಪರಿಕಲ್ಪನೆ. ನಾವು ಸಮಾಜದಿಂದ ಎಷ್ಟು ಪಡೆಯುತ್ತೇವೋ ಅದಕ್ಕಿಂತ ಹೆಚ್ಚು ನಾವು ಸಮಾಜಕ್ಕೆ ಮರಳಿಸಬೇಕು ಎಂಬ ತತ್ವ. ಈ ಕಾರಣದಿಂದಲೇ ಅವರ ಅನೇಕ ಕಾದಂಬರಿಗಳ ಧನಾತ್ಮಕ ಪಾತ್ರಗಳೆಂದರೆ ಸರಸೋತಿ, ಪಾರೋತಿ, ಕಾವೇರಮ್ಮ ಇತ್ಯಾದಿ ಅಜ್ಜಿಯರು. ಏಕೆಂದರೆ ಇವರೆಲ್ಲರೂ ಸಮುದ್ರದ ದಂಡೆಯ ಕಲ್ಲುಗಳಂತೆ ಅನವರತ ಬದುಕಿನ ಅಲೆಗಳಿಗೆ ಸಿಕ್ಕಿ, ಅವುಗಳ ಪೆಟ್ಟುಗಳಿಂದ ತಮ್ಮೆಲ್ಲಾ ಓರೆಕೋರೆಗಳನ್ನು ಕಳೆದುಕೊಂಡು ನಯವಾದ, ಯಾವ ಕಲ್ಮಷವೂ ಇಲ್ಲದ,. ದುಂಡನೆಯ ಗುಮಚಿ ಕಲ್ಲುಗಳಾಗುತ್ತಾರೆ. ಇಂದು ಕಾರಂತರು ನಮ್ಮೊಡನಿಲ್ಲ.

ಆದರೆ ಅವರ 'ಬಾಳ್ವೆ'ಯ ಮತ್ತು ಆಗಾಧ ವಾಙ್ಮಯದ 'ಬೆಳಕು' ನಮ್ಮೊಡನಿದೆ. ಇಂದಿನ ಗೊಂದಲಕರ ಸನ್ನಿವೇಶದಲ್ಲಿ ನಮಗದು ಉಪಯುಕ್ತ ದಾರಿ ದೀಪವಾಗಬಹುದು. ●

(ಸುಧಾ ಸಾಭಾರ)

ವಾಚಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ ಹೊಸ ಶತಮಾನದ, ಹೊಸ ಸಹಸ್ರ ಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/- ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/- ರೂ.ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

- ಪ್ರಕಾಶಕರು

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

KA-SKMND-470-2003-05
Regd. No. KAR/KAN/2000/3820
Val 04 Issue No : 3

ತೆರೆದ-ಅಂಚೆ

To,

____

____

__________ __________

____

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, (Regd.) Melkote. Dist- Mandya - 571 431
Phone : 08236-298754 E-mail: janapada@yahoo.com

COM Prints, Mysore ☎ 2460936 Cell : 9448323177